
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಆಗಸ್ಟ್ 12, 2009 ರೂ. 12/-


ಬ್ಯಾರಿ ಅಕಾಡೆಮಿಯಲ್ಲಿ ಚೆಡ್ಡಿ ರಾಜಕೀಯ



ರತಿವಿಜ್ಞಾನಿಗೆ ಯಡ್ಡಿ ಸೈಟು



ಮಲೆನಾಡು: ಬಜರಂಗಿ ಸುರೇಶ ಸೆಕ್ಸ್ ಸಿಡಿ ಮಾರಿದ



ಬುಲೆಟ್ ರವಿ ಹಂತಕರ ಬಿಜೆಪಿ ಲಿಂಕ್!

ಉಪಚುನಾವಣೆ





ಗೋವಿಂದರಾಜನಗರ ವಿಜಯಕೃಷ್ಣನ ಎಂಟ್ರಿಗೆ ಬೆರಗುಟ್ಟಿದ ಸೋಮಣ್ಣ

ಚಿತ್ತಾಪೂರ ಖರ್ಗೆ ಮಗನೊಂದಿಗೆ ಕಮಲುನಾಯಕನ ಕುಸ್ತಿ

ಕೊಳ್ಳೇಗಾಲ: ಮೂವರು ಮಾಜಿಗಳ ಎದುರು ಒಬ್ಬ ಐಪಿಎಸ್!

ರಾಮನಗರ: ಲಿಂಗಪ್ಪ ಎದುರು ಜೆಡಿಎಸ್ ಡೆಮ್ಮಿ



ಮುಂದುವರೆದ ಶ್ರೀಲಂಕಾ ತಮಿಳರ ನರಮೇಧ

ಈ ‘ಯುದ್ಧ’ಕ್ಕೆ ಸಾಕ್ಷಿಗಳಿಲ್ಲ!

ಯಾವುದೇ ಯುದ್ಧದಲ್ಲಿ ಇಬ್ಬರು ಬಂದೂಕುಧಾರಿಗಳಿರುತ್ತಾರೆ. ಯಾರು ಯಾವ ಉದ್ದೇಶಕ್ಕೆ ಬಂದೂಕು ಹಿಡಿದಿರುತ್ತಾರೆ ಎಂಬುದರ ಆಧಾರದ ಮೇಲೆ ಆ ಯುದ್ಧವನ್ನು ನ್ಯಾಯಯುತವೋ ಅಥವಾ ಅನ್ಯಾಯಯುತವೋ ಎಂದು ನಮ್ಮ ನಮ್ಮ ದೃಷ್ಟಿಕೋನದ ಆಧಾರದ ಮೇಲೆ ವರ್ಗೀಕರಿಸಿಕೊಳ್ಳುತ್ತೇವಾದರೂ ಎರಡೂ ಪಕ್ಷಗಳು ಬಂದೂಕುಧಾರಿಗಳಾಗದೆ ಅದನ್ನು ಯುದ್ಧ ಎಂದು ಕರೆಯಲಾಗುವುದಿಲ್ಲ. ಆದರೆ ನಿರಾಯುಧ ಅಮಾಯಕ ಪ್ರಜೆಗಳನ್ನು ಕಾಯಬೇಕಾದ ಸರ್ಕಾರವೇ ಅವರ ಮಾನ, ಪ್ರಾಣ ಮತ್ತು ಘನತೆಗಳ ಮೇಲೆ ಏಕಪಕ್ಷೀಯವಾಗಿ ನಡೆಸುವ ಸೈನಿಕ ಆಕ್ರಮಣವನ್ನು ಏನೆಂದು ಕರೆಯಬೇಕು? ತಮ್ಮ ಕಣ್ಣಮುಂದೆಯೇ ಈ ಬಗೆಯ ಸದ್ದಿಲ್ಲದ ನರಮೇಧ ನಡೆಯುತ್ತಿದ್ದರೂ ಗಾಂಧಾರಿ ಕುರುಡನ್ನೂ, ಧೃತರಾಷ್ಟ್ರ ಬೆಂಬಲವನ್ನೂ ನೀಡುತ್ತಿರುವ ‘ನಾಗರಿಕ’ ಸಮಾಜವನ್ನು ಏನೆಂದು ಕರೆಯಬೇಕು?


ಕಳೆದ ಮೇ 18ರಂದು ಮುಲ್ಲತ್ತೀವು ಅಡವಿಗಳಲ್ಲಿ ಸೆರೆಸಿಕ್ಕ ಪ್ರಭಾಕರನ್‌ನನ್ನು ಹತ್ಯೆ ಮಾಡಿದ ನಂತರ ತಮ್ಮ ದೇಶದಲ್ಲಿ 25 ವರ್ಷಗಳಿಂದ ನಡೆಯುತ್ತಿದ್ದ ಅಂತರ್ಯುದ್ಧ ಕೊನೆಗೊಂಡಿತೆಂದು ಶ್ರೀಲಂಕಾದ ಅಧ್ಯಕ್ಷ ರಾಜಪಕ್ಸೆ ಘೋಷಿಸಿದರೂ ಅವರ ಸರ್ಕಾರ ಆ ಯುದ್ಧವನ್ನು ನಿಲ್ಲಿಸಿಲ್ಲ. ಎಲ್‌ಟಿಟಿಇ ಇರುವವರೆಗೆ ಕನಿಷ್ಠ ಪಕ್ಷ ತಮಿಳರ ಮಾನ ಮತ್ತು ಪ್ರಾಣಗಳನ್ನು ಮಾತ್ರ ಬಲಿತೆಗೆದುಕೊಳ್ಳುತ್ತಿದ್ದ ಶ್ರೀಲಂಕಾ ಸರ್ಕಾರ ಎಲ್‌ಟಿಟಿಇಯ ನಿರ್ಮೂಲನದೊಂದಿಗೆ ತಮಿಳರ ಅಸ್ತಿತ್ವ ಮತ್ತು ಅಸ್ಮಿತೆಗಳ ಮೇಲೆಯೇ ಮಾರಣಾಂತಿಕ ಯುದ್ಧ ಪ್ರಾರಂಭಿಸಿದೆ.

ಎಲ್‌ಟಿಟಿಇಯ ಸೋಲು ಮತ್ತು ನಿರ್ನಾಮದೊಂದಿಗೆ ಅಳಿದುಳಿದ ತಮಿಳು ಸಂಘಟನೆಗಳು ಸಂಪೂರ್ಣವಾಗಿ ಶರಣಾಗಿವೆ ಅಥವಾ ಶ್ರೀಲಂಕಾ ಸರ್ಕಾರದ ಪರವಾಗಿ ತಮಿಳರ ಮೇಲೆಯೇ ಬೇಹುಗಾರಿಕೆ ನಡೆಸುತ್ತಿವೆ. ಶ್ರೀಲಂಕಾ ಪೊಲೀಸು, ಅರೆಸೇನಾ ಪಡೆಗಳು ಹಾಗೂ ಅದರ ಸಿಂಹಳೀಯರ ಗೂಂಡಾ ಗುಂಪುಗಳು ಶ್ರೀಲಂಕಾ ಸರ್ಕಾರದ ನೀತಿಗಳನ್ನು ಟೀಕಿಸುವ ಸಿಂಹಳೀ ಪತ್ರಕರ್ತರನ್ನು ಮತ್ತು ನಾಯಕರನ್ನು ರಾತ್ರೋರಾತ್ರಿ ಕೊಂದುಹಾಕುತ್ತಿವೆ. ಕಳೆದ ಎರಡು ತಿಂಗಳಲ್ಲಿ 18ಕ್ಕೂ ಹೆಚ್ಚು ಪತ್ರಕರ್ತರನ್ನು ಮತ್ತು ವಿರೋಧೀ ನಾಯಕರನ್ನು ಹೀಗೆ ಕೊಂದುಹಾಕಲಾಗಿದೆ. ಎಲ್ಲ ಮಾಧ್ಯಮಗಳ ಮೇಲೂ ಸರ್ಕಾರದ ವಿರುದ್ಧ ಏನನ್ನೂ ವರದಿ ಮಾಡದಂತೆ ಸೆನ್ಸಾರ್ ವಿಧಿಸಲಾಗಿದೆ. ಹೀಗೆ ಶ್ರೀಲಂಕಾದ ಫ್ಯಾಸಿಸ್ಟ್ ರಾಜಪಕ್ಸೆ ಸರ್ಕಾರ ತಮಿಳರು ಮತ್ತು ಸಾಮಾನ್ಯ ಸಿಂಹಳೀಯರಿಬ್ಬರಿಗೂ ಶತ್ರುವಾಗಿದೆ. "ಅವರು ನಮ್ಮನ್ನು ಹಾಡುಹಗಲಲ್ಲೇ ಹುಡುಕಿಬರುತ್ತಾರೆ. ನಿಮ್ಮನ್ನು ನಡುರಾತ್ರಿಯಲ್ಲಿ ಬೇಟೆಯಾಡುತ್ತಾರೆ. ವ್ಯತ್ಯಾಸ ಏನು ಇಲ್ಲ" ಎಂದು ದೇಶಭ್ರಷ್ಟ ತಮಿಳು ವಿದ್ವಾಂಸ ಶಿವಾನಂದನ್ ನೀಡಿದ ಎಚ್ಚರಿಕೆ ಈಗ ನಿಜವಾಗುತ್ತಿದೆ.

ಭಾರತವನ್ನೂ ಒಳಗೊಂಡಂತೆ ತಥಾಕಥಿತ ಅಂತರರಾಷ್ಟ್ರೀಯ ಸಮುದಾಯವಂತೂ ಶ್ರೀಲಂಕಾದ ಸಂಪನ್ಮೂಲಗಳ ಮೇಲೆ ಕಣ್ಣಿಟ್ಟು ಫ್ಯಾಸಿಸ್ಟ್ ರಾಜಪಕ್ಸೆ ಸರ್ಕಾರ ನಡೆಸುತ್ತಿರುವ ಈ ಭೀಕರ ನರಮೇಧಕ್ಕೆ ಕುಮ್ಮಕ್ಕನ್ನು ಮತ್ತು ಸಹಾಯವನ್ನೂ ಮಾಡುತ್ತಿವೆ. ಮತ್ತೊಂದು ಕಡೆ ಭಾರತದ ಮಾಧ್ಯಮಗಳು ಅದರಲ್ಲೂ ‘ದಿ ಹಿಂದೂ’ ನಂತ ಸೋ-ಕಾಲ್ಡ್ ಪ್ರಗತಿಪರ ಪತ್ರಿಕೆ ಮತ್ತು ಅದರ ಸಂಪಾದಕ ಎನ್. ರಾಮ್‌ನಂಥವರು ಶ್ರೀಲಂಕಾ ಸರ್ಕಾರದ ಸ್ಟೇಟ್ ಗೆಸ್ಟ್ ಆಗಿ ಶ್ರೀಲಂಕಾ ಮಿಲಿಟರಿ ಕರೆದುಕೊಂಡ ಹೋದ ಜಾಗಗಳಿಗೆ ಮಾತ್ರ ಭೇಟಿ ಕೊಟ್ಟು "ಶ್ರೀಲಂಕಾ ಸರ್ಕಾರ ನಿರಾಶ್ರಿತ ತಮಿಳರಿಗೆ ಜಗತ್ತಿನಲ್ಲೇ ಅತ್ಯುತ್ತಮವಾದ ಪುನರ್ವಸತಿ ಒದಗಿಸಿದೆ" ಎಂದು ಸರ್ಟಿಫಿಕೇಟ್ ಕೊಡುತ್ತಾ ಶ್ರೀಲಂಕಾ ಸರ್ಕಾರದ ಕರಾಳಮುಖಕ್ಕೆ ಮಾನವೀಯ ಮುಖವಾಡ ತೊಡಿಸುತ್ತಿದ್ದಾರೆ. (ಎನ್. ರಾಮ್ ಅವರಿಗೆ ಈ ಹಿಂದೆ ಶ್ರೀಲಂಕಾ ಸರ್ಕಾರ "ಶ್ರೀಲಂಕಾ ರತ್ನ" ಬಿರುದನ್ನು ದಯಪಾಲಿಸಿದೆ.)

> ಯಾವುದೇ ಯುದ್ಧಕ್ಕೆ ಇರುವ ಪ್ರತ್ಯಕ್ಷ ಸಾಕ್ಷಿಗಳನ್ನೆಲ್ಲಾ ಒಂದು ಫ್ಯಾಸಿಸ್ಟ್ ಸರ್ಕಾರ ಕೊಂದು ಹಾಕಬಹುದು ಅಥವಾ ಖರೀದಿಸಬಹುದು. ಆದರೆ ಅವೆಲ್ಲವೂ ತಾತ್ಕಾಲಿಕ. ಏಕೆಂದರೆ ಒಂದು ಸಮಾಜದ ಅಂತಸಾಕ್ಷಿ ಮತ್ತು ನ್ಯಾಯಪ್ರಜ್ಞೆ ಎಲ್ಲಿಯವರೆಗೆ ಜಾಗೃತವಾಗಿರುತ್ತದೋ ಅಲ್ಲಿಯವರೆಗೆ ಫ್ಯಾಸಿಸಂನ ವಿಜಯ ತಾತ್ಕಾಲಿಕ. ಆದರೆ ಈ ಯುದ್ಧ ಸಿಂಹಳಿಯ ಮತ್ತು ಭಾರತೀಯ ಸಮಾಜದ ಅಂತಸಾಕ್ಷಿಯನ್ನೇ ಕೊಂದುಹಾಕುತ್ತಿರುವಂತೆ ಕಾಣುತ್ತಿದೆ. ಒಂದು ವೇಳೆ ಯುದ್ಧದಲ್ಲಿ ರಾಜಪಕ್ಸೆ ಸರ್ಕಾರ ಗೆದ್ದಲ್ಲಿ ಆಗ ಸೋಲುವುದು ಶ್ರೀಲಂಕಾ ತಮಿಳರು ಮಾತ್ರವಲ್ಲ. ಅದು ಮಾನವತೆಯ, ಪ್ರಜಾತಂತ್ರದ ಸೋಲಾಗಿರುತ್ತದೆ.





ಒಟ್ಟಿನಲ್ಲಿ ಈಗ ಶ್ರೀಲಂಕಾ ಸರ್ಕಾರ ಅಮಾಯಕ ತಮಿಳು ಸಮುದಾಯದ ಮೇಲೆ ನಡೆಸುತ್ತಿರುವ ಏಕಪಕ್ಷೀಯ ಯುದ್ಧಕ್ಕೆ ಸಾಕ್ಷಿಗಳೇ ಇಲ್ಲದಂತಾಗಿದೆ. ಹೀಗಿದ್ದರೂ ಕೆಲವು ಸಿಂಹಳೀಯ ಮತ್ತು ವಿದೇಶೀ ಪತ್ರಕರ್ತರು ಹಾಗೂ ವಿಶ್ವಸಂಸ್ಥೆಯ ಕೆಲವು ಸಂಘಟನೆಗಳು ಈ "ಸಾಕ್ಷಿಯಿಲ್ಲದ ಯುದ್ಧ"ದ ಬಗ್ಗೆ ಹಲವಾರು ಮಾಹಿತಿಗಳನ್ನು ಹೊರಹಾಕುತ್ತಿವೆ.

ತಮಿಳು ಸಮುದಾಯ ಕುರಿತಂತೆ ಶ್ರೀಲಂಕಾ ಸರ್ಕಾರ ಘೋಷಿಸಿರುವ ಕೆಲವು ಯೋಜನೆಗಳು ಎಷ್ಟು ಶೀತಲ ಕ್ರೌರ್ಯದಿಂದ ಕೂಡಿವೆಯೆಂದರೆ ಹಿಟ್ಲರ್‌ಗೆ ಕೂಡಾ ಮುಜುಗರವಾಗುತ್ತದೆ. ಈ ಎಲ್ಲಾ ಯೋಜನೆಗಳ ಮೂಲ ಧಾತು ಮತ್ತೊಮ್ಮೆ ಎಲ್‌ಟಿಟಿಇಯಂಥ ತಮಿಳು ವಿಮೋಚನಾವಾದಿ ಸಂಘಟನೆ ಹುಟ್ಟದಿರುವಂತೆ ಮಾಡು ವುದು ಮತ್ತು ತಮಿಳು ಜನಾಂಗದ ಅಸ್ತಿತ್ವವನ್ನು ಮತ್ತು ಅವರು ಒಗ್ಗೂಡಿ ಹೋರಾಟ ಮಾಡಲು ಬೇಕಾದ ಭೌಗೋಳಿಕ ಮತ್ತು ಭಾವನಾತ್ಮಕ ತಳಹದಿಯನ್ನೇ ನಿರ್ನಾಮ ಮಾಡುವುದಾಗಿದೆ. ಅಂದರೆ ಶ್ರೀಲಂಕಾ ಸರ್ಕಾರ ಯೋಜಿಸುತ್ತಿರುವುದು ಕೇವಲ ನರಮೇಧವಲ್ಲ, ಒಂದು ಜನಾಂಗದ ನಿರ್ನಾಮ!

ತಮಿಳು ಪ್ರಾಂತ್ಯವಲ್ಲ, ಕೇವಲ ಉತ್ತರ ಪ್ರಾಂತ್ಯ!: ಶ್ರೀಲಂಕಾ ತಮಿಳರು ಸ್ವಾತಂತ್ರ್ಯ ಬಂದಾಗಿನಿಂದಲೂ ಹೋರಾಡುತ್ತಾ ಬಂದಿರುವ ಬಹುಮುಖ್ಯ ಬೇಡಿಕೆಯೆಂದರೆ ಉತ್ತರ ಮತ್ತು ತಮಿಳು ಪ್ರಾಂತ್ಯಗಳ ವಿಲೀನ ಮತ್ತು ಅದಕ್ಕೆ ಸ್ವಾಯತ್ತತೆ. ಇದು ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ಮುಂದಿಡಲಾದ ಭಾಷಾವಾರು ರಾಜ್ಯಗಳ ನಿರ್ಮಾಣ ಅಥವಾ ಕರ್ನಾಟಕದ ಏಕೀಕರಣದ ಆಗ್ರಹಗಳಷ್ಟೇ ನ್ಯಾಯೋಚಿತವಾದ ಮತ್ತು ಪ್ರಜಾಸತ್ತಾತ್ಮಕವಾದ ಬೇಡಿಕೆ. ಆದರೆ ಇತಿಹಾಸದುದ್ದಕ್ಕೂ ಈ ಬೇಡಿಕೆಯನ್ನು ಶ್ರೀಲಂಕಾ ಸರ್ಕಾರ ನಿರಾಕರಿಸುತ್ತಲೇ ಬಂದಿದೆ.

ಈಗ ಶ್ರೀಲಂಕಾ ಸರ್ಕಾರ ತಮಿಳು ಪ್ರಾಂತ್ಯಗಳ ವಿಲೀನವಿರಲಿ ತಮಿಳು ಪ್ರಾಂತ್ಯಗಳೆಂಬ ಪರಿಕಲ್ಪನೆಯನ್ನೇ ಅಳಿಸಿಬಿಡಲು ನಿರ್ಧರಿಸಿದೆ. ಯುದ್ಧಮುಗಿದ ತರುಣದಲ್ಲೇ ರಾಜಪಕ್ಸೆ "ಇನ್ನು ಮುಂದೆ ನಮ್ಮ ದೇಶದಲ್ಲಿ ಕೇವಲ



ದೇಶಭಕ್ತ ಶ್ರೀಲಂಕನ್ನರು ಇರುತ್ತಾರೆ. ಸಿಂಹಳೀಯರೂ ಅಲ್ಲ, ತಮಿಳರೂ ಅಲ್ಲ" ಎಂದು ಘೋಷಿಸಿದ. ಆದೇಸ್ವರದಲ್ಲಿ ‘ಹಿಂದೂ’ ಪತ್ರಿಕೆಗೆ (ಮಾತ್ರ!) ಕೊಟ್ಟ ಸುದೀರ್ಘ ಸಂದರ್ಶನದಲ್ಲಿ "ಒಕ್ಕೂಟ ಮಾದರಿ ಆಡಳಿತ ಪದ್ಧತಿ ಶ್ರೀಲಂಕಾದಲ್ಲಿ ಸಾಧ್ಯವೇ ಇಲ್ಲ. ನಮ್ಮದು ಏಕಸತ್ತಾತ್ಮಕ ಆಡಳಿತ ಪದ್ಧತಿ ಮತ್ತು ಇನ್ನು ಮುಂದೆ ಸಿಂಹಳಿಯ ಮತ್ತು ತಮಿಳು ಎಂಬ ಭಾಷಿಕ ಆಧಾರದ ಪ್ರಾಂತ್ಯ ವಿಭಜನೆಯೂ ಇರುವುದಿಲ್ಲ" ಎಂದು ಘೋಷಿಸಿದ. ಆದರೆ ರಾಜಪಕ್ಸೆ ಸರ್ಕಾರಕ್ಕೆ ಇದಕ್ಕಿಂತಲೂ ಹೀನಾಯವಾದ ಯೋಜನೆಗಳಿವೆ ಎಂಬುದು ಈಗ ಸ್ಪಷ್ಟವಾಗತೊಡಗಿದೆ.

ಯುದ್ಧದ ಅಂತಿಮ ದಿನಗಳಲ್ಲಿ ಎಲ್‌ಟಿಟಿಇಯ ಪ್ರದೇಶಗಳಿಂದ ಯುದ್ಧ ಸಂತ್ರಸ್ತರಾದ 1,80,000ಕ್ಕೂ ಹೆಚ್ಚು ತಮಿಳರನ್ನು ಶ್ರೀಲಂಕಾದ ಪೂರ್ವ ಭಾಗದ ವನ್ನಿ ಪ್ರಾಂತ್ಯದಲ್ಲಿ ತರುಬಿತು. ಅದೇ ಸಮಯದಲ್ಲಿ ಮನ್ನಾರ್‌ನಿಂದ ಹಿಡಿದು ಮುಲ್ಲತ್ತೀವುವರೆಗೆ ತಮಿಳರು ವಾಸ ಮಾಡುತ್ತಿದ್ದ ಎಲ್ಲಾ ಪ್ರದೇಶಗಳನ್ನು ಖಾಲಿಗೊಳಿಸಲಾಯಿತು. ಯುದ್ಧ ಮುಗಿಯುವ ವೇಳೆಗೆ ತಮಿಳು ಪ್ರದೇಶಗಳಿಂದ ಒಕ್ಕಲೆಬ್ಬಿಸಲಾದ 3 ಲಕ್ಷಕ್ಕೂ ಹೆಚ್ಚು ಜನರನ್ನು ವವುನಿಯಾ ಪ್ರಾಂತ್ಯದಲ್ಲಿ ನಿರ್ಮಿಸಲಾದ ಶಿಬಿರಗಳಲ್ಲಿ ಪ್ರಾಣಿಗಳಂತೆ ಒಟ್ಟಲಾಯಿತು.

ಈಗ ಯುದ್ಧ ಮುಗಿದ ನಂತರ ಅವರನ್ನು ಅವರವರ ಜಾಗಗಳಿಗೆ ವಾಪಸ್ ಕಳಿಸಬೇಕಲ್ಲವೇ? ರಾಜಪಕ್ಸೆ ಸರ್ಕಾರದ ಅಸಲಿ ಉದ್ದೇಶ ಬಯಲಾಗುವುದು ಇಲ್ಲೇ. ಈ ಯುದ್ಧ ಪ್ರಾರಂಭವಾದ ಸಮಯದಲ್ಲೇ ಶ್ರೀಲಂಕಾ ಸರ್ಕಾರ ಹಲವು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಯುದ್ಧದಲ್ಲಿ ನಿರಾಶ್ರಿತರಾಗುವವರಿಗೆ ತಾತ್ಕಾಲಿಕ ಪುನರ್ ವಸತಿಯನ್ನು ಒದಗಿಸಲು ಶಿಬಿರಗಳನ್ನು ಕಟ್ಟಲು ಸಹಾಯ ಮಾಡ ಬೇಕೆಂದು ವಿನಂತಿ ಮಾಡಿಕೊಂಡಿತ್ತು. ಅದು ಮೂರು ಲಕ್ಷ ಜನರಿಗೆ! ಈ ಬಾಬತ್ತಿಗೆ ವಿದೇಶಿ ಸಹಾಯ ಬಂದಾಗ ಅವರಿಗೆ ಕಟ್ಟಲು ಹೇಳಿದ್ದು ತಾತ್ಕಾಲಿಕ ಪುನರ್‌ವಸತಿ ಕೇಂದ್ರವಲ್ಲ, ಬದಲಿಗೆ ಹೆಚ್ಚೂಕಡಿಮೆ ಶಾಶ್ವತವಾದ ಪುನರ್‌ವಸತಿ ಕೇಂದ್ರಗಳನ್ನು! ಹೀಗಾಗಿ ರಾಜಪಕ್ಸೆ ಸರ್ಕಾರಕ್ಕೆ ತಮಿಳು ನಿರಾಶ್ರಿತರನ್ನು ವಾಪಸ್ ಅವರವರ ಪ್ರದೇಶಗಳಿಗೆ ಕಳಿಸುವ ಉದ್ದೇಶವೇ ಇರಲಿಲ್ಲ! ಆದರೆ ಎನ್.ರಾಮ್‌ಗೆ ನೀಡಿರುವ ಸಂದರ್ಶನದಲ್ಲಿ ರಾಜಪಕ್ಸೆ ಕೊಟ್ಟಿರುವ ಸಬೂಬೇನೆಂದರೆ "ತಮಿಳು ಪ್ರದೇಶದಲ್ಲಿ ಪ್ರತಿ ಇಂಚಿನಲ್ಲೂ ಎಲ್‌ಟಿಟಿಇ ಲ್ಯಾಂಡ್‌ಮೈನ್ ಹುದುಗಿಸಿಟ್ಟಿದೆ. ಆದ್ದರಿಂದ ಎಲ್ಲಿಯತನಕ ಅವೆಲ್ಲವನ್ನೂ ಸಂಪೂರ್ಣವಾಗಿ ಮುಕ್ತಗೊಳಿಸುವುದಿಲ್ಲವೋ ಅಲ್ಲಿಯವರೆಗೆ ಅವರನ್ನು ವಾಪಸ್ ಕಳಿಸಲು ಸಾಧ್ಯವಿಲ್ಲ".

ಆದರೆ ಸತ್ಯ ಪಕ್ಷಪಾತಿಗಳಾದ ಯಾರಿಗೇ ಆದರೂ ಆತ ನೀಡಿರುವ ಕಾರಣವನ್ನು ಒಪ್ಪಿಕೊಳ್ಳುವುದು ಕಷ್ಟ. ಭಾರತ ಸರ್ಕಾರದ ಅಂದಾಜಿನ ಪ್ರಕಾರವೇ ಅಬ್ಬಬ್ಬ ಎಂದರೆ ಶೇ.2-3ರಷ್ಟು ಪ್ರದೇಶದಲ್ಲಿ ಮಾತ್ರ ಲ್ಯಾಂಡ್ ಮೈನ್‌ಗಳಿರಬಹುದು. ಅಸಲಿಗೆ ಶ್ರೀಲಂಕಾ ಸರ್ಕಾರದ ಉದ್ದೇಶವೇ ಬೇರೆಯಾಗಿದೆ. ಈ ಹಿಂದೆಯೇ ಹೇಳಿದಂತೆ ರಾಜಪಕ್ಸೆ ಸರ್ಕಾರ ಎಲ್ಲಾ ತಮಿಳು ಪ್ರದೇಶ ಗಳಲ್ಲೂ ‘ಮಿಕ್ಸೆಡ್ ಪಾಪ್ಯುಲೇಷನ್- ಮಿಶ್ರ ಜನವಸತಿ’ ನೀತಿಯನ್ನು ಜಾರಿಗೆ ತರುತ್ತಿದೆ. ಈ ಯೋಜನೆ ರೂಪುಗೊಳ್ಳುವ ಮುನ್ನ ರಕ್ಷಣಾ ಕಾರ್ಯದರ್ಶಿ ಗೋಟ್ಬಾಯೇ ರಾಜಪಕ್ಸೆ ಹತ್ತಕ್ಕೂ ಹೆಚ್ಚು ಬಾರಿ ಇಸ್ರೇಲ್ ಪ್ರವಾಸ ಕೈಗೊಂಡು ಅಲ್ಲಿ ಜನಾಂಗೀಯವಾದಿ ಇಸ್ರೇಲಿ ಸರ್ಕಾರ ಅನುಸರಿಸುತ್ತಿರುವ ಈ ಕ್ರೂರ ಜನಾಂಗ ಮೂಲೋತ್ಪಾಟನಾವಾದಿ ಮಿಶ್ರ ಜನವಸತಿ ನೀತಿಯನ್ನು ಅಧ್ಯಯನ ಮಾಡಿ ಸಲಹೆ ತೆಗೆದುಕೊಂಡು ಬಂದಿದ್ದ. ಲ್ಯಾಂಡ್‌ಮೈನ್ ಹೆಸರಲ್ಲಿ ಸರ್ಕಾರ ಸಮಯ ತೆಗೆದು ಕೊಳ್ಳುತ್ತಿರುವುದು ಈ ಕಾರಣಕ್ಕಾಗಿಯೇ!

"ಮಿಶ್ರ ಜನವಸತಿ"ಯೆಂಬ ಜನಾಂಗ ಹತ್ಯೆ ಇಡೀ ಪುನರ್‌ವಸತಿ ಯೋಜನೆಯ ಅನುಷ್ಠಾನ ಮತ್ತು ಉಸ್ತುವಾರಿಯನ್ನು ನೋಡಿಕೊಳ್ಳಲು 18 ಜನರ ಸಮಿತಿಯೊಂದು ನೇಮಕವಾಗಿದೆ. ಅದರ ಅಧ್ಯಕ್ಷ ರಾಜಪಕ್ಸೆಯ ಹಿರಿಯ ಸಹೋದರ ಬಸಿಲ್ ರಾಜಪಕ್ಸೆ, ಮತ್ತೊಬ್ಬ ಪ್ರಮುಖ ಸದಸ್ಯ ಆತನ ಕಿರಿ ಸಹೋದರ ಮತ್ತು ರಕ್ಷಣಾ ಕಾರ್ಯದರ್ಶಿ ಗೋಟ್ಬಾಯೆ ರಾಜಪಕ್ಸೆ, ಒಟ್ಬಾರೆ ಉಸ್ತುವಾರಿಯ ಮುಖ್ಯಸ್ಥ ಕ್ರೂರ ಸೇನಾಧಿಕಾರಿ ಯೆಂದೇ ಖ್ಯಾತನಾಗಿರುವ ಮೇಜರ್ ಜನರಲ್ ಚಂದ್ರಸಿರಿ. ಉಳಿದವರೆಲ್ಲರೂ ಸಿಂಹಳೀಯರೇ. ನೆಪ ಮಾತ್ರಕ್ಕೂ ಆ ಸಮಿತಿಯಲ್ಲಿ ಒಬ್ಬ ತಮಿಳನಿಲ್ಲ!

ಈ ಯೋಜನೆಯ ಪ್ರಕಾರ ತಮಿಳರನ್ನು ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಿಗೆ ವಾಪಸ್ ಕಳಿಸುವ ಮುನ್ನ ಇಡೀ ಪ್ರದೇಶದಲ್ಲಿ 12 ಸೈನಿಕ ಬೆಟಾಲಿಯನ್‌ಗಳನ್ನು (ಅಂದರೆ 84,000 ಸಿಂಹಳೀ ಸೈನಿಕರನ್ನು) ಶಾಶ್ವತವಾಗಿ ಸ್ಥಾಪಿಸಲಾಗುತ್ತಿದೆ. ಜೊತೆಗೆ ಉತ್ತರದಲ್ಲಿ 20,000 ಪೊಲೀಸರು ಮತ್ತು 20,000 ಆಡಳಿತಾತ್ಮಕ ಸಿಬ್ಬಂದಿ ನೆಲೆಗೊಳ್ಳಲಿದ್ದಾರೆ. ಇದರೊಂದಿಗೆ ಸುಮಾರು 30,000 ಸಿಂಹಳೀ ಕೈದಿಗಳನ್ನು ಉತ್ತರದಲ್ಲಿ ನೆಲೆಗೊಳ್ಳಬೇಕೆಂಬ ಶರತ್ತಿನ ಆಧಾರದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಯುದ್ಧ ಕಾಲದಲ್ಲಿ ಸೇನೆ ತೊರೆದು ಹೋದ 5000ಕ್ಕೂ ಹೆಚ್ಚು ಸಿಂಹಳೀ ಸೈನಿಕರಿಗೆ ಶಿಕ್ಷೆಯ ರೂಪದಲ್ಲಿ ಉತ್ತರದಲ್ಲಿ ನೆಲೆಗೊಳ್ಳುವಂತೆ ಸೂಚಿಸಲಾಗಿದೆ. ಅಷ್ಟೇ ಅಲ್ಲದೆ, ಸಿಂಹಳೀಯರ ಒಂದು ಲಕ್ಷ ಕುಟುಂಬ ಸದಸ್ಯರೂ ಉತ್ತರದಲ್ಲಿ ನೆಲೆಗೊಳ್ಳಲಿದ್ದಾರೆ. ಹೀಗೆ ತಮಿಳರು ತಮ್ಮ ತಾಯ್ನೆಲಕ್ಕೆ ವಾಪಸ್ ಮರಳುವ ಮುನ್ನ ಹೆಚ್ಚೂಕಡಿಮೆ ಮೂರು ಲಕ್ಷಕ್ಕೂ ಹೆಚ್ಚು ಸಿಂಹಳೀಯರು ತಮಿಳು ನೆಲದಲ್ಲಿ ಶಾಶ್ವತವಾಗಿ ನೆಲೆಗೊಂಡಿರುತ್ತಾರೆ. ಇದರಿಂದಾಗಿ ಉತ್ತರದಲ್ಲಿ ಮುಂದೆ ಚುನಾವಣೆ ನಡೆದಾಗಲೂ ಸಿಂಹಳೀಯ ಪ್ರತಿನಿಧಿಯೇ ‘ಪ್ರಜಾತಾಂತ್ರಿಕವಾಗಿ’ ಆಯ್ಕೆಯಾಗುವ ಸಂಭವವೇ ಹೆಚ್ಚು!

ನಿರಾಶ್ರಿತ ಶಿಬಿರದಲ್ಲಿರುವ ಅಷ್ಟು ತಮಿಳರು ಮತ್ತೆ ತಾಯ್ನೆಲಕ್ಕೇನೂ ಹೋಗುವುದಿಲ್ಲ. ಸರ್ಕಾರ ಈ ಮೂರು ಲಕ್ಷ ತಮಿಳರಲ್ಲಿ ಒಂದು ಲಕ್ಷಕ್ಕೂ ಹೆಚ್ಚು ತಮಿಳರನ್ನು ಅನುರಾಧಪುರದಲ್ಲಿ ಶಾಶ್ವತವಾಗಿ ನೆಲೆಗೊಳಿಸುವ ಯೋಜನೆ ಮಾಡುತ್ತಿದೆ. ಅನುರಾಧಪುರ ಸಿಂಹಳೀಯ ಬಹುಸಂಖ್ಯಾತ ಪ್ರದೇಶವಾಗಿದೆ. ಹೀಗೆ ಶ್ರೀಲಂಕಾ ಸರ್ಕಾರ ತಮಿಳು ಬಹುಸಂಖ್ಯಾತ ಪ್ರದೇಶದಲ್ಲಿ ತಮಿಳರನ್ನು ಒಕ್ಕಲೆಬ್ಬಿಸಿ ಅಲ್ಲಿ ತಮಿಳರಿಗಿಂತ ಜಾಸ್ತಿ ಸಿಂಹಳೀಯರನ್ನು ನೆಲೆಗೊಳಿಸುವ ಮೂಲಕ ಮತ್ತು ಉಳಿದವರನ್ನು ಸಿಂಹಳೀಯ ಬಹುಸಂಖ್ಯಾತ ಪ್ರದೇಶದಲ್ಲಿ ನೆಲೆಗೊಳಿಸುವ ಮೂಲಕ ತಮಿಳು ಜನಾಂಗದ ಭೌಗೋಳಿಕ ತಳಹದಿಯನ್ನೇ ಧ್ವಂಸಗೊಳಿಸಿದೆ.

ತಮಿಳು ಜನಸಂಖ್ಯೆಯನ್ನೇ ಇಳಿಸುವ ‘ಸೃಜನಶೀಲ’ ಯೋಜನೆಗಳು: ಒಟ್ಬಾರೆ ಶ್ರೀಲಂಕಾದ ಜನಸಂಖ್ಯೆ ಎರಡು ಕೋಟಿಯಷ್ಟಿದ್ದರೆ ಶ್ರೀಲಂಕಾ ತಮಿಳರ ಜನಸಂಖ್ಯೆ 1983ರ ವೇಳೆಗೆ 18 ಲಕ್ಷದಷ್ಟಿತ್ತು. ಆದರೆ 1983ರ ನರಮೇಧದ ನಂತರ 7-8 ಲಕ್ಷದಷ್ಟು ಶ್ರೀಲಂಕಾ ತಮಿಳರು ದೇಶ ತೊರೆದುಹೋದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ತಮಿಳರು ಬಲಿಯಾಗಿದ್ದಾರೆ. ಈಗ ಉತ್ತರ ಮತ್ತು ಪೂರ್ವ ಪ್ರಾಂತ್ಯದ 3 ಲಕ್ಷಕ್ಕೂ ಹೆಚ್ಚು ಶ್ರೀಲಂಕಾ ತಮಿಳರು ಶಿಬಿರಗಳಲ್ಲಿದ್ದಾರೆ.

ಈ ಹಿನ್ನೆಲೆಯಲ್ಲಿ ಶ್ರೀಲಂಕಾ ಸರ್ಕಾರ ತಮಿಳು ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಹಾಕಿಕೊಂಡಿರುವ ‘ಸೃಜನಶೀಲ’ ಯೋಜನೆಯೆಂದರೆ ತಮಿಳರ ಸಂಖ್ಯೆಯನ್ನೇ ಕಡಿಮೆ ಮಾಡಿಬಿಡುವುದು. ಹೀಗಾಗಿಯೇ ಪ್ರಾರಂಭದಲ್ಲಿ ಅದು ತಮಿಳು ನಿರಾಶ್ರಿತರ ಸಂಖ್ಯೆಯನ್ನು 40,000ಕ್ಕಿಂತ ಹೆಚ್ಚಲ್ಲವೆಂದು ವಾದಿಸುತ್ತಾ ಬಂದಿತ್ತು. ಆದರೆ ಸತತ

▸▸▸15



ಕಂಡಹಾಗೆ

■ ಗೌರಿ ಲಂಕೇಶ್

ಬುರ್ಖಾದ ಒಳಹೊರಗುಗಳು....




ಇತ್ತೀಚೆಗೆ ಅಂತರರಾಷ್ಟ್ರೀಯ ಮಹಿಳಾ ವಲಯಗಳಲ್ಲಿ ಬುರ್ಖಾ ಬಗ್ಗೆ ತೀವ್ರವಾದ ಚರ್ಚೆಗಳಾಗುತ್ತಿವೆ. ಅದಕ್ಕೆ ಕಾರಣ ಎರಡು ದೇಶಗಳ ಅಧ್ಯಕ್ಷರು ನೀಡಿರುವ ಹೇಳಿಕೆಗಳು. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾರವರು ಮೊನ್ನೆ ಕೈರೋದಲ್ಲಿ ಮಾತನಾಡುತ್ತಾ "ಅಮೆರಿಕದ ಅಧ್ಯಕ್ಷನಾಗಿ ಇಸ್ಲಾಮ್ ಬಗೆಗಿನ ನಕಾರಾತ್ಮಕ ಭಾವನೆಗಳನ್ನು ವಿರೋಧಿಸುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ. ಅಷ್ಟೇ ಅಲ್ಲ ಮುಸಲ್ಮಾನ ಮಹಿಳೆಯರು ಬುರ್ಖಾವನ್ನು ಧರಿಸುವ ಹಕ್ಕನ್ನು ಕಾಪಾಡಬೇಕೆಂದು ನಮ್ಮ ಸರ್ಕಾರ ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಿದೆ" ಎಂದಿದ್ದಾರೆ. ಇದಾದ ಕೆಲ ವಾರಗಳಲ್ಲಿ ಫ್ರಾನ್ಸ್‌ನ ಅಧ್ಯಕ್ಷ ನಿಕೊಲಾಸ್ ಸಾರ್ಕೋಜಿಯವರು "ಬುರ್ಖಾ ಧರಿಸುವುದು ಧಾರ್ಮಿಕ ಸಂಕೇತವಲ್ಲ, ಬದಲಾಗಿ ಅದು ಮಹಿಳೆಯ ಶೋಷಣೆಯ ಸಂಕೇತ. ಅಂತಹ ಉಡುಪಿಗೆ ಫ್ರಾನ್ಸ್‌ನಲ್ಲಿ ಯಾವ ಸ್ಥಾನವೂ ಇಲ್ಲ" ಎಂದು ಘರ್ಜಿಸಿದ್ದಾರೆ.

ಈಗ ನಡೆಯುತ್ತಿರುವ ವಾದವಿವಾದಗಳಲ್ಲಿ ಧಾರ್ಮಿಕ ನಂಬಿಕೆ ಮತ್ತು ಮಹಿಳೆಯರ ಹಕ್ಕು ಎಂಬ ಎರಡು ಅತಿ ಸೂಕ್ಷ್ಮ ವಿಚಾರಗಳು ಅಡಗಿದೆಯಲ್ಲದೆ, ಕಮ್ಯುನಲಿಸಂ ಕಾಂಬಾಟ್‌ನ ಸಹಸಂಪಾದಕ ಜಾವೇದ್ ಆನಂದ್‌ರವರು ಹೇಳಿರುವಂತೆ "ಇದು ಇಸ್ಲಾಮ್ V/s ಪಾಶ್ಚಿಮಾತ್ಯ ದೇಶಗಳ ನಡುವಿನ ಬಿಕ್ಕಟ್ಟು ಮಾತ್ರವಲ್ಲ, ಬದಲಾಗಿ ಇದರಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ, ಉದಾರವಾದಿಗಳು, ಮಹಿಳಾವಾದಿಗಳು ಮತ್ತು ಮುಸಲ್ಮಾನರೂ ಕೂಡ ವಿವಿಧ ನಿಲುವುಗಳನ್ನು ತಾಳಿ ಪರಸ್ಪರ ವಾದವಿವಾದಗಳಿರುವ ವಿಷಯವಾಗಿದೆ."

ಇಸ್ಲಾಮ್ ಧರ್ಮದಲ್ಲಿ ನಿಜಕ್ಕೂ ಮಹಿಳೆಯರು ಬುರ್ಖಾ ಧರಿಸಬೇಕೆಂದು ಹೇಳಲಾಗಿದೆಯೇ. ನನಗೆ ಗೊತ್ತಿರುವ ಮಟ್ಟಿಗೆ ಈ ಬುರ್ಖಾ ಅಥವಾ ಪರದೆ (ಪರ್ದಾ) ಇಸ್ಲಾಮ್ ಧರ್ಮದಲ್ಲಿ ತಲೆದೋರಿದ್ದು ಹೀಗೆ: ಪೈಗಂಬರ್ ಮೊಹಮ್ಮದರು ಅಂದು ಜೈನಾಬ್ ಎಂಬಾಕೆಯನ್ನು ಮದುವೆಯಾಗಿದ್ದರು. ಮದುವೆಯ ಸಮಾರಂಭಕ್ಕೆ ಬಂದಿದ್ದ ಅತಿಥಿಗಳಲ್ಲಿ ಕೆಲವರು ಅದೆಷ್ಟೇ ಹೊತ್ತಾದರೂ ಪೈಗಂಬರರ ಮನೆಯಿಂದ ಹೊರಡಲಿಲ್ಲ. ಪೈಗಂಬರ್ ಮತ್ತು ಜೈನಾಬ್ ಅತಿಥಿಗಳ ನಿರ್ಗಮನಕ್ಕೆ ಬಹಳ ಹೊತ್ತು ಕಾದರು. ಕೊನೆಗೂ ಎಲ್ಲರೂ ಹೊರಟರೂ ಅನಾಸ್ ಇಬ್ನ ಮಲಿಕ್ ಎಂಬಾತ ಹೋಗಲಿಲ್ಲ, ಬದಲಾಗಿ ಪೈಗಂಬರರು ತಮ್ಮ ಖಾಸಗಿ ಕೊಠಡಿಯನ್ನು ಪ್ರವೇಶಿಸಿದಾಗಲೂ ಅವರನ್ನು ಹಿಂಬಾಲಿಸಿದ. ಆಗ ಪೈಗಂಬರರು ಕೊಠಡಿಯ ಬಾಗಿಲಿಗೆ ಹಾಕಿದ್ದ ಪರದೆಯನ್ನು ಬದ್ಧ ಮಾಡಿ "ಪ್ರವಾದಿಗಳ ಆಹ್ವಾನ ಅಥವಾ ಅನುಮತಿ ಇಲ್ಲದೆ, ನೀವು ಅವರ ಕೊಠಡಿಯನ್ನು ಪ್ರವೇಶಿಸಕೂಡದು. ಆಹ್ವಾನವಿದ್ದಾಗ ಬಂದು ಆತಿಥ್ಯವನ್ನು ಸ್ವೀಕರಿಸಿ. ಕಾಡುಹರಟೆಯಲ್ಲಿ ಸಮಯವನ್ನು ವ್ಯರ್ಥ ಮಾಡದೆ ಹೊರಡಬೇಕು ಮತ್ತು ಪ್ರವಾದಿಗಳ ಮಡದಿಯರನ್ನು ಏನನ್ನೇ ಕೇಳಬೇಕಿದ್ದರೂ ಪರದೆಯ ಹಿಂದೆ ನಿಂತು ಕೇಳಿ. ಇದರಿಂದ ನಿಮ್ಮ ಮತ್ತು ಅವರ ಹೃದಯಗಳೂ ಶುದ್ಧವಾಗಿರುತ್ತವೆ" ಎಂಬ ದಿವ್ಯವಾಣಿಯನ್ನು ನುಡಿದರು. ಇದರಲ್ಲಿ ಸ್ಪಷ್ಟವಾಗಿರುವಂತೆ ಈ ಪರದೆ ಪೈಗಂಬರರ ಪತ್ನಿಯರಿಗೆ ಸೀಮಿತವಾಗಿತ್ತೇ ಹೊರತು ಸಾಮಾನ್ಯ ಮಹಿಳೆಯರಿಗೆ ಅನ್ವಯವಾಗುತ್ತಿರಲಿಲ್ಲ.

ಹಾಗೆಯೇ ಇನ್ನೊಂದು ವಿಷಯವನ್ನು ಇಲ್ಲಿ ಹೇಳುವ ಅವಶ್ಯಕತೆ ಇದೆ. ಅದೇನೆಂದರೆ ಇವತ್ತು ಬಹಳಷ್ಟು ಮುಸಲ್ಮಾನ ದೇವತಾ ಶಾಸ್ತ್ರಜ್ಞರು ಮತ್ತು ಪಂಡಿತರೂ ಹೇಳುತ್ತಿರುವಂತೆ ಕುರ್‌ಆನಿನಲ್ಲಿ ಮಹಿಳೆಯರು (ಮತ್ತು ಪುರುಷರು ಕೂಡ) ನಿರಾಡಂಬರವಾದ ಉಡುಪುಗಳನ್ನು ಧರಿಸಬೇಕು ಎಂದಿದೆಯಲ್ಲದೆ ಎಲ್ಲೂ ಎಲ್ಲಾ ಮಹಿಳೆಯರು ಬುರ್ಖಾ ಧರಿಸಬೇಕೆಂದು ಹೇಳಿಲ್ಲ, ಬದಲಾಗಿ **"Tell the believing women to lower their gaze and be modest, and to display of their adornment only that which is apparent and to draw their veils over their booms"** ಎಂದಿದೆ ಅಷ್ಟೆ. ಈ ಕಾರಣಕ್ಕಾಗಿಯೇ ಇರಬಹುದು ಇವತ್ತು ಜಗತ್ತಿನ ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯ 'ಬುರ್ಖಾ'ಗಳು ಅಸ್ತಿತ್ವಕ್ಕೆ ಬಂದಿವೆ. ಹಲವು ಇಸ್ಲಾಮಿಕ್ ದೇಶಗಳಲ್ಲಿ ಬರೀ ತಲೆಗೂದಲನ್ನು ಮುಚ್ಚುವ ಹಿಜಾಬ್ ಜಾರಿಯಲ್ಲಿದ್ದರೆ, ಇನ್ನು ಕೆಲವು ದೇಶಗಳಲ್ಲಿ ಮುಖ ಮತ್ತು ಹಸ್ತವನ್ನು ತೋರಿಸುವ ಚದಾರ್ ಧರಿಸಲಾಗುತ್ತವೆ. ಹಾಗೆಯೇ ಇನ್ನೂ ಕೆಲವು ಕಡೆ ಕಣ್ಣುಗಳು ಮಾತ್ರ ಕಾಣಿಸಿಕೊಳ್ಳುವ ನಿಕಾಬ್ ಜಾರಿಯಲ್ಲಿದ್ದರೆ, ಕೆಲ ದೇಶಗಳಲ್ಲಿ ಮುಡಿಯಿಂದ ಅಡಿಯವರೆಗೆ ಮುಚ್ಚಿ ಹಾಕುವ ಬುರ್ಖಾಗಳನ್ನು ಧರಿಸಲಾಗುತ್ತದೆ. ಇವುಗಳಲ್ಲಿ ಯಾವುದು ಕುರ್‌ಆನ್‌ನಲ್ಲಿನ ಆದೇಶಗಳಿಗೆ ನಿಷ್ಠವಾಗಿದೆ? ಈ ಪ್ರಶ್ನೆಗೆ ಕುರ್‌ಆನ್‌ನಲ್ಲಿ ಉತ್ತರ ಇಲ್ಲದಿದ್ದರೂ ಎಲ್ಲೆಡೆ ತಮ್ಮ ಸಂದರ್ಭಕ್ಕೆ ಮತ್ತು ಅಗತ್ಯಗಳಿಗೆ ತಕ್ಕಂತೆ ಪುರುಷರು ತರ್ಕಿಸಿದ್ದಾರೆ. ಆ ಕಾರಣಕ್ಕಾಗಿಯೇ ಬುರ್ಖಾ ಸುತ್ತ ಇಷ್ಟೆಲ್ಲ ಗೊಂದಲಗಳಿವೆ.



ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ನಜಿಯಾ ಎಂಬ ಹುಡುಗಿ ನನ್ನ ಸ್ನೇಹಿತೆಯಾಗಿದ್ದಳು. ನಾನು ಶರ್ಟ್ ಮತ್ತು ಸ್ಕರ್ಟ್‌ಅನ್ನು ಸಮವಸ್ತ್ರವಾಗಿ ಧರಿಸುತ್ತಿದ್ದರೆ ಆಕೆ ಶರ್ಟ್ ಮತ್ತು ಲಂಗವನ್ನು ಧರಿಸುತ್ತಿದ್ದಳು. ಆಕೆಯಾಗಲಿ, ನಮ್ಮ ಶಾಲೆಯಲ್ಲಿದ್ದ ಇತರೆ ಮುಸಲ್ಮಾನ ಹುಡುಗಿಯರಾಗಲಿ ಬುರ್ಖಾವನ್ನು ಧರಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ನಾನೊಂದು ಅಂಶವನ್ನು ಗಮನಿಸಿದ್ದೇನೆ. ನಮ್ಮ ಆಫೀಸಿನ ಹತ್ತಿರವೇ ಇರುವ ಬಿಎಂಎಸ್ ಲೇಡಿಸ್ ಕಾಲೇಜಿನ ಹಲವಾರು ಮುಸಲ್ಮಾನ ಯುವತಿಯರು ಬುರ್ಖಾಗಳನ್ನು (ಮುಖ ಕಾಣಿಸುವಂತದ್ದು) ಧರಿಸಿರುವುದನ್ನು ಗಮನಿಸಿದ್ದೇನೆ. ಆಗೆಲ್ಲ ನನ್ನ ಮನಸ್ಸಿನಲ್ಲಿ ಹಲವು ಪ್ರಶ್ನೆಗಳು ತಲೆ ಎತ್ತಿವೆ. 25 ವರ್ಷಗಳ ಹಿಂದೆ ಬರೀ ಮೇಲುವರ್ಗದ ಮುಸಲ್ಮಾನರು ತಮ್ಮ ಹೆಣ್ಣುಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿದ್ದರೆ? ಈಗ ಮಧ್ಯಮ ವರ್ಗ ಮತ್ತು ಕೆಳವರ್ಗದ ಮುಸಲ್ಮಾನರೂ ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಸವಲತ್ತು ನೀಡುತ್ತಿರುವುದರಿಂದ ಶಾಲಾ ಕಾಲೇಜುಗಳಲ್ಲಿ ಅವರ ಸಂಖ್ಯೆ ಹೆಚ್ಚಾಗುತ್ತಿದೆಯೇ? ಅಥವಾ ಮುಸಲ್ಮಾನರಲ್ಲಿ ಸಂಪ್ರದಾಯವಾದಿಗಳು ಹೆಚ್ಚಾಗುತ್ತಿರುವುದರಿಂದ ವಿದ್ಯಾಭ್ಯಾಸಕ್ಕೆಂದು ಬರುತ್ತಿರುವ ಹುಡುಗಿಯರು ಬುರ್ಖಾ ಧರಿಸುತ್ತಿದ್ದಾರೆಯೇ?

ಭಾರತದ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳಿಗೆ ಸಮಾಜ ಶಾಸ್ತ್ರಜ್ಞರು ಉತ್ತರಗಳನ್ನು ಕಂಡುಹಿಡಿಯಬೇಕೆ ಹೊರತು ಅದು ನನ್ನಿಂದ ಸಾಧ್ಯವಿಲ್ಲ. ಆದರೆ ಜಗತ್ತಿನಾದ್ಯಂತ ಇತ್ತೀಚೆಗೆ ಇಸ್ಲಾಮ್ ವಿರುದ್ಧದ ಪ್ರಚಾರಾಂದೋಲನ ಹೆಚ್ಚಾದಂತೆ ಎಲ್ಲೆಡೆ ಮುಸಲ್ಮಾನ ಪುರುಷರು ಮತ್ತು ಮಹಿಳೆಯರು ತಮ್ಮ ಧರ್ಮದ ಬಾಹ್ಯ ಸಂಕೇತಗಳಿಗೆ ಶರಣಾಗುತ್ತಿದ್ದಾರೆಂದು ಹಲವಾರು ಸಮೀಕ್ಷೆಗಳು ಹೇಳಿವೆ.

ಅದೇನೆ ಇರಲಿ, ಬುರ್ಖಾ ವಿಷಯಕ್ಕೆ ವಾಪಸ್ ಬಂದು ಇದಕ್ಕೆ ಸಂಬಂಧಿಸಿದಂತೆ ನಾನು ಇತ್ತೀಚೆಗೆ ಓದಿದ ಒಂದು ಪದ್ಯದ ಸಾಲುಗಳನ್ನು ಅನುವಾದಿಸಿ ಇಲ್ಲಿ ಗದ್ಯರೂಪದಲ್ಲಿ ನೀಡುತ್ತಿದ್ದೇನೆ. ಬುರ್ಖಾ ಧರಿಸಿರುವ ಮಹಿಳೆಯರನ್ನು ವಿಚಿತ್ರವಾಗಿ ನೋಡುವ ಜನರನ್ನು ಉದ್ದೇಶಿಸಿ ಅನಾಮಿಕರೊಬ್ಬರು ಬರೆದಿರುವ ಈ ಪದ್ಯದ ಹೆಸರು 'ಪದ್ಯರೂಪದಲ್ಲಿ ಒಂದು ವಾದ'

"ನಿಮಗೆ ಗೊತ್ತಾ ನಾನೂ ಸಹೋದರಿ, ನಾನೂ ತಾಯಿ, ನಿಮ್ಮಂತೆಯೇ ನನ್ನ ಮಕ್ಕಳಿಗಾಗಿ ನನ್ನ ಪ್ರಾಣವನ್ನೇ ಬಲಿ ಕೊಡಬಲ್ಲ ತಾಯಿ ನಾನು. ಮನೆಯಿಂದ ಹೊರಗೆ ಹೋದಾಗ ನಾನು ಬುರ್ಖಾ ಧರಿಸುತ್ತೇನೆ. ಆದರೆ ಮನೆಗೆ ಹಿಂದಿರುಗಿದಾಗ ನನಗೆ ಇಷ್ಟವಾದದ್ದನ್ನು ಧರಿಸುತ್ತೇನೆ. ನಿಮ್ಮಂತೆಯೇ ನಾನೂ ನನ್ನ ಮಕ್ಕಳೊಂದಿಗೆ ನಗುತ್ತೇನೆ, ಕುಣಿಯುತ್ತೇನೆ, ನನ್ನ ಸಂಸಾರದೊಂದಿಗೆ ನಾನಾಗಿರುತ್ತೇನೆ. ನಿಮ್ಮಂತೆ ಬಾರ್ಬಿ ಬೊಂಬೆಗಳಂತೆ ಕಾಣುವ ಒತ್ತಡ ನನ್ನ ಮೇಲಿಲ್ಲ, ಮನೆಯಿಂದ ಹೊರಡುವ ಮುನ್ನ ನನ್ನ ಹುಬ್ಬು, ಲಿಪ್‌ಸ್ಟಿಕ್ ಇತ್ಯಾದಿ ಸರಿ ಇದೆಯೇ ಎಂದು ನೋಡಿಕೊಳ್ಳುವ ಅವಶ್ಯಕತೆ ನನಗಿಲ್ಲ, ಫ್ಯಾಷನ್ ಲೋಕದ ಆಜ್ಞಾಪಾಲಕರು ಹೇಳುವಂತೆ ಅಸಹಜವಾಗಿ ತೆಳ್ಳಗಿರುವುದು, ಇತರರ ಪ್ರಶಂಸೆಗೆ ನನ್ನ ಬದುಕನ್ನೇ ಮುಡಿಪಾಗಿಡುವ ಅಗತ್ಯತೆ ನನಗಿಲ್ಲ, ಅವರ ಅಳತೆಗೋಲಿನಂತೆ ನೀನು ತೆಳ್ಳಗಿದ್ದಿಯೋ, ಕುಳ್ಳಗಿದ್ದಿಯೋ ಬೆಳ್ಳಗಿದ್ದಿಯೋ, ಸುಂದರಿಯಾಗಿದ್ದಿಯೋ... ಅದ್ಯಾವುದೂ ನನಗೆ ಅನ್ವಯಿಸುವುದಿಲ್ಲ, ಅಂದರೆ ಯಾರು ಇಲ್ಲಿ ಗುಲಾಮ? ನಾನೋ? ನೀನೋ? ನಿಜವಾಗಲೂ ಸ್ವಾತಂತ್ರ್ಯ ಪಡೆದಿರುವುದು ಬುರ್ಖಾ ಧರಿಸದೆ ಸಮಕಾಲೀನ ಫ್ಯಾಷನ್ ಶೈಲಿಗಳಿಗೆ ಬಲಿಯಾಗುತ್ತಿರುವ ನೀನೋ ಅಥವಾ ಅವುಗಳೆಲ್ಲದರಿಂದ ವಿಮುಕ್ತಿ ಪಡೆದು ಹೊರಗೆ ಬುರ್ಖಾ ಧರಿಸಿದರೂ ಯಾವ ಒತ್ತಡವೂ ಇಲ್ಲದೆ ನಾನಾಗಿಯೇ ಬದುಕುತ್ತಿರುವ ನಾನೋ?"

ಬುರ್ಖಾ ಅಲ್ಲದೆ ಇಸ್ಲಾಮಿನಲ್ಲಿ ಮಹಿಳೆಯರ ಚಲನವಲನಗಳ ಮೇಲೂ ನಿರ್ಬಂಧಗಳನ್ನು ಹೇರಲಾಗಿದೆ ಎಂದೇ ಬಹಳಷ್ಟು ಜನ ನಂಬಿದ್ದಾರೆ. ಆದರೆ ಬಹಳಷ್ಟು ಜನಕ್ಕೆ ಗೊತ್ತಿಲ್ಲದಿರುವುದೇನೆಂದರೆ ಸ್ವತಃ ಪೈಗಂಬರರ ಮಡದಿಯರಲ್ಲಿ ಹಲವರು ಸಣ್ಣಪುಟ್ಟ ಬಿಸಿನೆಸ್ ನಡೆಸುತ್ತಿದ್ದರು. ಪೈಗಂಬರರೊಂದಿಗೆ ಯುದ್ಧ ಭೂಮಿಗಳಿಗೆ ಹೋಗಿ ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದರಲ್ಲದೆ ಗಾಯಗೊಂಡವರಿಗೆ ಶುಶ್ರೂಷೆ ನೀಡುತ್ತಿದ್ದರು. ಪೈಗಂಬರರ ಅಚ್ಚುಮೆಚ್ಚಿನ ಮಡದಿಯಾಗಿದ್ದ ಆಯಿಷಾ ಕೂಡ ಧರ್ಮವನ್ನು ಬೋಧಿಸುತ್ತಿದ್ದರು. ಮಹಿಳೆಯರಿಗೆ ವಿವಿಧ ಹಕ್ಕುಗಳಿದ್ದವಲ್ಲದೆ ಹೆಣ್ಣುಮಕ್ಕಳ ವಿರುದ್ಧ ತಾರತಮ್ಯ ಮಾಡುವುದನ್ನು ಪೈಗಂಬರರು ವಿರೋಧಿಸುತ್ತಿದ್ದರು. ಆದರೆ ಪೈಗಂಬರರ ನಿರ್ಗಮನದ ನಂತರವೇ ಒಮರ್ ಕಲೀಫನಾಗಿದ್ದ ಸಮಯದಲ್ಲಿ ಮಹಿಳಾ ವಿರೋಧಿ ನೀತಿಗಳು ಜಾರಿಗೆ ಬಂದದ್ದು ಎಂದು ಇಸ್ಲಾಮ್ ಇತಿಹಾಸಕಾರರೂ ಒಪ್ಪಿಕೊಳ್ಳುತ್ತಾರೆ.

ಅಂದಹಾಗೆ, ಬುರ್ಖಾ ಬಗ್ಗೆ ಕೆಲ ಮುಸಲ್ಮಾನ ಮಹಿಳೆಯರಿಗೆ ಹೇಗನ್ನಿಸುತ್ತದೆ? ಇಲ್ಲಿ ನನ್ನ ಗೆಳತಿ ಡಾ. ಶರೀಫಾ ಬರೆದಿರುವ ಪದ್ಯವನ್ನು ನೀಡುತ್ತೇನೆ. ಇದರ ಹೆಸರು 'ಬುರ್ಖಾ ಪ್ಯಾರಡೈಸ್.'


ಇಸ್ಲಾಮಿನ ಮೂಲ ಉದ್ದೇಶ ಓರ್ವ ಉತ್ತಮ ದೈವಭಕ್ತ ವ್ಯಕ್ತಿ ಆಗುವುದು. ಆದ್ದರಿಂದಲೇ ವಿವಿಧ ದೇಶಗಳಲ್ಲಿ, ವಿವಿಧ ಸಂಸ್ಕೃತಿಗಳಲ್ಲಿ ಅದು ಬೇರೆ ಬೇರೆ ರೀತಿಯಲ್ಲಿ ಆಚರಣೆಯಲ್ಲಿರುವುದು. ಹಾಗೆಯೇ ಇಸ್ಲಾಮನ್ನು ಬೇರೆ ಬೇರೆಯವರು ವಿಭಿನ್ನ ರೀತಿಯಲ್ಲಿ ಅರ್ಥೈಸಿರುವುದು.

ಬುರ್ಖಾ ಪ್ಯಾರಡೈಸ್

ಬೇಸರದ ಹೆಜ್ಜೆ ಹಾಕುತ್ತ
ಪೇಟೆಪೇಟೆಯಲ್ಲಿ ಸಾಗುತ್ತಿದ್ದೆ
ಝುಗಝುಗಿಸುವ ಬೆಳಕು
ಕತ್ತಲೆಯನು ಹೊಡೆದೋಡಿಸಿತ್ತು
ಜನಜಂಗುಳಿಯ ನಡುವೆ
ಚಿಲ್ಲರೆ ವ್ಯಾಪಾರಿಗಳು
ಬೀದಿ ಬದಿಗೆ ಕೂಗುತ್ತಿದ್ದರು
ಲೈಟಿನ ವಿನ್ಯಾಸ ಬಣ್ಣಬಣ್ಣದಲಿ
ತಿರುಗುವ ಮಾದರಿ ಬೆಳಕು
ನನಗೆ ಆ ಅಂಗಡಿಯ
ಮುಂದೆ ಹಿಡಿದು ನಿಲ್ಲಿಸಿತ್ತು.
ಬೋರ್ಡಿನಲ್ಲಿ ಬರೆದಿತ್ತು
"ಬುರ್ಖಾ ಪ್ಯಾರಡೈಸ್"
ಟಿವಿಯಲಿ ನೋಡಿದ್ದೆ ಪ್ರಚಾರ
ಬನ್ನಿ ಮಹಿಳೆಯರೇ
ಪವಿತ್ರ ಉಡುಪು ಖರೀದಿಸಲು
ನಮ್ಮ ಬುರ್ಖಾ ತೊಟ್ಟ ಮಹಿಳೆ
ಸ್ವರ್ಗದಪ್ಸರೆಯಂತೆ
ಜನ್ನತ್ ಕಿ-ಹೂರ್
ಹೇಗಿದೆ ಪ್ರಚಾರ ತಂತ್ರ?
ಬನ್ನಿ ವಿನ್ಯಾಸಗಳು ಬಹಳಿವೆ
ಹೆಣ್ಣುಗಳ ಕಣ್ಮನ ಸೆಳೆವ
ಕುಸುರಿ ಕೆಲಸದ ಕನಸುಗಳಿಗೆ
ರೆಕ್ಕೆ ಬಿಡಿಸಿದ ಚಿತ್ತಾರಗಳಿವೆ,
ಬಿಚ್ಚಿಕೊಂಡಿದೆ ಚಾದರದಲಿ
ಜಡ್ಡುಗಟ್ಟಿದ ಪಳೆಯುಳಿಕೆಗಳು,
ಮನಮೋಹಕ ತಂತ್ರಗಳಲ್ಲಿ
ಹುದುಗಿಕೊಂಡಿದೆ ವ್ಯಾಪಾರಿ ವೃತ್ತ
ಲಾಭ ಗಿಟ್ಟಿಸಲು ಬಂಡವಾಳಿಕೆ
ವಿನೂತನ ಪ್ರಚಾರ ವೈಖರಿ
ಖರೀದಿಗೆ ಆಹ್ವಾನಿಸುತ್ತವೆ
ಬನ್ನಿ ನಿಮ್ಮ ಪ್ಯಾರಡೈಸ್‌ಗೆ
ಬುರ್ಖಾಧಾರಿ ಹುಡುಗಿಯರಿದ್ದಾರೆ
ನಿಮ್ಮ ಸ್ವಾಗತಕ್ಕೆ
ಪುರುಷರ ನೆರಳೂ ಅಲ್ಲಿಲ್ಲ
ಎಲ್ಲಾ ಮಹಿಳೆಯರದೇ ಜಗತ್ತು
ಕೇವಲ ಲಾಭ ಮಾತ್ರ ನಮಗೆ ಸೇರಿದ್ದು
ಬಂಡವಾಳ ಹೂಡಿರುವೆವಲ್ಲ?


-ಕೆ. ಶರೀಫಾ

ವೈಯಕ್ತಿಕವಾಗಿ ನನಗನ್ನಿಸುವುದೇನೆಂದರೆ ಮಹಿಳೆಯರು ಬುರ್ಖಾವನ್ನು ಧರಿಸಲೇ ಬೇಕು ಎಂದು (ತಾಲಿಬಾನಿಗಳ ತರಹ) ಒತ್ತಡ ತರುವುದು ಎಷ್ಟು ತಪ್ಪೋ, ಹಾಗೆಯೇ ಅದನ್ನು ಧರಿಸಕೂಡದು (ಸಾರ್ಕೋಜಿ ತರಹ) ಎಂದು ಕಾನೂನು ಜಾರಿ ಮಾಡುವುದೂ ಅಷ್ಟೇ ತಪ್ಪು. ಬದಲಾಗಿ ಬುರ್ಖಾ ಬೇಕೋ ಬೇಡವೋ ಎಂದು ನಿರ್ಧರಿಸುವ ಆಯ್ಕೆಯನ್ನು ಮಹಿಳೆಯರಿಗೇ ಬಿಡಬೇಕು. ಜೊತೆಗೆ ಅವರಿಗೆ ಆಧುನಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ನೀಡಿ ಅವರ ಆಯ್ಕೆಗೆ ಸೂಕ್ತ ಬುನಾದಿಯನ್ನು ರೂಪಿಸಬೇಕು. ಹಾಗಾದಾಗ ಆ ಮಹಿಳೆಯರಿಗೆ ಗೊತ್ತಾಗುತ್ತದೆ: ಅವರು ಧರ್ಮವನ್ನು ಉಲ್ಲಂಘಿಸಿದರೆ ಶಿಕ್ಷೆ ನೀಡುವವನು ಅಲ್ಲಾಹುವೇ ಹೊರತು ಮುಲ್ಲಾ ಅಲ್ಲ ಎಂದು.



ಇದು ಕೆನ್‌ಗೆ ಬಗೆದ ದ್ರೋಹವೆ?

ನೈಜೀರಿಯಾದ ಬರಹಗಾರ ಹಾಗೂ ಸಾಮಾಜಿಕ-ಪರಿಸರ ಹೋರಾಟಗಾರ ಕೆನ್ ಸಾರೋ ವಿವಾ ಅವರ ಹತ್ಯೆ ಇಪ್ಪತ್ತನೇ ಶತಮಾನ ಕಂಡ ಅತ್ಯಂತ ಹೀನ ಕೊಲೆಗಳಲ್ಲೊಂದು. ವಿಶ್ವದ ದೈತ್ಯ ಆಯಿಲ್ ಕಂಪೆನಿಗಳಲ್ಲೊಂದಾದ ಶೆಲ್ ಆಯಿಲ್ ಅಂದಿನ ನೈಜೀರಿಯಾದ ಮಿಲಿಟರಿ ಸರ್ಕಾರದೊಂದಿಗೆ ಕೈ ಜೋಡಿಸಿ 1995ರ ನವೆಂಬರ್ ತಿಂಗಳಲ್ಲಿ ಕೆನ್ ಸಾರೋ ವಿವಾ ಅವರನ್ನೊಳಗೊಂಡಂತೆ ಒಂಭತ್ತು ಜನ ಹೋರಾಟಗಾರರನ್ನು ಹತ್ಯೆಗೈದಿತ್ತು. ಅದಾದ ಹದಿಮೂರೂವರೆ ವರ್ಷಗಳ ನಂತರ ಈಗ ಅದೇ ಕೊಲೆಗಡುಕ ಶೆಲ್ ಕಂಪೆನಿ ತನ್ನ ಕೈಗೆ ಮೆತ್ತಿರುವ ರಕ್ತವನ್ನು ತೊಳೆದುಕೊಳ್ಳುವುದಕ್ಕಾಗಿ 15.5 ಮಿಲಿಯನ್ ಡಾಲರ್ ದುಡ್ಡನ್ನು ಪರಿಹಾರವಾಗಿ ಕೊಡುವುದಕ್ಕೆ ಮುಂದಾಗಿದೆ. ಈ ಮೊತ್ತ ಶೆಲ್ ಕಂಪೆನಿಯ ಕೇವಲ ನಾಲ್ಕು ಗಂಟೆಗಳ ಲಾಭಕ್ಕೆ ಸಮ. ಈ ಪರಿಹಾರ ಕೊಡುವ ಮೂಲಕ ಅಪ್ರತಿಮ ಹೋರಾಟಗಾರ ಮತ್ತು ಬರಹಗಾರರಾಗಿದ್ದ ಕೆನ್ ಸಾರೋ ವಿವಾರನ್ನು ಹತ್ಯೆಗೈದಿದ್ದು ತಾನೇ ಎಂದು ಜಗತ್ತಿನ ಮುಂದೆ ತಲೆತಗ್ಗಿಸಿ ನಿಂತಿದೆ. ಆದರೆ ಶೆಲ್‌ನ ಈ ಪರಿಹಾರ ಎಂಬ ಎಂಜಲನ್ನು ಸ್ವೀಕರಿಸಲು ಒಪ್ಪಿಕೊಂಡಿರುವ ಕೆನ್ ಅವರ ಪುತ್ರ ಅಪ್ಪನ ಧೀರೋದ್ಧಾತ್ತ ಹೋರಾಟಕ್ಕೆ ಒಂದು ರೀತಿಯಲ್ಲಿ ದ್ರೋಹವನ್ನೇ ಬಗೆದಂತಾಗಿದೆ. ಏಕೆಂದರೆ, ತಮ್ಮ ಅಪಾರ ಪ್ರಕೃತಿ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದ ಹಾಗೂ ಆ ಮೂಲಕ ತಮ್ಮ ನೆಲ-ಜಲಗಳನ್ನು ಕಲುಷಿತಗೊಳಿಸುತ್ತಿದ್ದ ಶೆಲ್ ಕಂಪೆನಿಯನ್ನು ಒದ್ದೋಡಿಸುವುದಕ್ಕಾಗಿ ಕೆನ್ ತಮ್ಮ ಕೊನೆಯುಸಿರಿರುವತನಕ ಹೋರಾಡಿದ್ದರು. ತಮ್ಮನ್ನು ಕೊಲೆಗೈಯುವುದು ಗ್ಯಾರಂಟಿ ಎಂದು ಗೊತ್ತಿದ್ದೂ ಗೊತ್ತಿದ್ದೂ ಕಿಂಚಿತ್ತೂ ಎದೆಗುಂದದೆ, ಸ್ವಲ್ಪವೂ ರಾಜಿ ಮಾಡಿಕೊಳ್ಳದೆ ತಮ್ಮ ಹೋರಾಟದ ದಾರಿಯಲ್ಲಿ ಮುಂದುವರೆದಿದ್ದರು. ಅವರ ಗುರಿ ಶೆಲ್‌ನಿಂದ ತಮ್ಮ ನಾಡನ್ನು ವಿಮುಕ್ತಿಗೊಳಿಸುವುದಾಗಿತ್ತೇ ಹೊರತು ಪರಿಹಾರಗಳೆಂಬ ಎಂಜಲಿಗೆ ಕೈಯೊಡ್ಡುವುದಾಗಿರಲಿಲ್ಲ. ವಾಸ್ತವದಲ್ಲಿ ಕೆನ್ ಸಾರೋ ವಿವಾ ಅವರ ಹೋರಾಟ ನಿಜಕ್ಕೂ ಒಂದು ಮಾದರೀ ಹೋರಾಟವಾಗಿತ್ತು. ತೊಂಭತ್ತರ ದಶಕದ ಆರಂಭದಲ್ಲಿ ಇಡೀ ವಿಶ್ವದ ಗಮನ ಸೆಳೆದ ಅಪ್ರತಿಮ ಸಂಘರ್ಷವಾಗಿತ್ತು.





ನೈಜೀರಿಯ ಆಫ್ರಿಕ ಖಂಡದ ಪಶ್ಚಿಮ ಕರಾವಳಿಯಲ್ಲಿರುವ ಸುಮಾರು 14 ಕೋಟಿ ಜನಸಂಖ್ಯೆ ಹೊಂದಿರುವ ದೇಶ. ಈ ದೇಶದ ಪ್ರಮುಖ ನದಿಗಳಲ್ಲೊಂದಾದ ನೈಜರ್ ನದಿ ದೇಶದ ನೈರುತ್ಯ ಭಾಗದಲ್ಲಿ ಸಮುದ್ರ ಸೇರುತ್ತದೆ. ಈ ಮುಖಜಭೂಮಿ ವಿಶ್ವದ ಅತ್ಯಂತ ಸಮೃದ್ಧ ತೈಲ ನಿಕ್ಷೇಪಗಳನ್ನು ಹೊಂದಿರುವ ಪ್ರದೇಶಗಳ ಪಟ್ಟಿಗೆ ಸೇರಿದೆ. ಈ ಪ್ರಾಕೃತಿಕ ಸಂಪತ್ತೇ ಆ ಪ್ರದೇಶದಲ್ಲಿ ವಾಸಿಸುವ ಒಗೋನಿ ಬುಡಕಟ್ಟು ಜನಸಮುದಾಯಕ್ಕೆ ಅಪಾಯ ತಂದೊಡ್ಡುತ್ತಾ ಬಂದಿದೆ. ಏಕೆಂದರೆ ಈ ತೈಲವನ್ನು ದೋಚುವುದಕ್ಕಾಗಿ ವಿಶ್ವದ ದೈತ್ಯ ಆಯಿಲ್ ಕಂಪೆನಿಗಳು ನಾಮುಂದು ತಾಮುಂದು ಎಂದು ನುಗ್ಗಿ ಅಲ್ಲಿನ ಜನರ ಬದುಕನ್ನು ನರಕಸದೃಶ ಮಾಡಿವೆ. ಒಂದು ಅಂದಾಜಿನ ಪ್ರಕಾರ ಒಗೋನಿ ಭೂಗರ್ಭವನ್ನು ಬಗೆದು ದಿನವೊಂದಕ್ಕೆ ಏನಿಲ್ಲವೆಂದರೂ ಸುಮಾರು 9,00,000 ಬ್ಯಾರೆಲ್ ತೈಲವನ್ನು ಹೊರ ತೆಗೆಯಲಾಗುತ್ತದೆ. ಲಾಭವನ್ನೇ ಪ್ರಮುಖ ಗುರಿಯನ್ನಾಗಿಸಿಕೊಂಡಿರುವ ಈ ಕಂಪೆನಿಗಳು ಕನಿಷ್ಠ ಸುರಕ್ಷತಾ ಕ್ರಮಗಳನ್ನೂ ಪಾಲಿಸದೆ ಇಡೀ ಒಗೋನಿ ಪರಿಸರದ ಮೇಲೆ ಸರಿಪಡಿಸಲಾಗದಂತಹ ಪ್ರತಿಕೂಲ ಪರಿಣಾಮವನ್ನುಂಟುಮಾಡಿವೆ. ಇಂಥ ಕ್ರೂರ ಕಂಪೆನಿಗಳಲ್ಲಿ ಪ್ರಮುಖವಾದದ್ದು ಡಚ್ ಮೂಲದ ಶೆಲ್ ಆಯಿಲ್ ಕಂಪೆನಿ.



ತಮ್ಮ ಕಣ್ಣ ಮುಂದೆಯೇ ತಮ್ಮ ಪ್ರಕೃತಿ ಸಂಪತ್ತನ್ನು ಲೂಟಿ ಹೊಡೆಯುತ್ತಿರುವುದಲ್ಲದೇ ತಮ್ಮ ನೆಲ-ಜಲಗಳನ್ನು ಸಂಪೂರ್ಣವಾಗಿ ಧ್ವಂಸಗೊಳಿಸಿ ಸುಂದರವಾಗಿದ್ದ ಒಗೋನಿಯನ್ನು ನರಕ ಮಾಡುತ್ತಿದ್ದುದರ ವಿರುದ್ಧ ಸಹಜವಾಗಿ ಅಲ್ಲಿನ ಒಗೋನಿ ಜನತೆ ಶೆಲ್ ಕಂಪೆನಿಯ ವಿರುದ್ಧ ತಿರುಗಿಬಿದ್ದರು. ಈ ಜನಹೋರಾಟಕ್ಕೆ ನಾಯಕತ್ವ ಕೊಟ್ಟವರು ಕವಿ ಮತ್ತು ಸಾಮಾಜಿಕ-ಪರಿಸರ ಹೋರಾಟಗಾರ ಕೆನ್ ಸಾರೋ ವಿವಾ. ಶಾಂತಿಯುತ ಮಾರ್ಗದ ಮೂಲಕವೇ ಅಹಿಂಸಾತ್ಮಕವಾಗಿ ಹೋರಾಡಬೇಕೆಂಬ ತತ್ವದಲ್ಲಿ ಬಲವಾದ ನಂಬಿಕೆಯಿಟ್ಟುಕೊಂಡಿದ್ದ ಕೆನ್ ಲಕ್ಷಾಂತರ ಬಾಧಿತ ಒಗೋನಿ ಜನರನ್ನು ಸಂಘಟಿಸಿ ಶೆಲ್ ವಿರುದ್ಧ ಬೃಹತ್ ಪ್ರಮಾಣದ ಜನಾಂದೋಲನವನ್ನು ರೂಪಿಸಿದರು. 1993ರ ಆರಂಭದಲ್ಲಿ ಕೆನ್ ಅವರ ನೇತೃತ್ವದಲ್ಲಿ ಸುಮಾರು 3,00,000 ಜನ ಬೀದಿಗಿಳಿದು ಪರಿಸರದ ಮೇಲೆ ಶೆಲ್ ನಡೆಸುತ್ತಿರುವ ಅತ್ಯಾಚಾರವನ್ನು ಅಹಿಂಸಾತ್ಮಕವಾಗಿಯೇ ಪ್ರತಿಭಟಿಸಿದ್ದರು. ಅವರ ಈ ಹೋರಾಟ ಕೇವಲ ಒಗೋನಿಗೆ ಮಾತ್ರ ಸೀಮಿತವಾಗಿರದೇ ಶೆಲ್ ಕಂಪೆನಿ ಎಲ್ಲೆಲ್ಲಿ ಈ ರೀತಿಯ ಪರಿಸರದ ಮೇಲೆ ಅತ್ಯಾಚಾರದಲ್ಲಿ ತೊಡಗಿದೆಯೋ ಅಲ್ಲೆಲ್ಲಾ ವಿಸ್ತರಿಸತೊಡಗಿತು. 'ಕೆನ್ ವೈರಸ್' ಹೀಗೆ ಎಲ್ಲ ಕಡೆಯಿಂದಲೂ ಶೆಲ್ ಕಂಪೆನಿಗೆ ಆವರಿಸಿಕೊಳ್ಳತೊಡಗಿತ್ತು. ಕೆನ್ ಬದುಕಿದ್ದರೆ ತಾನು ಇಡೀ ನೈಜೀರಿಯಾದಿಂದ ಕೆಟ್ಟೆನೋ ಸತ್ತೆನೋ ಎಂದು ಓಡಿಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಭೀತಿ ಶೆಲ್ ಕಂಪೆನಿಯನ್ನು ಕಾಡಲಾರಂಭಿಸಿತು. ಆದ್ದರಿಂದ ಕೆನ್ ಅವರನ್ನು ಮುಗಿಸುವುದಕ್ಕೆ ಮುಂದಾಯಿತು. ಅಂದಿನ ನೈಜೀರಿಯನ್ ಮಿಲಿಟರಿ ಸರ್ಕಾರ ಮತ್ತು ಅಧಿಕಾರಿಗಳಿಗೆ ಭಾರೀ ಲಂಚ ಕೊಟ್ಟು ತನ್ನ ವಿರುದ್ಧದ ಜನಾಂದೋಲನಕ್ಕೆ ನೇತೃತ್ವ ವಹಿಸಿದ್ದ ಕೆನ್ ಮತ್ತು ಇತರ ನಾಯಕರನ್ನು ಬಂಧಿಸಿ ಗಲ್ಲಿಗೇರಿಸುವಂತೆ ಮಾಡಿತು. ನೈಜೀರಿಯನ್ ಮಿಲಿಟರಿ ಸರ್ಕಾರ ಎಷ್ಟು ಕ್ರೂರವಾಗಿತ್ತೆಂದರೆ ತಮ್ಮ ಸಂಗಾತಿಗಳು ನೇಣುಗಂಬಕ್ಕೇರುವುದನ್ನು ಕೆನ್ ಅವರಿಗೆ ಕಣ್ಣಾರೆ ತೋರಿಸಬೇಕೆಂಬ ಉದ್ದೇಶದಿಂದ ಮೊದಲು ಉಳಿದ ಎಲ್ಲಾ ನಾಯಕರನ್ನು ಅವರ ಕಣ್ಣೆದುರಿಗೇ ಗಲ್ಲಿಗೇರಿಸಿತು. ಆ ಮೂಲಕ ತಾನು ಸತ್ತ ಮೇಲೆ ಉಳಿದವರಾದರೂ ತನ್ನ ಹೋರಾಟವನ್ನು ಮುಂದುವರೆಸುತ್ತಾರೆಂಬ ಕೆನ್ ಅವರ ಕನಸನ್ನೂ ಛಿದ್ರಗೊಳಿಸುವುದಕ್ಕೆ ಪ್ರಯತ್ನಿಸಿತು. ಎಲ್ಲರನ್ನೂ ಹತ್ಯೆಗೈದ ಮೇಲೆ ಕೊನೆಯದಾಗಿ 1995ರ ನವೆಂಬರ್ 10ರಂದು ಕೆನ್ ಸಾರೋ ವಿವಾ ಅವರನ್ನೂ ನೇಣಿಗೇರಿಸಲಾಯಿತು.

ಕೆನ್ ಸಾರೋ ವಿವಾ ಅವರ ಹತ್ಯೆ ಇಡೀ ವಿಶ್ವದ ಮಾನವ ಹಕ್ಕುಗಳ ಹೋರಾಟಗಾರರು, ಪರಿಸರ ಚಳವಳಿಗಾರರು, ಶಾಂತಿಯುತ ಹೋರಾಟದಲ್ಲಿ ನಂಬಿಕೆಯಿಟ್ಟಿರುವ ಜನಸಮುದಾಯಗಳನ್ನು ಬಡಿದೆಬ್ಬಿಸಿತು. ವಿಶ್ವದಾದ್ಯಂತ ಪ್ರತಿಭಟನೆಗಳು ವ್ಯಕ್ತವಾದವು. ಇದು ಕೆನ್ ಅವರ ಹತ್ಯೆಯ ಕೇಸು ಅಂತರರಾಷ್ಟ್ರೀಯ ನ್ಯಾಯಾಲಯದ ಮೆಟ್ಟಿಲೇರುವುದಕ್ಕೆ ಕಾರಣವಾಯಿತು. ಹದಿಮೂರು ವರ್ಷಗಳ ಈ ಸುದೀರ್ಘ ವಿಚಾರಣೆಯ ನಂತರ ಇನ್ನೇನು ಶೆಲ್ ಕಂಪೆನಿಯೇ ಅದಕ್ಕೆ ನೇರ ಹೊಣೆಗಾರ ಎಂಬ ತೀರ್ಪು ಬರುವ ಸಂಭವವಿತ್ತು. ಅಷ್ಟರಲ್ಲಿ ಕೋರ್ಟಿನ ಹೊರಗಡೆ ಕೆನ್ ಅವರ ಪುತ್ರ ಮತ್ತು ಸಂಬಂಧಿಗಳೊಂದಿಗೆ ರಾಜೀ ಮಾಡಿಕೊಂಡು ತನ್ನ ನಾಲ್ಕು ಗಂಟೆಗಳ ಲಾಭವನ್ನು ಪರಿಹಾರವಾಗಿ ಕೊಡುವುದಾಗಿ ಶೆಲ್ ಒಪ್ಪಿಕೊಂಡಿದೆ. 'ಇದು ಶೆಲ್ ವಿರುದ್ಧದ ಮೊದಲ ಜಯ' ಎಂದು ಇದನ್ನು ಕೆನ್ ಸಂಬಂಧಿಕರು ಸಮರ್ಥಿಸಿಕೊಂಡಿದ್ದಾರೆ. ಆದರೆ ಕೆನ್ ಸಾರೋ ವಿವಾ ಬಯಸಿದ್ದು ಇದನ್ನಲ್ಲ. ಶೆಲ್ ಕಂಪೆನಿಯನ್ನೂ ಒಳಗೊಂಡಂತೆ ಎಲ್ಲಾ ಲೂಟಿಕೋರರಿಂದ ತಮ್ಮ ಮಾತೃಭೂಮಿಯನ್ನು ವಿಮೋಚನೆಗೊಳಿಸುವುದು ಅವರ ಬಯಕೆಯಾಗಿತ್ತು. ಕೆನ್ ಹತ್ಯೆಯ ನಂತರ ಆಯಿಲ್ ಕಂಪೆನಿಗಳು ಮತ್ತು ಅವುಗಳ ಸಾಕುನಾಯಿಗಳಂತೆ ವರ್ತಿಸುತ್ತಿರುವ ನೈಜೀರಿಯನ್ ಸರ್ಕಾರ ಶಾಂತಿಯುತ ಮತ್ತು ಅಹಿಂಸಾತ್ಮಕ ಹೋರಾಟಗಳಿಗೆ ಸ್ಪಂದಿಸುವಷ್ಟು ಸಂವೇದನಾಶೀಲರಲ್ಲ ಎಂಬುದು ಮತ್ತೊಮ್ಮೆ ಜಗಜ್ಜಾಹೀರಾಯಿತು. ಈ ಹಿನ್ನೆಲೆಯಲ್ಲಿ ತಮ್ಮ ತಾಯ್ನೆಲವನ್ನು ವಿಮೋಚನೆಗೊಳಿಸುವುದಕ್ಕಾಗಿ ಹಲವಾರು ಸಶಸ್ತ್ರ ಗುಂಪುಗಳು ಹುಟ್ಟಿಕೊಂಡು ಸರ್ಕಾರದೊಂದಿಗೆ ಕಾದಾಡಲಾರಂಭಿಸಿವೆ. ಅವುಗಳದ್ದೂ ಕೂಡ ಕೆನ್ ಅವರ ಆಶಯವೆ. ಆದರೆ ಮಾರ್ಗ ಮಾತ್ರ ಬೇರೆ. ●






ಶಿವಸೇನೆಯ ವಡಾ-ಪಾವ್ ರಾಜಕೀಯ

ಇದು ನಾಚಿಕೆ-ಮಾನ-ಮರ್ಯಾದೆ ಇಲ್ಲದಿರೋ ಜನ ಮಾಡೋ ಕೆಲಸ.

ಮುಂಬೈನಲ್ಲಿ ಇದ್ದು ಬಂದವರಿಗೆ ಅಥವಾ ಮುಂಬೈ ಜೊತೆ ನಿಕಟಸಂಪರ್ಕ ಹೊಂದಿರುವ ಜನರಿಗೆ ವಡಾ-ಪಾವ್ ಹೆಸರು ಚೆನ್ನಾಗಿ ಗೊತ್ತಿರುತ್ತದೆ. ಬನ್‌ಅನ್ನು ಕತ್ತರಿಸಿ ಅದರೊಳಗೆ ಕರಿದ ಆಲೂಗಡ್ಡೆ ವಡೆ, ಒಣ ಮಸಾಲೆ, ಉಪ್ಪು, ಕಾರ, ಅವುಗಳ ಮೇಲೊಂದೆರಡು ಕರಿದ ಹಸಿಮೆಣಸಿನ ಕಾಯಿಗಳನ್ನು ಹಾಕಿದರೆ ವಡಾ-ಪಾವ್ ಸಿದ್ಧ. ಮುಂಬೈನ ರಸ್ತೆ ಬದಿಯಲ್ಲಿ ಸಾವಿರಾರು ತಳ್ಳು ಅಂಗಡಿಗಳು ದಿನನಿತ್ಯ ವಡಾ-ಪಾವ್ ಮಾರಾಟ ಮಾಡುತ್ತವೆ. ಮುಂಬೈನಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಂದ ಹಿಡಿದು ವಿವಿಧ ಚಿಕ್ಕ-ದೊಡ್ಡ ಕಂಪೆನಿಗಳಲ್ಲಿ ಕೆಲಸ ಮಾಡುವ ಎಕ್ಸಿಕ್ಯೂಟಿವ್‌ಗಳ ತನಕ ಲಕ್ಷಾಂತರ ಜನಕ್ಕೆ ವಡಾ-ಪಾವ್ ಮಧ್ಯಾಹ್ನದ ಊಟವಾಗಿದೆ. ಒಂದು ಅಂದಾಜಿನ ಪ್ರಕಾರ ಪ್ರತಿದಿನ ಏನಿಲ್ಲವೆಂದರೂ 2,00,000 ವಡಾ-ಪಾವ್‌ಗಳನ್ನು ಮಾರಾಟ ಮಾಡಲಾಗುತ್ತದೆ. ಸುಮಾರು 7,000 ಜನರು ತಳ್ಳು ಗಾಡಿಗಳಲ್ಲಿ ಇದನ್ನು ಮಾರುತ್ತಲೇ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಮುಂಬೈನ ಕಾಸ್ಮೋಪಾಲಿಟನ್ ಕಲ್ಚರ್‌ನೊಂದಿಗೆ ಮುಂಬೈ ಮೂಲದ ಈ ವಡಾ-ಪಾವ್ ಕೂಡ ಅವಿಭಾಜ್ಯ ಅಂಗವಾಗಿ ಬೆರೆತುಹೋಗಿದೆ.




ಆದರೆ ಈಗಿನ ದುರಂತ ಏನೆಂದರೆ ಮಹಾರಾಷ್ಟ್ರದಲ್ಲಿ ಕೋಮುಗಲಭೆಗಳನ್ನು ಹಚ್ಚಿ ಸದಾ ಮುಸ್ಲಿಮರ ರಕ್ತಕ್ಕಾಗಿ ಹಾತೊರೆಯುವ ಶಿವಸೇನೆ ಈ ವಡಾ-ಪಾವನ್ನೂ ಕೇಸರೀಕರಣಗೊಳಿಸಲು ಹೊರಟಿದೆ. ಅದರ ಭಾಗವಾಗಿ ಈಗ 'ವಡಾ-ಪಾವ್'ಗೆ 'ಶಿವ ವಡಾ-ಪಾವ್' ಎಂದು ಮರುನಾಮಕರಣ ಮಾಡಿ ಅದನ್ನು ಮಾರಾಟ ಮಾಡುವುದಕ್ಕಾಗಿ ಸುಮಾರು 125 ಜನರಿಗೆ ಬೃಹತ್ ಮುಂಬೈ ಮಹಾನಾಗರ ಪಾಲಿಕೆ ಕಡೆಯಿಂದ ಲೈಸನ್ಸ್ ಕೊಡಿಸಿದೆ. ಇಲ್ಲಿ 'ಶಿವ' ಶಿವಾಜಿ. 'ಶಿವಸೇನೆ'ಯ ಹೆಸರೇ ಸೂಚಿಸುವಂತೆ ಅದಕ್ಕೆ ಶಿವಾಜಿಯೇ ಆದರ್ಶ ಪುರುಷ. ಚರಿತ್ರೆಯನ್ನು ವಸ್ತುನಿಷ್ಠವಾಗಿ ನೋಡಿದರೆ ಶಿವಾಜಿ ಜಾತ್ಯತೀತ ಮನಸ್ಸಿನ ಆಡಳಿತಗಾರನಾಗಿದ್ದ, ಆದರೆ ಆತನ ಹೆಸರಿನಲ್ಲಿ ಭಾಳಠಾಕ್ರೆ ಕಟ್ಟಿರುವ ಶಿವಸೇನೆ ಮಾತ್ರ ಸದಾ ಮುಸ್ಲಿಮರ ರಕ್ತಕಾರಲು ಹಾತೊರೆಯುವ ರಕ್ತಪಿಪಾಸು ಸಂಘಟನೆಯಾಗಿದೆ. ಈಗ ಅದು 'ದೇಶಪ್ರೇಮ' ಹಾಗೂ 'ಮರಾಠಿ ಪ್ರೇಮ' ಹೆಸರಿನಲ್ಲಿ ಪಕ್ಕಾ ಕೇಸರಿ ಬಿಸಿನೆಸ್‌ಗೆ ಕೂಡ ಇಳಿದಿದೆ. 'ಶಿವ ವಡಾ-ಪಾವ್' ಅದರ ಆರಂಭಿಕ ಹೆಜ್ಜೆ.

ಬೃಹತ್ ಮುಂಬೈ ಮಹಾನಗರ ಪಾಲಿಕೆಯಲ್ಲಿ ಶಿವ ವಡಾ-ಪಾವ್ ಮಾರಾಟಕ್ಕೆ ಲೈಸನ್ಸ್ ಕೊಡುವ ವಿಚಾರ ಬಂದಾಗ ಕಾಂಗ್ರೆಸ್ ಸದಸ್ಯರು ಅದನ್ನು ಬಲವಾಗಿ ವಿರೋಧಿಸಿದರು. 'ನಾವು ವಡಾ-ಪಾವ್ ವಿರೋಧಿಗಳಲ್ಲ, ಆದರೆ ಶಿವಸೇನೆ ಇಂಥ ಚೀಪ್ ರಾಜಕಾರಣಕ್ಕಿಳಿದಿರುವುದನ್ನು ಬಲವಾಗಿ ವಿರೋಧಿಸುತ್ತೇವೆ' ಎಂದು ಹೇಳಿದರು. ಆದರೆ ಪಾಲಿಕೆಯಲ್ಲಿ ಶಿವಸೇನೆಯ ಸದಸ್ಯರೆ ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಶಿವಸೇನೆ ಈ ವಿಚಾರದಲ್ಲಿ ಗೆದ್ದಿತು. ●

ವಿಂಡೋಸ್ ಶಟ್‌ಡೌನ್!

ಈ ಹಿಂದಿನ 'ಲಂಕೇಶ್'ನಲ್ಲಿ ಜಗತ್ತಿನ ಅತಿದೊಡ್ಡ ಶ್ರೀಮಂತನಾದ ಸಾಫ್ಟ್‌ವೇರ್ ಕುಳ ಬಿಲ್ ಗೇಟ್ಸ್ ಭಾರತದಲ್ಲಿ ಏಡ್ಸ್ ನಿವಾರಣೆಗಾಗಿ ತನ್ನ **Bill & Melinda Gates Foundation** ಮೂಲಕ 2,500 ಕೋಟಿ ರೂಪಾಯಿಗಳನ್ನು ಸುರಿದು ಏಡ್ಸ್ ರೋಗ ತಡೆಗೆ ಕೈ ಹಾಕಿದ್ದರ ಬಗ್ಗೆ ಬರೆದಿದ್ದೆವು. ಪಕ್ಕಾ ಬಿಜಿನೆಸ್‌ಮೆನ್‌ಗಳ ಕೈಯಲ್ಲಿ ಇಂಥ ಸೂಕ್ಷ್ಮ ಸಾಮಾಜಿಕ ಕೆಲಸವೊಂದನ್ನು ಕೊಟ್ಟರೆ ಏನಾಗುತ್ತದೆ ಎಂಬುದರ ಬಗ್ಗೆಯೂ ವಿಶ್ಲೇಷಿಸಿದ್ದೆವು. ನಮ್ಮ ನಿರೀಕ್ಷೆಯಂತೆ ಈಗ ಬಿಲ್‌ಗೇಟ್ಸ್ ಒಂದಿಷ್ಟೂ ಗುರಿಸಾಧನೆ ಮಾಡದೆ ತನ್ನ ಯೋಜನೆಯನ್ನೇ ಕೈಬಿಟ್ಟು ಕುಳಿತಿದ್ದಾನೆ.


ಬಿಲ್‌ಗೇಟ್ಸ್

ಬಿಲ್‌ಗೇಟ್ಸ್ ಒಬ್ಬ ಯಶಸ್ವೀ ಬಿಸಿನೆಸ್‌ಮ್ಯಾನ್. ಆದರೆ ಆತ ಯಶಸ್ವೀ ಸಾಮಾಜಿಕ ಕಾರ್ಯಕರ್ತ ಅಲ್ಲ. ಸಾಮಾಜಿಕ ಸಮಸ್ಯೆಯೊಂದನ್ನೂ ಬಿಸಿನೆಸ್ ನಡೆಸಿದಂತೆಯೇ ನಡೆಸುವುದಕ್ಕೆ ಹೋಗಿ ಆತ ಗುಂಡಿಗೆ ಬಿದ್ದಿದ್ದಾನೆ. ಆತನ ತಂಡದಲ್ಲಿದ್ದ ಜನರೆಲ್ಲ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡಿದ್ದವರೇ. ಆದ್ದರಿಂದ ಅವರು ಏಡ್ಸ್ ತಡೆಗಾಗಿ ಸ್ಥಾಪಿಸಿದ್ದ 'ಆಹ್ವಾನ್' ಸಂಘಟನೆಯನ್ನು ಒಂದು **'venture'** (ಕಂಪೆನಿ) ಎಂತಲೂ, ಏಡ್ಸ್ ತಡೆ ಕಾರ್ಯಕ್ರಮವನ್ನು **'franchise'** (ಗುತ್ತಿಗೆದಾರ) ಎಂತಲೂ, ವೇಶ್ಯೆಯರನ್ನು **'consumer'** (ಗ್ರಾಹಕ) ಎಂತಲೂ ವ್ಯಾಖ್ಯಾನಿಸಿದ್ದರು. ಇವತ್ತು ಆಹ್ವಾನ್ ಬಾಗಿಲು ಮುಚ್ಚಿದ್ದರೆ ಅದಕ್ಕೆ ಕಾರಣ ಅವರ ಬಿಸಿನೆಸ್ ಮನೋಬುದ್ಧಿ!


KMF: ಯಡ್ಡಿ-ಗೌಡ ಬುಡಕ್ಕೆ ಬೀಳುತ್ತಿತ್ತು ಕೊಡಲಿ ಏಟು

ಹಾಲು ಒಕ್ಕೂಟವಾದ ಕೆಎಂಎಫ್‌ನ ಅಧ್ಯಕ್ಷ ಗಾದಿಗೆ ಗಣಿ ಧಣಿಗಳಲ್ಲಿ ಒಬ್ಬರಾದ ಸೋಮಶೇಖರ ರೆಡ್ಡಿ ಆಯ್ಕೆಯಾಗಿದ್ದೇ ತಡ; ಬಿಜೆಪಿ ಪಕ್ಷದಲ್ಲಿ ಈಗ ಹಾಲಾಹಲ ಮತ್ತು ಕೋಲಾಹಲ ಉದ್ಭವಿಸಿದೆ. ಅತ್ಯಂತ ರಾಜಕೀಯ ಚತುರತೆಯಿಂದ ಸೋಮಶೇಖರ ರೆಡ್ಡಿಯನ್ನು ಅವರ ಸಹೋದರ ಕರುಣಾಕರ ರೆಡ್ಡಿ ಈ ಸ್ಥಾನದಲ್ಲಿ ಕೂರಿಸಿರುವುದನ್ನು ನೋಡಿ ಸ್ವತಃ ಯಡಿಯೂರಪ್ಪನವರೇ ಕಂಗಾಲಾಗಿಹೋಗಿದ್ದಾರೆ.

ವಾಸ್ತವವಾಗಿ ಎಚ್.ಡಿ.ರೇವಣ್ಣ ಅವರು ಕಳೆದ ಎರಡು ದಶಕಗಳಿಂದ ಅಲಂಕರಿಸಿದ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಿಜೆಪಿಯ ರಾಜ್ಯಾಧ್ಯಕ್ಷ ಸದಾನಂದಗೌಡ ಜಂಟಿಯಾಗಿ ಆಯ್ಕೆ ಮಾಡಿದ್ದು ತೀರ್ಥಹಳ್ಳಿಯ ಮಾಜಿ ಶಾಸಕ ಆರಗ ಜ್ಞಾನೇಂದ್ರರನ್ನು. ಜ್ಞಾನೇಂದ್ರ ಸಮರ್ಥವಾಗಿ ರೇವಣ್ಣನವರ ಭ್ರಷ್ಟಾಚಾರಗಳನ್ನು ಹೊರತರುತ್ತಾರೆ; ಹಾಲು ಒಕ್ಕೂಟ ಬಿಜೆಪಿಯ ಕೈಯಲ್ಲೇ ಇರುವಂತೆ ಮಾಡುತ್ತಾರೆ ಎಂಬುದು ಅವರಿಬ್ಬರ ಲೆಕ್ಕಾಚಾರವಾಗಿತ್ತು. ಯಾವಾಗ ಹಾಲು ಉತ್ಪಾದಕರ ಸಂಘದ ಚುನಾವಣೆಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಲು ಆರಂಭಿಸಿತೋ ಆಗಲೇ ಆರಗ ಜ್ಞಾನೇಂದ್ರನ ಹೆಸರು ಚಾಲ್ತಿಗೆ ಬಂತು. ಈ ವಿಚಾರವಾಗಿ ಒಂದೆರಡು ದಿನಪತ್ರಿಕೆಗಳು ಪುಂಖಾನುಪುಂಖವಾಗಿ ವರದಿಗಳನ್ನೂ ಪ್ರಕಟಿಸಿದವು.



ಯಡಿಯೂರಪ್ಪ

ಆದರೆ ಅದೇ ಸಂದರ್ಭದಲ್ಲಿ ಬಳ್ಳಾರಿಯ ಗಣಿರೆಡ್ಡಿಗಳು ತೆರೆಮರೆಯಲ್ಲಿ ದೊಡ್ಡ ರಾಜಕೀಯ ಪಿತೂರಿಯನ್ನೇ ನಡೆಸಿದ್ದರು. ಹೇಗಾದರೂ ಮಾಡಿ ತಮ್ಮ ಆಜನ್ಮ ಶತ್ರುವಾದ ದೇವೇಗೌಡರ ಪುತ್ರ ರೇವಣ್ಣ ಅಲಂಕರಿಸಿದ್ದ ಸಿಂಹಾಸನದಲ್ಲೇ ತಾವೂ ಕುಳಿತುಕೊಳ್ಳಬೇಕು ಎಂದು ರೆಡ್ಡಿ ಸಹೋದರರು ಸ್ಕೆಚ್ ಹಾಕಿದರು. ಇವರ ಕಾರ್ಯತಂತ್ರ ಎಷ್ಟು ನಿಗೂಢ ಮತ್ತು ಸೀಕ್ರೆಟ್ ಆಗಿ ನಡೆಯಿತೆಂದರೆ, ಮುಖ್ಯಮಂತ್ರಿ ಯಡ್ಡಿಗಾಗಲಿ ಪಕ್ಷದ ಅಧ್ಯಕ್ಷ ಸದಾನಂದ ಗೌಡರಿಗಾಗಲಿ ಇದರ ಬಗ್ಗೆ ಕಿಂಚಿತ್ತು ಸುಳಿವನ್ನೂ ಬಿಟ್ಟುಕೊಡಲಿಲ್ಲ. ಯಾಕೆಂದರೆ ಆ ಬಗ್ಗೆ ಏನಾದರೂ ಗೊತ್ತಾದರೆ ಯಡ್ಡಿ ಪ್ರತಿತಂತ್ರ ಹೂಡಿ ತಮ್ಮನ್ನು ಮಟ್ಟ ಹಾಕುತ್ತಾರೆ ಎಂಬುದು ರೆಡ್ಡಿ ಸಹೋದರರಿಗೆ ಚೆನ್ನಾಗಿಯೇ ಗೊತ್ತಿತ್ತು.



ಜನಾರ್ದನರೆಡ್ಡಿ

ಆದರೆ ಯಾವಾಗ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವ ಕ್ಷಣ ಎದುರಾಯಿತೋ ಆಗ ಪ್ರವಾಸೋದ್ಯಮ ಸಚಿವ ಜನಾರ್ದನ ರೆಡ್ಡಿ ತನ್ನ ಬತ್ತಳಿಕೆಯಿಂದ ಒಂದು ಬಾಣವನ್ನು ಬಿಟ್ಟರು. ಜನಾರ್ದನ ರೆಡ್ಡಿ ಬಿಟ್ಟ ಬಾಣದಿಂದ ತತ್ತರಿಸಿಹೋದ ಯಡ್ಡಿ ಮತ್ತು ಸದಾನಂದ ಗೌಡ ಅದರಿಂದ ತಪ್ಪಿಸಿಕೊಳ್ಳಲಾರದೇ ತುಂಬಾ ಸುಲಭವಾಗಿ ಟ್ರ್ಯಾಪ್ ಆದರು. ಜನಾರ್ದನ ರೆಡ್ಡಿ ಅಂದು ಹೇಳಿದ್ದು ಇಷ್ಟೇ: "ಒಂದೋ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನವನ್ನು ನಮಗೆ ಬಿಟ್ಟುಕೊಡಿ. ಇಲ್ಲದಿದ್ದರೆ ಸದ್ಯದಲ್ಲೇ ಬಿಜೆಪಿಯ ರಾಜ್ಯಾಧ್ಯಕ್ಷ ಸ್ಥಾನದಿಂದ ಸದಾನಂದ ಗೌಡ ಇಳಿದಾಗ ಆ ಸ್ಥಾನವನ್ನು ನಮಗೆ ನೀಡಿ. ಎರಡರಲ್ಲಿ ಆಯ್ಕೆ ನಿಮ್ಮದು...."

ಈ ಸವಾಲನ್ನು ಕೇಳಿ ಯಡ್ಡಿ ಮತ್ತು ಗೌಡ ತತ್ತರಿಸುತ್ತಿದ್ದಾಗಲೇ ರೆಡ್ಡಿ ಇನ್ನೊಂದು ಮಾತು ಸೇರಿಸಿದರು. "ನಾವು ಚುನಾವಣೆಯಲ್ಲಿ ಸುಮಾರು ನಲವತ್ತೇಳು ಶಾಸಕರನ್ನು ಗೆಲ್ಲಿಸಿದ್ದೇವೆ. ಅಷ್ಟು ಜನ ಶಾಸಕರನ್ನು ಗೆಲ್ಲಿಸಿದ ನಮಗೆ ನೀವು ಅಧ್ಯಕ್ಷ ಪದವಿ ನೀಡಿದರೆ ತಪ್ಪೇನು?" ಎಂದು ರೆಡ್ಡಿ ಬಹಳ ನಯವಾಗಿ ಸೆಡ್ಡು ಹೊಡೆದರಂತೆ. ಇದರಿಂದ ಯಡ್ಡಿ ನಿಜಕ್ಕೂ ಕಂಗಾಲಾದರು.


ದೇವೇಗೌಡ

ನಲವತ್ತೇಳು ಶಾಸಕರ ಬೆಂಬಲದಿಂದಲೇ ದಿನನಿತ್ಯವೂ ಭಿನ್ನಮತೀಯ ಚಟುವಟಿಕೆಗಳಿಗೆ ತುಪ್ಪ ಸುರಿಯುತ್ತಾ ಯಡ್ಡಿಗೆ ಮುಜುಗರ ಉಂಟು ಮಾಡುತ್ತಿರುವ, ಹೇಗಾದರೂ ಮಾಡಿ ತಾವೇ ಮುಖ್ಯಮಂತ್ರಿ ಸ್ಥಾನವನ್ನು ಪಡೆಯಬೇಕೆಂದು ಕುತಂತ್ರಗಳನ್ನು ನಡೆಸುತ್ತಿರುವ ರೆಡ್ಡಿಗಳಿಗೆ ಪಕ್ಷದ ಅಧ್ಯಕ್ಷ ಸ್ಥಾನ ನೀಡಿದರೆ ಇಡೀ ಪಕ್ಷವೇ ತಮ್ಮ ಕೈ ತಪ್ಪುತ್ತದೆ; ಆಗ ತಮಗೆ ಉಳಿಗಾಲವಿಲ್ಲ ಎಂಬುದು ಯಡ್ಡಿಗೂ, ಗೌಡನಿಗೂ ಗೊತ್ತಿರುವ ವಿಚಾರವೇ. ತಮ್ಮಿಬ್ಬರ ಸ್ಥಾನಗಳಿಗೇ ರೆಡ್ಡಿ ಸಹೋದರರಿಂದ ಹೀಗೆ ಸಂಚಕಾರ ಎದುರಾಗುತ್ತಿರುವುದನ್ನು ಅರಿತ ಯಡ್ಡಿ-ಗೌಡ ಕೂಡಲೇ ಕಾರ್ಯೋನ್ಮುಖರಾಗಿ ಆರಗ ಜ್ಞಾನೇಂದ್ರನಿಗೆ ಕೈ ಕೊಟ್ಟರು. ಗಂಡಹೆಂಡಿರ ಜಗಳದ ನಡುವೆ ಕೂಸು ಬಡವಾಯ್ತು ಎಂಬ ಗಾದೆ ಮಾತಿನಂತೆ ಈ ರೆಡ್ಡಿ ಮತ್ತು ಯಡ್ಡಿಗಳ ಅಧಿಕಾರ ದಾಹದ ಜಗ್ಗಾಟದಲ್ಲಿ ಆರಗ ಜ್ಞಾನೇಂದ್ರ ಬಲಿಪಶುವಾಗಿದ್ದಾರೆ. ಹಾಲು ಉತ್ಪಾದಕ ಮಂಡಳಿಯ ಅಧ್ಯಕ್ಷ ಸ್ಥಾನ ಅಲಂಕರಿಸುವ ಕನಸನ್ನು ಕಾಣುತ್ತಿದ್ದ ಆರಗ ಜ್ಞಾನೇಂದ್ರ ಈಗ ತನ್ನ ರಾಜಕೀಯ ಜೀವನದ ಪುನಶ್ಚೇತನಕ್ಕಾಗಿ ಬೇರೆ ದಿಕ್ಕಿನತ್ತ ನೋಡಬೇಕಾಗಿದೆ.


ಕರುಣಾಕರರೆಡ್ಡಿ

ಈ ಮಧ್ಯೆ ಯಡ್ಡಿ ಮತ್ತು ಸದಾನಂದ ಗೌಡ ಪರಸ್ಪರ ಸಮಾಲೋಚನೆ ನಡೆಸಿ, ರೆಡ್ಡಿ ಸಹೋದರರ ಎದುರು ಹೊಸ ಸೂತ್ರವೊಂದನ್ನು ಇಟ್ಟಿದ್ದಾರೆ. ಅದರ ಪ್ರಕಾರ ಮುಂದಿನ ಮೂರು ತಿಂಗಳು ಸೋಮಶೇಖರ ರೆಡ್ಡಿ ಕೆಎಂಎಫ್‌ನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುತ್ತಾರೆ. ಅನಂತರ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುವ ಸದಾನಂದ ಗೌಡರಿಗೆ ಆ ಸ್ಥಾನವನ್ನು


ರೇವಣ್ಣ

ಅವರು ಬಿಟ್ಟುಕೊಡುತ್ತಾರೆ. ಹಾಗೆಂದು ಯಡ್ಡಿ-ಗೌಡ ಜೋಡಿ ಮಾಧ್ಯಮಗಳಲ್ಲಿ ಪುಕಾರನ್ನೂ ಎಬ್ಬಿಸಿದವು. ಆದರೆ ಅದರಿಂದ ರೆಡ್ಡಿಗಳಿಗೆ ಯಾವ ಪ್ರಯೋಜನವೂ ಇಲ್ಲವಾದ್ದರಿಂದ ಅವರು ಈ ಸೂತ್ರವನ್ನು ತಿರಸ್ಕರಿಸಿ ತಾವೇ ಕೆಎಂಎಫ್ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯುವುದಾಗಿಯೂ, ಸದಾನಂದ ಗೌಡರಿಗೆ ಯಡ್ಡಿ ಬೇರೆ ಯಾವುದಾದರೂ ಸ್ಥಾನವನ್ನು ಕಲ್ಪಿಸಬೇಕೆಂದು ಹೇಳಿದ್ದಾರೆ.

ಈಗಾಗಲೇ ಪ್ರವಾಸೋದ್ಯಮ ಇಲಾಖೆ, ಕಂದಾಯ ಇಲಾಖೆ, ಆರೋಗ್ಯ ಇಲಾಖೆ... ಮೊದಲಾದ ಫಲಪ್ರದ ಇಲಾಖೆಗಳನ್ನು ತಮ್ಮದಾಗಿಸಿಕೊಂಡಿರುವ ಈ ಕುಬೇರ ರೆಡ್ಡಿಗಳಿಗೆ ಜುಜುಬಿ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನ ಅಂತಹ ಆಕರ್ಷಣೆ ಏನಲ್ಲ. ರೇವಣ್ಣನವರ ಸ್ಥಾನದಲ್ಲಿ ಕುಳಿತುಕೊಳ್ಳುವುದೇ ಪಾಳೆಗಾರ ಸಂಸ್ಕೃತಿಯ ಅವರಿಗೆ ಮುಖ್ಯವಾದ ಸಂಗತಿಯಾಗಿದೆ. ಜೊತೆಗೆ ಆ ಸ್ಥಾನದಲ್ಲಿದ್ದು ರೇವಣ್ಣನವರ ಅಧಿಕಾರಾವಧಿಯಲ್ಲಿ ಏನಾದರೂ ಲೆಕ್ಕ ತಪ್ಪಿದೆಯಾ ಎಂಬ ಅಂಕಿ ಅಂಶಗಳನ್ನು ಸಂಗ್ರಹಿಸಿ, ರೇವಣ್ಣನ ಮಾನ ಹರಾಜು ಹಾಕುವುದೇ ಇವರ ಪರಮಗುರಿಯಾಗಿದೆ. ಮುಂಬರುವ ದಿನಗಳಲ್ಲಿ ರೇವಣ್ಣ ಅಥವಾ ಅವರ ಕುಟುಂಬದವರು ತಮ್ಮ ವಿರುದ್ಧ ಏನಾದರೂ ಬಾಲ ಬಿಚ್ಚಿದರೆ ಆಗ ಪ್ರತಿ ಅಸ್ತ್ರವಾಗಿ ಕೆಎಂಎಫ್ ಹಗರಣಗಳನ್ನು ಬಾಣಗಳಾಗಿ ಪ್ರಯೋಗಿಸುವುದು ರೆಡ್ಡಿಗಳ ಬಹುಮುಖ್ಯ ರಾಜಕೀಯ ಷಡ್ಯಂತ್ರವಾಗಿದೆ.

ಒಟ್ಟಾರೆ ಈ ಕ್ಷಿಪ್ರ ಕ್ಷೀರ ಕ್ರಾಂತಿಯಲ್ಲಿ ಬಹಳ ಜಾಣತನದಿಂದ ಬಳ್ಳಾರಿ ಧಣಿಗಳು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದಿದ್ದಾರೆ. ಒಂದೆಡೆ ತಮ್ಮದೇ ಪಕ್ಷದ ನಾಯಕರನ್ನು ಇನ್ನೊಂದೆಡೆ ಗೌಡರ ಕುಟುಂಬದ ಮೇಲೆ ದಿಗ್ಬಂಧನವನ್ನು ಹೇರಿದ್ದಾರೆ. ಕೆ ಎಂ ಎಫ್ ಮೇಲೆ ರೆಡ್ಡಿಗಳು ಅಧಿಕಾರ ಸಾಧಿಸಿದ ರೀತಿಯನ್ನು ನೋಡಿದರೆ, ಮುಂದೊಂದು ದಿನ ಇದೇ ರೀತಿಯ ಅವರು ಮೌನವಾಗಿ ಮುಖ್ಯಮಂತ್ರಿ ಪದವಿಯನ್ನೇ ಆಕ್ರಮಿಸಿಕೊಂಡರೂ ಯಾವುದೇ ಆಶ್ಚರ್ಯವಿಲ್ಲ ಎಂದು ಸ್ವತಃ ಬಿಜೆಪಿ ಶಾಸಕರೇ ಈಗ ಪಿಸುಗುಟ್ಟುತ್ತಿದ್ದಾರೆ. ಬಿಜೆಪಿಯಲ್ಲಿ ಅಂತಃಕಲಹ ಮತ್ತು ಅರಾಜಕತೆ ಅತ್ಯಂತ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ ಎಂಬುದಕ್ಕೆ ಈ ಹಾಲಿನ ಅಧ್ಯಕ್ಷಗಿರಿಗಾಗಿ ನಡೆದ ಈ 'ದಾದಾಗಿರಿ'ಯೇ ಸಾಕ್ಷಿ.

ಮೊನ್ನಿನ ಲೋಕಸಭಾ ಚುನಾವಣೆಯಲ್ಲಿ ತನ್ನವರಿಗೇ ಟಿಕೆಟ್ ನೀಡಿ ಅವರಲ್ಲಿ 19 ಜನರನ್ನು ಗೆಲ್ಲಿಸಿ ತಾನೋರ್ವ ರಾಷ್ಟ್ರನಾಯಕ ಎಂಬಂತೆ ಬೀಗುತ್ತಿದ್ದ ಯಡ್ಡಿಗೆ ಮುಂಬರುವ ದಿನಗಳಲ್ಲಿ ಬಳ್ಳಾರಿ ಗಣಿಧಣಿಗಳಿಂದ ಕಾಟ, ಕಿರುಕುಳ, ಪೀಕಲಾಟ ತಪ್ಪಿದ್ದಲ್ಲ. ರೆಡ್ಡಿಗಳ ರಾಜಕೀಯ ತಂತ್ರಗಳಿಗೆ ಯಡ್ಡಿ ಎಂತಹ ಪ್ರತಿತಂತ್ರಗಳನ್ನು ಹೆಣೆಯುತ್ತಾರೆ ಎಂಬುದರ ಮೇಲೆ ರಾಜ್ಯದ ರಾಜಕೀಯ ಭವಿಷ್ಯ ನಿಂತಿದೆ. ಹೀಗಾಗಿ ಈ 'ಹಾಲಾಟ'ಕ್ಕಿಂತ ಇನ್ನು ಮುಂದೆ ಹೆಚ್ಚು ಹೆಚ್ಚು ರಂಗಿನಾಟ, ಚೆಲ್ಲಾಟ, ಚೀರಾಟಗಳೇ ರಾಜ್ಯ ಬಿಜೆಪಿಯಲ್ಲಿ ರಾರಾಜಿಸಲಿವೆ. ಇದು ಅದರ ಮೊದಲ ಕಂತಷ್ಟೇ.

● ಸದಾಶಿವ ಶೆಣೈ



ವಿಜಯನ್

ಸಿಪಿಎಂ ಕೊನೆಗೂ ಭ್ರಷ್ಟಾಚಾರದ ಪರ ನಿಂತಿತು!

ಕೇರಳದ ಮುಖ್ಯಮಂತ್ರಿ ಸಿಪಿಎಂನ ವಿ.ಎಸ್.ಅಚ್ಯುತಾನಂದನ್ ಮತ್ತು ಸಿಪಿಎಂನ ರಾಜ್ಯ ಘಟಕದ ಕಾರ್ಯದರ್ಶಿ ಪಿಣರಾಯಿ ವಿಜಯನ್ ನಡುವಿನ ತಿಕ್ಕಾಟದಲ್ಲಿ ಅಂತಿಮವಾಗಿ ಪಿಣರಾಯಿ ವಿಜಯನ್ ಗೆದ್ದಿದ್ದಾರೆ. 1990ರ ದಶಕದ ಆರಂಭದಲ್ಲಿ ವಿಜಯನ್ ಕೇರಳದ ಇಂಧನ ಸಚಿವರಾಗಿದ್ದಾಗ ಕೆನಡಾದ ಕಂಪೆನಿಯೊಂದಕ್ಕೆ 374 ಕೋಟಿ ರೂ.ಗಳ ಗುತ್ತಿಗೆ ನೀಡುವಲ್ಲಿ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರವೆಸಗಿದ್ದರು ಎಂಬ ಆರೋಪದ ಮೇಲೆ ಸಿಬಿಐ ಅವರ ಮೇಲೆ ಕೇಸು ದಾಖಲಿಸಿತಲ್ಲದೇ ಅವರನ್ನು ಶಿಕ್ಷೆಗೆ ಗುರಿಪಡಿಸಲು ಕೆಲವು ನಿರ್ಣಾಯಕ ಹೆಜ್ಜೆಗಳನ್ನಿಟ್ಟಿತ್ತು. ವಿಜಯನ್ ಅವರ ಬಹುದಿನದ ರಾಜಕೀಯ ವೈರಿಯಾಗಿರುವ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಅವರೇ ಇದರ ಹಿಂದಿನ ರೂವಾರಿಯಾಗಿದ್ದರು.

ವಿಜಯನ್ ಮೇಲಿರುವ ಆರೋಪದಲ್ಲಿ ಸತ್ಯವೆಷ್ಟು-ಮಿಥ್ಯವೆಷ್ಟು ಎಂಬುದರ ಬಗ್ಗೆ ಪ್ರಾಮಾಣಿಕ ತನಿಖೆ ನಡೆಸುವುದರ ಬದಲಿಗೆ ಈಗ ಸಿಪಿಎಂನ ರಾಷ್ಟ್ರ ನಾಯಕತ್ವ ವಿಜಯನ್ ಪರ ವಹಿಸಿ ಅವರ ಭ್ರಷ್ಟಾಚಾರದ ವಿರುದ್ಧ ಸೆಡ್ಡು ಹೊಡೆದಿದ್ದ ಹಿರಿಯ ನಾಯಕ ಅಚ್ಯುತಾನಂದನ್ ಅವರನ್ನೇ ಪಾಲಿಟ್‌ಬ್ಯೂರೋದಿಂದ ಹೊರದಬ್ಬಿದೆ.

ಇದರಿಂದ ಸಿಪಿಎಂನ ರಾಷ್ಟ್ರ ನಾಯಕತ್ವದ ಮೇಲೆ ಪಿಣರಾಯಿ ವಿಜಯನ್‌ಗೆ ಎಷ್ಟರಮಟ್ಟಿಗೆ ಪ್ರಭಾವವಿದೆ ಎಂಬುದು ಬಯಲಾಗಿದೆ. ಮಾತ್ರವಲ್ಲ, ಭ್ರಷ್ಟಾಚಾರ ಮತ್ತು ಪಾರದರ್ಶಕತೆಯ ಬಗ್ಗೆ ಸಿಪಿಎಂ ಪಕ್ಷದ ಮನಸ್ಥಿತಿ ಎಂತಹದ್ದೂ ಎಂಬುದನ್ನೂ ತೋರ್ಪಡಿಸಿದೆ.


ಅಚ್ಯುತಾನಂದ್

ಆಹ್ವಾನ್ ತಂಡದವರು ಏಡ್ಸ್ ನಿವಾರಣೆಗೆಂದು ಗೇಟ್ಸ್ ...ದಿದ್ದ ಎರಡೂವರೆ ಸಾವಿರ ಕೋಟಿ ಹಣದಲ್ಲಿ ಏನು ...ದಿದರು ಎಂದು ನೋಡಿದರೆ ಬೇಸರವಾಗುತ್ತದೆ. ಆಹ್ವಾನ್ ...ಸ್ಥೆಯ ಮತ್ತು ಅದರ ಕೆಳಗೆ ಕಾರ್ಯನಿರ್ವಹಿಸುತ್ತಿದ್ದ ... ಎನ್‌ಜಿಓಗಳ ಆಫೀಸುಗಳು ಸಂಪೂರ್ಣವಾಗಿ ...ನಿಯಂತ್ರಿತವಾಗಿದ್ದವು. ಆಹ್ವಾನ್ ಸಂಘಟನೆಯ ಮುಖ್ಯಸ್ಥ ...ಲೋಕ್ ಅಲೆಕ್ಸಾಂಡರ್ ಪ್ರತಿ ತಿಂಗಳು 14 ಲಕ್ಷ ...ಪಾಯಿಗಳನ್ನು ಸಂಬಳವಾಗಿ ತೆಗೆದುಕೊಳ್ಳುತ್ತಿದ್ದ. ಇನ್ನು ...ಳಿದವರು ತಮ್ಮ ಏರಿಯಾಗಳಲ್ಲಿ ನೆಲೆಸದೇ ಮುಂಬೈ, ...ದರಾಬಾದ್, ದೆಹಲಿಗಳಂಥ ಮಹಾನಗರಗಳಲ್ಲಿ ನೆಲೆಸಿ ... ಕಾರ್ಯಕ್ಷೇತ್ರಗಳಿಗೆ ವಾರದಲ್ಲಿ ಮೂರ್ನಾಲ್ಕು ಬಾರಿ ...ಮಾನದಲ್ಲಿ ಹೋಗಿಬರುತ್ತಿದ್ದರು.


ಇದೆಲ್ಲಕ್ಕಿಂತ ಮೋಜಿನ ಸಂಗತಿ ಯಾವುದೆಂದರೆ ಏಡ್ಸ್ ... ಅರಿವು ಮೂಡಿಸುವುದಕ್ಕಾಗಿ ಲಕ್ಷಾಂತರ ರೂಪಾಯಿ ...ರ್ಚು ಮಾಡಿ ಉತ್ಕೃಷ್ಟ ದರ್ಜೆಯ ಪೇಪರ್ ಬಳಸಿ ...ದ್ರಿತವಾಗಿರುವ ಪುಸ್ತಕಗಳನ್ನು ಹೊರತರುತ್ತಿದ್ದರು. ಅದೂ ...ಶ್ಯಾವಾಟಿಕೆಯಲ್ಲಿ ತೊಡಗಿರುವ ಜನರಿಗೆ ಅರ್ಥವಾಗದ ...ಗ್ಲೀಷಿನಲ್ಲಿ!

ಇಡೀ ಜಗತ್ತಿಗೆ ಮೈಕ್ರೋಸಾಫ್ಟ್ ಎಂಬ ಟೋಪಿ ... ವಿಶ್ವದ ಅತ್ಯಂತ ಶ್ರೀಮಂತನ ಪಟ್ಟಕ್ಕೇರಿದ ಬಿಲ್ ...ಟ್ಸ್‌ಗೆ ಭಾರತದಲ್ಲಿ ಇಂಥ ಮಾಸ್ಟರ್ ಟೋಪಿ ...ಬಿದ್ದಿದೆಂದರೆ ಬಿಲ್ ಗೇಟ್ಸ್ ಬುದ್ಧಿವಂತನೋ ಅಥವಾ ...ರ್ಖನೋ?! ●

ಚಿತ್ತಾಪೂರ ಉಪಚುನಾವಣೆ

ಖರ್ಗೆ ಮಗನೊಂದಿಗೆ ಕಮಲುನಾಯಕನ ಜಂಗೀಕುಸ್ತಿ

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದೆ. ಜೂನ್ ತಿಂಗಳಿಂದ ಆಕಾಶದ ಮೋಡಗಳ ಕಡೆ ನೋಡಿ ನೋಡಿ ರೈತ ಕಂಗಾಲಾಗಿ ಕುಳಿತಿದ್ದಾನೆ. ತೊಗರಿ ಕಣಜವೆಂದೆ ಹೆಸರುವಾಸಿಯಾದ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ರೈತ ಈ ಸಲ ತೊಗರಿಯನ್ನು ಬಿತ್ತಿಯೇ ಇಲ್ಲ.



ಖರ್ಗೆ

ಜನಸಾಮಾನ್ಯ ತನ್ನ ನಿತ್ಯದ ಉಪಜೀವನಕ್ಕೂ ಏಳಿಏಳಿ ಒದ್ದಾಡುತ್ತಿದ್ದಾನೆ.

ಇಂಥ ಸಂದರ್ಭದಲ್ಲೇ ಚಿತ್ತಾಪುರ ಕ್ಷೇತ್ರದ ಮರು ಚುನಾವಣೆಯ ದಿನಾಂಕ ಘೋಷಣೆಯಾಗಿದೆ. ಈ ಬಗ್ಗೆ ಮತದಾರರಲ್ಲಿ ಯಾರೊಬ್ಬರಿಗೂ ಒಲವಿಲ್ಲವಾದರೂ ರಾಜಕಾರಣಿಗಳ ಅಂಗಳದಲ್ಲಿ, ಅವರ ಚಲನವಲನಗಳಲ್ಲಿ ಸಂಚಲನವನ್ನೇ ಉಂಟು ಮಾಡಿದೆ. ಅಂದಂತೆ ಮಲ್ಲಿಕಾರ್ಜುನ ಖರ್ಗೆಯಿಂದ ತೆರವಾದ ಸ್ಥಾನಕ್ಕೆ ಅವರ ಕುಲಪುತ್ರ ಪ್ರಿಯಾಂಕ ಖರ್ಗೆ ಎಲ್ಲರ ನಿರೀಕ್ಷೆಯಂತೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಇದು ಖರ್ಗೆಯ ಬಾಲಂಗೋಚಿಗಳಿಗೆ, ಮುಖೇಡಿನಾಯಕರಿಗೆ ಅತ್ಯಂತ ಪ್ರಿಯವಾದ ಸಂಗತಿಯಾದರೆ, ಪಕ್ಷದಲ್ಲಿ ಮೊದಲಿನಿಂದಲೂ ದುಡಿಯುತ್ತ ಬಂದ ನಿಷ್ಠಾವಂತ ಜನಗಳಿಗೆ ನುಂಗಲಾಗದ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಆದರೆ ಬಾಯಿಬಿಟ್ಟು ವಿರೋಧಿಸುವುದಕ್ಕೆ ಯಾರಿಗೂ ಗಡುಸಿಲ್ಲ. ಹೇಳಿಕೇಳಿ ಖರ್ಗೆ ರಾಜ್ಯದ ಪ್ರಭಾವಿ ಕಾಂಗ್ರೆಸ್ ನಾಯಕರಲ್ಲಿ ಒಬ್ಬರು. ಈಗ ಕೇಂದ್ರದ ಮಂತ್ರಿಗಳೂ ಸಹ. ಅವರ ಮಗ ಪ್ರಿಯಾಂಕ ಖರ್ಗೆಗೆ ಟಿಕೆಟ್ ಕೊಟ್ಟಿರುವುದನ್ನು ಪ್ರತಿಭಟಿಸಿ ದಕ್ಕಿಸಿಕೊಳ್ಳುವ ತಾಕತ್ತಾದರೂ ಯಾರಿಗಿದೆ? ಹಾಗಾಗಿ ಎಲ್ಲರೂ ಗಪ್‌ಚುಪ್ ಕುಳಿತಿದ್ದಾರೆ. ಶಹಾಬಾದ್ ಮತಕ್ಷೇತ್ರದಿಂದ ಹಿಂದೊಮ್ಮೆ ಆಯ್ಕೆಯಾಗಿದ್ದ ಸಿ.ಗುರುನಾಥ ಎಂಬ ಮಾಜಿ ಸಚಿವ ಮಾತ್ರ ತನ್ನ ಮುನಿಸು ತೋರಿ ಮಕಾಡೆ ಮಲಗಿಕೊಂಡಿದ್ದಾರೆ.

ಕಳೆದ ವಿಧಾನಸಭೆಯ ಚುನಾವಣೆಯಲ್ಲಿ



ಪ್ರಿಯಾಂಕ ಖರ್ಗೆ


ಮಲ್ಲಿಕಾರ್ಜುನ ಖರ್ಗೆಯನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಎದುರಿಸಿದ್ದ ವಾಲ್ಮೀಕಿ ಕಮಲುನಾಯಕ ಈ ಸಲವೂ ಬಿಜೆಪಿಯ ಅಭ್ಯರ್ಥಿಯಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯನ್ನೇ ಎದುರಿಸಿ, ಆತನ ಮೈಬೆವರು ಬಿಡಿಸಿದ ತನಗೆ ಆತನ ಮಗ ಪ್ರಿಯಾಂಕ ಖರ್ಗೆಯನ್ನು ಸೋಲಿಸುವುದು ಅಷ್ಟು ಕಷ್ಟವಾಗಲಾರದು ಎಂಬ ಉಮೇದಿನಲ್ಲಿ ಕಮಲುನಾಯಕ ಇದ್ದಾರೆ. ಆದರೆ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಜಿ. ರಾಮಕೃಷ್ಣ ಬೆಂಬಲಿಗರು ಐವಾನ್ ಏ ಷಾಯಿ ಪ್ರದೇಶದಲ್ಲಿರುವ ತಮ್ಮದೇ ಪಕ್ಷದ ಕಚೇರಿಯ ಮೇಲೆ ಮೊನ್ನೆ ದಾಳಿ ಮಾಡಿದ್ದಾರೆ. ಅಲ್ಲಿದ್ದ ಕುರ್ಚಿ, ಮೇಜುಗಳಲ್ಲದೆ ತಮ್ಮದೇ ಪಕ್ಷದ ಹಿರಿಯ ನಾಯಕರುಗಳ ಭಾವಚಿತ್ರಗಳನ್ನು ಬೀದಿಗೆ ಎಸೆದು ಬೆಂಕಿ ಇಟ್ಟಿದ್ದಾರೆ. ಬಿಜೆಪಿಯ ಅಂತರಾಳದಲ್ಲಿ ಹುದುಗಿರುವ ಬಂಡಾಯಕ್ಕೆ ಈ ಘಟನೆ ಒಂದು ಉದಾಹರಣೆಯಷ್ಟೇ. ಇದು ಮತದಾರರ ಮೇಲೆ ಗಾಢವಾದ ಪರಿಣಾಮ ಬೀರಿದರೆ ಕಮಲುನಾಯಕನ ಚಮತ್ಕಾರ ಅಷ್ಟಾಗಿ ನಡೆಯಲಾರದು. ಆದರೆ ಈ ಘಟನೆಯನ್ನು ಎಲ್ಲರೂ ಹಗುರಾಗಿ ಪರಿಗಣಿಸಿದ್ದಾದರೆ ಮಾತ್ರ ಕಮಲುನಾಯಕ ತನ್ನ ಛಾಪು ಮೂಡಿಸದೆ ಇರಲಾರ.


ಹೋದಸಲ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಕರ್ನಾಟಕದ ಮುಖ್ಯ ಮಂತ್ರಿಯೂ ಆಗಬಹುದು ಎಂಬ ಊಹಾಪೋಹಗಳಿದ್ದವು. ಮುಖ್ಯ ಮಂತ್ರಿಯಾದರೆ ತಮ್ಮ ಕ್ಷೇತ್ರವೂ ಉದ್ಧಾರವಾಗುತ್ತೆ ಎಂಬ ಆಶೆಯಾದರೂ ಜನರಲ್ಲಿ ಇತ್ತು. ಈ ಕಾರಣಕ್ಕಾಗಿಯೆ ಚಿತ್ತಾಪುರದ ಬಹುಪಾಲು ಮತದಾರರು ಖರ್ಗೆಯನ್ನು ಬೆಂಬಲಿಸಿ ಗೆಲ್ಲಿಸಿದ್ದರು. ಆದರೆ ಈಗ ಪರಿಸ್ಥಿತಿ ಹಿಂದಿನಂತಿಲ್ಲ. ಬಿಜೆಪಿ ಅಧಿಕಾರದಲ್ಲಿದೆ. ಕಾಂಗ್ರೆಸ್‌ನವನನ್ನು ಗೆಲ್ಲಿಸಿದರೆ ಆತ ಬರುವ ನಾಲ್ಕು ವರ್ಷ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾನಷ್ಟೆ. ಬಿಜೆಪಿಯವನನ್ನು ಗೆಲ್ಲಿಸಿದರೆ ಕನಿಷ್ಠ ಅಧಿಕಾರದಲ್ಲಿರುವ ಪಕ್ಷದಿಂದ ಒಂದಿಷ್ಟು ಪ್ರಯೋಜನವಾದರೂ ಆಗಬಹುದು ಎಂಬ ಯೋಚನೆ ಜನರಲ್ಲಿ ಇರಲಿಕ್ಕೂ ಸಾಕು. ಜೊತೆಗೆ, ಈ ಹಿಂದೆ ಮಲ್ಲಿಕಾರ್ಜುನ ಖರ್ಗೆಯನ್ನು ಗೆಲ್ಲಿಸಿಯೇ ತೀರುವೆ ಎಂದು ಪಣ ತೊಟ್ಟಿದ್ದ ಈ ಮತಕ್ಷೇತ್ರದಿಂದ ಸ್ಪರ್ಧಿಸಿ ಗೆಲ್ಲುತ್ತಿದ್ದ ಬಾಬುರಾವ್ ಚಿಂಚನಸೂರ ಉರುಫ್ ಮುಕುಡಪ್ಪ ಈ ಬಾರಿ ಅದೇಕೋ ಅಷ್ಟು ಉತ್ಸಾಹ ತೋರುತ್ತಿಲ್ಲ. ಇದಲ್ಲದೆ ಚಿತ್ತಾಪುರ ಮೀಸಲು ಕ್ಷೇತ್ರದ ನಾಲವಾರ ಜಿ.ಪಂ. ಸುತ್ತಲಿನ ಹೋಬಳಿಗಳ ಅನೇಕ ಕಾಂಗ್ರೆಸ್ ಪ್ರಮುಖರು ಹಾಗೂ ರಾವೂರ್ ಪ್ರಮುಖರಲ್ಲಿಯೂ ಇಂತಹದ್ದೇ ಅಸಮಾಧಾನ ಹೊಗೆಯಾಡುತ್ತಿದೆ. ಜೊತೆಗೆ ಸಿ. ಗುರುನಾಥ ಯಾವುದೇ ಕ್ಷಣದಲ್ಲೂ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಸಾಧ್ಯತೆ ಇದೆ. ಇದೆಲ್ಲಕ್ಕೆ ಕಳಶವಿಟ್ಟಂತೆ ಖರ್ಗೆ ತನ್ನ ಮಗ ಪ್ರಿಯಾಂಕನಿಗೆ ಪಟ್ಟಾಭಿಷೇಕದ ತರಾತುರಿಯಲ್ಲಿರುವುದು ಎಲ್ಲರಿಗೂ ಅಸಮಧಾನ ಮೂಡಿಸಿದೆ.


ಜೆಡಿಎಸ್ ಪಕ್ಷ ಮಾತ್ರ ಕಳೆದ ಸಲದಂತೆ ಈ ಸಲವೂ ಬಸವರಾಜ ಮರೆಪ್ಪ ಬೆಣ್ಣೂರ ಅವರನ್ನು ಕಣಕ್ಕೆ ಇಳಿಸಿದೆ. ಮಾಜಿ ಸಚಿವ ವಿಶ್ವನಾಥ ಪಾಟೀಲ ಹೆಬ್ಬಾಳ ಅವರ ಶಿಷ್ಯನಾಗಿದ್ದ ಬಸವರಾಜ ಬೆಣ್ಣೂರ ತಮ್ಮ ಗುರು ಜೆಡಿಎಸ್ ತೊರೆದು ಕಾಂಗ್ರೆ ಪಾಳೆಯಕ್ಕೆ ಹೋದರೂ ತಾನು ಮಾತ್ರ ಜೆಡಿಎಸ್‌ನಲ್ಲಿ ಉಳಿದು ಪಕ್ಷ ನಿಷ್ಠೆಯನ್ನು ತೋರಿದ್ದಾನೆ. ಈತ ಹೆಚ್ಚೆಚ್ಚು ಮತಗಳನ್ನು ಪಡೆದಂತೆಲ್ಲಾ ಪ್ರಿಯಾಂಕ ಖರ್ಗೆಯ ಕುತ್ತಿಗೆಗೆ ಬಿದ್ದಿರುವ ಕುಣಿಕೆ ಬಿಗಿಯಾಗುತ್ತಾ ಹೋಗುತ್ತದೆ.

● ವಿಶ್ವಾರಾಧ್ಯ ಸತ್ಯಂಪೇಟೆ


ಎಸ್.ಜಯಣ್ಣ


ನಂಜುಂಡಸ್ವಾಮಿ



ಬಾಲರಾಜ್


ಭರಣಿ

ಕೊಳ್ಳೇಗಾಲ: ಮೂವರು ಮಾಜಿಗಳ ಎದುರು ಒಬ್ಬ ಐಪಿಎಸ್!

ಶಾಸಕರಾಗಿದ್ದ ಆರ್.ಧ್ರುವನಾರಾಯಣ್ ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಸದರಾಗಿ ಗೆಲ್ಲುವುದರೊಂದಿಗೆ ತೆರವಾಗಿರುವ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಕ್ಕೀಗ ಉಪಚುನಾವಣೆ ಎದುರಾಗಿದೆ. ರಾಜ್ಯದ ಮೂರು ಪ್ರಮುಖ ರಾಜಕೀಯ ಪಕ್ಷಗಳಿಂದ ಮೂವರು 'ಮಾಜಿ ಶಾಸಕರು' ಕಣಕ್ಕಿಳಿದು ತೊಡೆ ತಟ್ಟುತ್ತಿದ್ದರೆ ಅವರೆಲ್ಲರ ಎದುರು ತಾನೇ 'ಗೆದ್ದು ಶಾಸಕ'ನಾಗುತ್ತೇನೆ ಎಂದು ಒಬ್ಬ ಮಾಜಿ ಐಪಿಎಸ್ ಅಧಿಕಾರಿ ಅಬ್ಬರಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಈ ನಾಲ್ವರಿಗೆ, ಅವರ ಬೆನ್ನಿಗೆ ನಿಂತಿರುವ ಪಕ್ಷಗಳಿಗೆ ಮತ್ತು ನಾಯಕರಿಗೆ ಈ ಚುನಾವಣೆಯಲ್ಲಿ ಗೆಲ್ಲುವುದು ಬಹಳ ಪ್ರತಿಷ್ಠೆಯ ಪ್ರಶ್ನೆಯಾಗಿದೆ.

ಕಾಂಗ್ರೆಸ್ ನಾಯಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯರ ಬಲಗೈ ಭಂಟನೆಂದೇ ಗುರುತಿಸಲಾಗುವ ಎಸ್.ಜಯಣ್ಣ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಈತ 1994ರಲ್ಲಿ ಮೊದಲ ಬಾರಿಗೆ ಜೆಡಿಎಸ್‌ನಿಂದ ಗೆದ್ದು ಎಮ್ಮೆಲ್ಲೆಯಾಗಿದ್ದಾತ. ಈಗ ಮಾಜಿ. ಜಯಣ್ಣ ಗೆಲ್ಲಬೇಕಿರುವುದು ಆತನಿಗಿಂತ ಹೆಚ್ಚಾಗಿ ಸಿದ್ಧರಾಮಯ್ಯರಿಗೆ ಬೇಕಿದೆ. ಸಿದ್ಧರಾಮಯ್ಯನವರು ಬಹಳ ಕಾಡಿಬೇಡಿ, ಮುನಿಸಿಕೊಂಡು, ಬೆದರಿಸಿ ಕೊನೆಗೂ ವಿರೋಧ ಪಕ್ಷದ ನಾಯಕರಾದ ಮೇಲೆ ಎದುರಿಸುತ್ತಿರುವ ಮೊದಲ ಚುನಾವಣೆಯಿದು. ತನ್ನದೇ ಬೆಂಬಲಿಗನೊಬ್ಬ, ತನ್ನದೇ ಪ್ರಭಾವವಿರುವ ಪ್ರದೇಶದಲ್ಲಿ ಗೆಲ್ಲಲಿಲ್ಲ ಎಂದರೆ ಅದು ಸಿದ್ಧರಾಮಯ್ಯರಿಗಾಗುವ ಅವಮಾನ. ಹಾಗಾಗಿ ಎಷ್ಟೇ ಕಷ್ಟವಾದರೂ ಸರಿ, ಎಷ್ಟೇ ನಷ್ಟವಾದರೂ ಸರಿ ಜಯಣ್ಣನನ್ನು ಗೆಲ್ಲಿಸಿಯೇ ತೀರಬೇಕೆಂಬ ಹಠದಲ್ಲಿ ಸಿದ್ದು ಪಂಚೆ ಎತ್ತಿಕಟ್ಟಿಯಾಗಿದೆ. ಅವರಿಗೆ ಸಾಥ್ ಕೊಡುವುದಕ್ಕಾಗಿ ಮಾಜಿ ಕೇಂದ್ರ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ಕೂಡ ಸಿದ್ಧರಾಗಿದ್ದಾರೆ. ರಾಜ್ಯ ಮಟ್ಟದ ಇಂಥ ಘಟಾನುಘಟಿ



ಮಹೇಶ್


ಕಾಂಗ್ರೆಸ್ ಕುಳಗಳನ್ನು ಬೆನ್ನಿಗಿಟ್ಟುಕೊಂಡಿರುವ ಜಯಣ್ಣ ತಾನು ಗೆದ್ದೇ ಗೆಲ್ಲುತ್ತೇನೆಂಬ ಉಮೇದಿನಲ್ಲಿದ್ದಾರೆ. ಅಲ್ಲದೇ, ಕ್ಷೇತ್ರದಲ್ಲಿ ಈ ಹಿಂದೆ ಗೆದ್ದಿದ್ದ ಧ್ರುವನಾರಾಯಣ್ ಕೂಡ ಕಾಂಗ್ರೆಸ್ಸಿಗರೇ ಆಗಿದ್ದರಿಂದ, ಈಗ ಅವರು ಗೆದ್ದು ಸಂಸದರಾಗಿರುವ ಪ್ರಭಾವವಿರುವುದರಿಂದ ಅವರ ಉಮೇದಿಗೆ ಮತ್ತಷ್ಟು ರೆಕ್ಕೆಪುಕ್ಕ ಬಂದಿದೆ.


ಇನ್ನು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎರಡನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿದ್ದ ಬಿಜೆಪಿಯಿಂದ ಜಿ.ಎನ್.ನಂಜುಂಡೇಗೌಡ ಕಣಕ್ಕಿಳಿದಿದ್ದಾರೆ. ಇವರು 1999ರಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಶಾಸಕರಾಗಿದ್ದವರು. ಈಗ ಮಾಜಿ. ಕಳೆದ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಇಡೀ ಚಾಮರಾಜನಗರ ಜಿಲ್ಲೆಯಲ್ಲಿ ಬಿಜೆಪಿಗೆ ಒಂದು ಸ್ಥಾನವೂ ದಕ್ಕಿರಲಿಲ್ಲ. ಈ ಬಾರಿ ಶತಗತಾಯ ಖಾತೆ ತೆರೆಯಲೇಬೇಕೆಂಬ ಹಠ ಬಿಜೆಪಿ ನಾಯಕರದ್ದು. ರಾಜ್ಯದಲ್ಲಿ ಅಧಿಕಾರದಲ್ಲಿದ್ದೂ ತಮ್ಮ ಪ್ರಭಾವ ಬಳಸಿ ಉಪಚುನಾವಣೆಗಳನ್ನು ಗೆಲ್ಲದಿದ್ದರೆ ಅವಮಾನ ಎಂಬುದು ಯಡಿಯೂರಪ್ಪನ ಚಿಂತೆ. ಹಾಗಾಗಿ, ಆದಷ್ಟು ಸ್ಥಾನಗಳಲ್ಲಿ ಜಯಭೇರಿ ಬಾರಿಸುವುದಕ್ಕಾಗಿ ಎಷ್ಟೇ ದುಡ್ಡು ಸುರಿಯಲು ಬಿಜೆಪಿ ಸಿದ್ಧವಾಗಿದೆ. ಜೊತೆಗೆ ಪ್ರತೀ ಜಿಲ್ಲಾ ಪಂಚಾಯತ್‌ಗೆ ಒಬ್ಬ ಕ್ಯಾಬಿನೆಟ್ ಮಂತ್ರಿಯನ್ನು ಉಸ್ತುವಾರಿಗೆ ನೇಮಿಸಿ ಸೂಕ್ತ ರಣತಂತ್ರ ಹೆಣೆಯುತ್ತಿದೆ. ಆದರೆ, ಬಿಜೆಪಿಗೆ ಕಾಂಗ್ರೆಸ್ಸಿಗಿರುವ ಒಂದು ಅಡ್ವಾಂಟೇಜ್ ಇಲ್ಲ. ಕಾಂಗ್ರೆಸ್‌ಗಾದರೆ ತಮ್ಮದೇ ಪಕ್ಷದ ಸಂಸದರಿದ್ದಾರೆ. ಕೊಳ್ಳೇಗಾಲ ಕ್ಷೇತ್ರದಲ್ಲಿ ಅದಕ್ಕೆ ಒಂದು ನೆಲೆಯಿದೆ. ಆ ಕಾರಣಕ್ಕೇನೇ ಕಳೆದ ಬಾರಿ ಅದು ಜಯಭೇರಿ ಬಾರಿಸಿತ್ತು. ಈ ಅನುಕೂಲ ಬಿಜೆಪಿಗಿಲ್ಲ. ಜೊತೆಗೆ, ಕಾಂಗ್ರೆಸ್‌ನಲ್ಲಿ ಹೇಳಿಕೊಳ್ಳುವಂಥ ಒಳಜಗಳಗಳೇನಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಬಿಜೆಪಿ ಎ.ಆರ್.ಕೃಷ್ಣಮೂರ್ತಿ ಮತ್ತು ನಂಜುಂಡಸ್ವಾಮಿ ಬಣಗಳಾಗಿ ಒಡೆದುಹೋಗಿದೆ. ಇದು ಚುನಾವಣೆಯಲ್ಲಿ ಬಿಜೆಪಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಎಲ್ಲ ಸಾಧ್ಯತೆಯಿದೆ.


ಇನ್ನು ಜೆಡಿಎಸ್‌ನಿಂದ ಎಸ್.ಬಾಲರಾಜ್ ಅಭ್ಯರ್ಥಿಯಾಗಿದ್ದಾರೆ. ಇವರು 2004ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು ಎಲ್ಲರೂ ಹುಬ್ಬೇರುವಂತೆ ಮಾಡಿದ್ದ ಆಸಾಮಿ. ಅವರೂ ಈಗ ಮಾಜಿ. ಈಗ ಜೆಡಿಎಸ್ ತೆಕ್ಕೆಗೆ ಬಿದ್ದು ಅಭ್ಯರ್ಥಿಯಾಗಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿಗಿಂತ ತಾನೇನು ಕಡಿಮೆಯಿಲ್ಲ ಎಂದು ಪಂಚೆ ಎತ್ತಿಕಟ್ಟಿಕೊಂಡು ಥೇಟ್ ಕುಸ್ತಿಗೆ ಇಳಿಯುವವರಂತೆ ಕ್ಷೇತ್ರದಾದ್ಯಂತ ಓಡಾಡುತ್ತಿದ್ದಾರೆ. ಈ ಮೂವರಿಗೂ ಇರುವ ಒಂದು ಸಾಮ್ಯತೆ ಏನೆಂದರೆ ಮೊದಲನೆಯದಾಗಿ ಮೂವರೂ ಮಾಜಿಗಳು. ಎರಡನೆಯದಾಗಿ ಮೂವರೂ ತಮ್ಮ ನೆಲೆಗಳನ್ನು ಬಿಟ್ಟು ಪಕ್ಷಾಂತರಿಗಳಾಗಿ ವಲಸೆ ಬಂದವರು.

ಮೊನ್ನೆ ಮೊನ್ನೆ ತನಕ ಹಣಾಹಣಿ ಏನಿದ್ದರೂ ಈ ಮೂವರ ನಡುವೆಯೇ ಇರುತ್ತದೆ ಎಂದು ಬಹುತೇಕ ರಾಜಕೀಯ ವಿಶ್ಲೇಷಕರು ಅಂದಾಜಿಸಿದ್ದರು. ಆದರೆ ಯಾವಾಗ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಅಖಾಡಕ್ಕಿಳಿದರೋ ಎಲ್ಲಾ ವಿಶ್ಲೇಷಣೆಗಳೂ ತಲೆಕೆಳಗಾಗುವ ನಿರೀಕ್ಷೆ ಹುಟ್ಟಿಕೊಂಡಿದೆ. ಮೂವರೂ ಮಾಜಿ ಶಾಸಕರಲ್ಲಿ ಏನೋ ಒಂದು ರೀತಿಯ ನಡುಕ ಶುರುವಾಗಿದೆ. ಸುಭಾಷ್ ಭರಣಿಯವರು ಬಿಎಸ್ಪಿ ಪಕ್ಷದಿಂದ ಕಣಕ್ಕಿಳಿದಿದ್ದಾರೆ. ಇಡೀ ರಾಜ್ಯದಲ್ಲಿ ಬಿಎಸ್‌ಪಿ ಪಕ್ಷಕ್ಕೆ ನೆಲೆ ಎಂದು ಹೇಳಬಹುದಾದ ಒಂದೆರಡು ಕ್ಷೇತ್ರಗಳ ಪೈಕಿ ಕೊಳ್ಳೆಗಾಲ ಕೂಡ ಒಂದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಸ್ಪರ್ಧಿಸಿದ್ದ ಎನ್.ಮಹೇಶ್ 25,000ಕ್ಕಿಂತ ಹೆಚ್ಚು ಮತಗಳನ್ನು ಪಡೆದು ಎಲ್ಲರೂ ಹುಬ್ಬೇರಿಸುವಂತೆ ಮಾಡಿದ್ದರು. ಈ ಬಾರಿ ಭರಣಿಗಾಗಿ ತಮ್ಮ ಅಭ್ಯರ್ಥಿತನವನ್ನು ತ್ಯಾಗ ಮಾಡಿದ್ದಾರೆ. ಹಾಗಾಗಿ, ಸುಭಾಷ್ ಭರಣಿ ಕಣದಲ್ಲಿರುವ ಮೂವರು ಮಾಜಿ ಶಾಸಕರಿಗೆ ನಿದ್ದೆಗೆಡಿಸಿರುವುದಂತೂ ಸತ್ಯ. ವಿಶೇಷ ಎಂದರೆ ಮೂವರು ಮಾಜಿ ಶಾಸಕರಂತೆ ಸುಭಾಷ್ ಭರಣಿ ಕೂಡ ಪಕ್ಷಾಂತರಿಯೆ. ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ಗಳಂತೆ ಬಿಎಸ್‌ಪಿಗೆ ಹಣ ಬೆಂಬಲವಿಲ್ಲದಿರುವುದು ಅವರಿಗೆ ಒಂದು ನೆಗೆಟಿವ್ ಪಾಯಿಂಟ್.


ಕೃಷ್ಣಮೂರ್ತಿ



ಧ್ರುವನಾರಾಯಣ್


...ನಿವಾಸ್


...ರಾಮಯ್ಯ

ಸಾರಾಂಶದಲ್ಲಿ ಹೇಳುವುದಾದರೆ, ಬಿಜೆಪಿಗೆ ಧನ ಬೆಂಬಲವಿದೆ. ಆದರೆ ಜನಬೆಂಬಲವಿಲ್ಲ. ಕಾಂಗ್ರೆಸ್‌ಗೆ ಜನ ಬೆಂಬಲವಿದೆ. ಬಿಜೆಪಿಯಷ್ಟು ಧನ ಬೆಂಬಲವಿಲ್ಲ. ಜೆಡಿಎಸ್ ಮತ್ತು ಬಿಎಸ್‌ಪಿಗಳಿಗೆ ಆವೆರಡೂ ಅಷ್ಟಕ್ಕಷ್ಟೆ. ಹೀಗಾಗಿ, ಜೆಡಿಎಸ್ ಮತ್ತು ಬಿಎಸ್‌ಪಿಗಳು ಯಾರ್ಯಾರ, ಎಷ್ಟೆಷ್ಟು ಮತಗಳನ್ನು ಕಿತ್ತುಕೊಳ್ಳುತ್ತಾರೆಂಬುದರ ಮೇಲೆ ಕಾಂಗ್ರೆಸ್ ಮತ್ತು ಬಿಜೆಪಿಯ ಭವಿಷ್ಯ ನಿರ್ಧಾರವಾಗಲಿದೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಒಂದು ಹೆಜ್ಜೆ ಮುಂದಿರುವುದು ಸತ್ಯ.

● ಕೊಳ್ಳೆಗಾಲ ಚಿಕ್ಕಮಾಳಿಗೆ



ಚನ್ನಪಟ್ಟಣ: ಯೋಗೇಶ್ವರಗೆ ಮತ್ತೊಂದು ಏಟು!

ಪೆಕ್ಕಾ ವಂಚಕ, ಭೂಗಳ್ಳ ಸಿ.ಪಿ. ಯೋಗೇಶ್ವರನ ಡಕೆನ್ನೆಗೆ ಮತ್ತೊಂದು ಏಟು ಕೊಡಲು ರೆಡಿಯಾಗಿದ್ದಾರೆ ನ್ನಪಟ್ಟಣದ ಜನ. ಈಗಷ್ಟೇ ಎಂ.ಪಿ. ಚುನಾವಣೆಯಲ್ಲಿ ೂರಳಪಟ್ಟಿ ಹಿಡಿದು ಬಲಗೆನ್ನೆಗೆ ಚಟಾರ್ ಎಂದು ೊಡೆದಿದ್ದ ಚನ್ನಪಟ್ಟಣದ ಜನ ಮತ್ತೆ ಇವನ ಮುಖ ೋಡುವಂತಾಗಿರುವುದು ರಾಜ್ಯ ಬಜೆಪಿ ಯಾವ ಮಟ್ಟಕ್ಕೆ ಲುಪಿದೆ ಎನ್ನುವುದನ್ನು ತೋರಿಸುತ್ತದೆ.

ಕಳೆದ ಸಲ ಕಾಂಗ್ರೆಸ್ಸಿನಿಂದ ಗೆದ್ದು 'ಆಪರೇಷನ್ ಮಲ'ದಲ್ಲಿ ತಿಂದುಂಡು ಬಜೆಪಿಯಿಂದ ಎಂಪಿಗೆ ನಿಂತ ಯೋಗೇಶ್ವರ್‌ಗೆ ಜನ ಸರಿಯಾಗಿ ಇಕ್ಕಿದ್ದರು. ಚನ್ನಪಟ್ಟಣ ಕ್ಷೇತ್ರದಲ್ಲೇ ಕುಮಾರಸ್ವಾಮಿಗೆ 28 ಸಾವಿರ ಲೀಡ್ ಸಿಕ್ಕಿತ್ತು. ಕುಮಾರಸ್ವಾಮಿ ಈಗಲೂ ಒಂದಿಷ್ಟು ಸೀರಿಯಸ್ಸಾಗಿ ಚನ್ನಪಟ್ಟಣದಲ್ಲಿ ಓಡಾಡಿದರೆ ಸಾಕು, ಜೆಡಿಎಸ್‌ನ ಎಂ.ಸಿ. ಅಶ್ವಥ್ ವಿಧಾನಸೌಧಕ್ಕೆ ಎಂಟ್ರಿ ಕೊಡುವುದು ಗ್ಯಾರಂಟಿ.

ಹಾಗೆ ನೋಡಿದರೆ ಸದ್ಯಕ್ಕಿಲ್ಲಿ ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆ ಇದೆಯಾದರೂ, ಕೊನೆಯಲ್ಲಿ ಅದು ಕಾಂಗ್ರೆಸ್ V/s ಜೆಡಿಎಸ್ ಆಗಬಹುದು. ಕಾಂಗ್ರೆಸ್ಸಿಗೆ ಇಲ್ಲಿ ಬೇಸ್ ಓಟ್ಸ್ ಇದೆ. ಕಾಂಗ್ರೆಸ್ಸಿನಿಂದ ಸ್ಪರ್ಧಿಸಿರುವ ಪಿ.ಕೆ. ಯೋಗೀಶ್‌ಗೆ ತನ ಮನೆತನದ ಬಗ್ಗೆ ಜನಕ್ಕಿರುವ ಗೌರವ ಸಹಾಯ ಮಾಡಲಿದೆ. ಕಳೆದ ಸಲ ಕಾಂಗ್ರೆಸ್ಸಿನಿಂದ ಯೋಗೇಶ್ವರನನ್ನು ಗೆಲ್ಲಿಸಿದ್ದು ಯೋಗೀಶ್‌ನ ತಂದೆ ದಿ. ಪಿ.ವಿ. ಕೃಷ್ಣಪ್ಪ. ಬ್ರಾಂಡ್ ಲಾಬಿಯ ಕರಿನೆರಳು ಯೋಗೀಶ್‌ಗಿದೆಯಾದರೂ ಗಾಸಿಟಿ ದಗಾಖೋರ ಯೋಗೇಶ್ವರನ ಖಲುಪೈಲುಗಳ ಮುಂದೆ ಅದೇನೇನೂ ಅಲ್ಲ. ಇತ್ತ ಹತ್ತಾರು ಬಾರ್‌ಗಳ ಮಾಲೀಕನಾಗಿರುವ ಜೆಡಿಎಸ್‌ನ ಎಂ.ಸಿ. ಅಶ್ವಥ್ ಕೂಡ ಕಷ್ಟು ದುಡ್ಡು ಹರಿಸುವ ಆಸಾಮಿಯೇ ಆಗಿರುವುದರಿಂದ ಯೋಗೇಶ್ವರ ಹಣ-ಹೆಂಡದಿಂದ ಗೆಲ್ಲುವುದು ಕಷ್ಟ. ಮೊನ್ನೆ ಯೋಗೇಶ್ವರನ ಮನೆ, ಗಾರ್ಮೆಂಟ್, ಬೆಂಗಳೂರಿನ ಅಡ್ಡೆಗಳ ಮೇಲೆ ಆದಾಯ ತೆರಿಗೆ ಇಲಾಖೆಯ ದಾಳಿ ನಡೆಯಿತು. ಅದು ಸಹ ಆತನಿಗೆ ಈಗ ನೆಗೆಟಿವ್ ಪಾಯಿಂಟ್. ಎಲ್ಲದಕ್ಕಿಂತ ಹೆಚ್ಚಾಗಿ ಚನ್ನಪಟ್ಟಣದಲ್ಲಿ ಬಜೆಪಿ ಅಷ್ಟಕ್ಕಷ್ಟೇ.

ಸತತವಾಗಿ ಎರಡು ಸಲ ಸೋಲು ಅನುಭವಿಸಿರುವ ಜೆಡಿಎಸ್‌ನ ಅಶ್ವಥ್‌ಗೆ ಈ ಸಲ ಅನುಕಂಪದ ಜೊತೆಗೆ ಕುಮಾರಸ್ವಾಮಿಯ ಪ್ರಭಾವವೂ ಸಹಾಯ ಮಾಡಲಿದೆ.


ಈ ಮಧ್ಯೆ ಕಾಂಗ್ರೆಸ್ಸಿನಿಂದ ಟಿಕೆಟ್ ಹೊಡೆಯಲು ದುಸ್ಸಾಹಸ ಮಾಡಿದ 'ಜಯ ಕರ್ನಾಟಕ'ದ ಮಾಜಿ ಅಧ್ಯಕ್ಷ ಖ್ಯಾತ ವಂಚಕ ರಮೇಶಗೌಡ ಈಗಿಲ್ಲಿ ಪಕ್ಷೇತರ ಅಭ್ಯರ್ಥಿ. ರೈತ ಚಳವಳಿ, ದಲಿತ ಚಳವಳಿಗಳಲ್ಲಿ ಸೇರಿಕೊಂಡು ಎಲ್ಲಾ ಅಧ್ವಾನ ಮಾಡಿದ ಈ ರಮೇಶಗೌಡ ಈಗ ಕ್ಷೇತ್ರದಲ್ಲಿ ಬ್ಯುಸಿನೆಸ್ ಹಿಡಿದಿದ್ದಾನೆ. ವಸೂಲಿಯೇ ಇವನ ಮೂಲಮಂತ್ರ. ಇವನ ಸ್ಪರ್ಧೆಯಿಂದ ಕಾಂಗ್ರೆಸ್‌ಗೇನೂ ನಷ್ಟವಿಲ್ಲ, ಹೇಳಬೇಕೆಂದರೆ ಇವನಿಗೆ ಠೇವಣಿ ಸಿಗುವುದೂ ಕಷ್ಟಕರ..... ಹೀಗೆಯೇ ಬಿಎಸ್‌ಪಿಯ ಸುಜೀವ್‌ಕುಮಾರ್ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ.

ಹಾಗಾಗಿ ಇಲ್ಲೀಗ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಪೈಪೋಟಿ ಇದೆ. ಅದು ಡಿಕೆಶಿ ಮತ್ತು ಕುಮಾರಸ್ವಾಮಿ ನಡುವಿನ ಸ್ಪರ್ಧೆಯಾಗುತ್ತಿರುವಂತಿದೆ. ಈ ನೇರ ಪೈಪೋಟಿಯ ನಡುವೆ ದುಡ್ಡಿನಿಂದ ಗೆಲ್ಲಬಲ್ಲೆ ಎಂಬ ಅಂದಾಜು ಯೋಗೇಶ್ವರನದು.

ಚುನಾವಣಾ ಕಾವು ದಿನೇದಿನೇ ಏರತೊಡಗಿದ್ದು ಮುಂದಿನ ದಿನದಲ್ಲಿ ಸ್ಪಷ್ಟ ಚಿತ್ರಣ ಸಿಗಲಿದೆ.

● ವರದಿಗಾರ

ರಾಮನಗರ: ಲಿಂಗಪ್ಪ ಎದುರು ಜೆಡಿಎಸ್ ಡಮ್ಮಿ




ಲಿಂಗಪ್ಪ

ಪ್ರತಿಷ್ಠೆಯ ರಾಮನಗರ ಅಸೆಂಬ್ಲಿ ಕ್ಷೇತ್ರದಲ್ಲಿ ನಡೆಯಲಿರುವ ಉಪಚುನಾವಣೆ ಮತ್ತೊಮ್ಮೆ 'ಗೌಡರ ಗದ್ದಲಕ್ಕೆ ಒಳ್ಳೆಯ ವೇದಿಕೆಯಾಗಲಿದೆ. ಯಾಕೆಂದರೆ ರಾಮನಗರ ಕ್ಷೇತ್ರದ ಮತದಾರರಲ್ಲಿ ಒಕ್ಕಲಿಗರೇ ಪ್ರಭಾವಶಾಲಿಗಳಾಗಿದ್ದು ಇಲ್ಲಿ ಕಾಂಗ್ರೆ, ಬಿಜೆಪಿ ಹಾಗೂ ಜೆಡಿಎಸ್ ಒಕ್ಕಲಿಗ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿವೆ. ಇದರಿಂದಾಗಿ ಯಾರೇ ಗೆದ್ದರೂ ಸದನದಲ್ಲಿ ಒಕ್ಕಲಿಗ ಶಾಸಕರ ಸಂಖ್ಯೆಯಲ್ಲಿ ಒಂದು ಹೆಚ್ಚಾಗುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಯಾವ ಪಕ್ಷದ ಒಕ್ಕಲಿಗ ಶಾಸಕರ ಸಂಖ್ಯೆ ಹೆಚ್ಚಾಗುತ್ತದೆ ಎಂಬುದಷ್ಟೇ ಸದ್ಯದ ಕುತೂಹಲ.

ಕುಮಾರಣ್ಣನ ಡಮ್ಮಿ ಅಭ್ಯರ್ಥಿ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಭಾರೀ ಬಹುಮತದಿಂದ ಆಯ್ಕೆಯಾಗಿದ್ದ ಈ ಕ್ಷೇತ್ರ ಈಗ ತೆರವಾಗಿರುವುದು ಕುಮಾರಣ್ಣ 'ದೆಹಲಿಗೆ ಆಯ್ಕೆಯಾಗಿರುವುದರಿಂದ. ಅವರು ಲೋಕಸಭೆಗೆ ಗೆದ್ದ ಮರುಕ್ಷಣದಿಂದಲೇ ಈ ಕ್ಷೇತ್ರದಲ್ಲಿ ಅವರ ಮಗ ಸ್ಪರ್ಧಿಸುತ್ತಾನೆ ಅಥವಾ ಕುಮಾರಣ್ಣನ ಅತ್ತಿಗೆ, ರೇವಣ್ಣನ ಪತ್ನಿ ಭವಾನಿ ಸ್ಪರ್ಧಿಸುತ್ತಾರೆ ಎಂಬಿತ್ಯಾದಿ ಸುದ್ದಿ ಹರಡಿದ್ದವು. ಕೊನೆಕೊನೆಗೆ ಇವರಿಬ್ಬರ ಬದಲು ಕುಮಾರಸ್ವಾಮಿಯ ಸಹೋದರ ಬಾಲಕೃಷ್ಣ ಅಥವಾ ಸಹೋದರಿ ಅನುಸೂಯಾ ಸ್ಪರ್ಧಿಸಬಹುದೆಂಬ ಸುದ್ದಿಯೂ ಕೇಳಿಬಂದಿತ್ತು.

ಆದರೆ ತಮ್ಮ ಪಕ್ಷ ಈಗಾಗಲೇ 'ಅಪ್ಪ-ಮಕ್ಕಳ' ಪಕ್ಷವೆಂದು ಬ್ರ್ಯಾಂಡಾಗಿರುವುದರಿಂದ ಆ ಇಮೇಜಿನಿಂದ ಪಕ್ಷವನ್ನು ಪಾರು ಮಾಡಲೆಂದು ದಳದ ಹೈಕಮಾಂಡ್ ದೇವೇಗೌಡರು ಕುಟುಂಬದ ಅಭ್ಯರ್ಥಿಯನ್ನು ಈ ಬಾರಿ ಕಣಕ್ಕಿಳಿಸದೆ ಎಲ್ಲರ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿದ್ದಾರೆ. ಇದರಲ್ಲಿ ಕುಮಾರಸ್ವಾಮಿಯ ಸ್ವಾರ್ಥದ ಲೆಕ್ಕಾಚಾರವೂ ಇದೆ. ರಾಮನಗರ ಕ್ಷೇತ್ರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ರಾಜ್ಯಭಾರ' ಮಾಡಬೇಕೆಂಬುದು ಕುಮಾರಣ್ಣನ ಇರಾದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಃಪತನದತ್ತ ಸಾಗುವಾಗ ಅಥವಾ ರಾಜ್ಯ ರಾಜಕೀಯಕ್ಕೆ ಮರಳಬೇಕೆಂಬ ಆಸೆ ಮರುಕಳಿಸಿದಾಗ ತನಗೆ ರಾಮನಗರ ಕ್ಷೇತ್ರವನ್ನು ಬಿಟ್ಟುಕೊಡುವ 'ತ್ಯಾಗರಾಜ' ಶಾಸಕನನ್ನು ನಿಲ್ಲಿಸಬೇಕೆಂಬ ತಂತ್ರ ಕುಮಾರಸ್ವಾಮಿಯವರದ್ದು. ಹಾಗಾಗಿ ಒಂದು ವೇಳೆ ತನ್ನ ಅತ್ತಿಗೆ ಅಥವಾ ಸಹೋದರ ಈ ಕ್ಷೇತ್ರದ ಪ್ರತಿನಿಧಿಯಾದರೆ ಮುಂದೆ ಅಗತ್ಯ ಬಿದ್ದಾಗ ಅವರಿಂದ ರಾಜೀನಾಮೆ ಕೊಡಿಸುವುದು ಕಷ್ಟವಾಗುತ್ತದೆ ಎಂಬ ಅರಿವು ಕುಮಾರಸ್ವಾಮಿಗಿದೆ. ಹೀಗಾಗಿ ರಾಮನಗರದ ತನ್ನ ಬಲಗೈ ಬಂಟ ರಾಜು ಎಂಬುವವರನ್ನು ಈಗ ಪಕ್ಷದ ಅಭ್ಯರ್ಥಿಯಾಗಿಸಿದ್ದಾರೆ.



ಅಶ್ವತ್ಥ್


ಹಳೇಹುಲಿ ಲಿಂಗಪ್ಪ ಗೆಲ್ಲುವರೇ?

ಕಾಂಗ್ರೆಸ್ ತನ್ನ ಪಕ್ಷದ ಹಳೇ ಹುಲಿ ಸಿ.ಎಂ.ಲಿಂಗಪ್ಪ ಅವರಿಗೆ ಮತ್ತೆ ಟಿಕೆಟ್ ಕೊಟ್ಟು ಕುಮಾರಸ್ವಾಮಿಯ ಡಮ್ಮಿ ಅಭ್ಯರ್ಥಿ ರಾಜುಗೆ ತೀವ್ರ ಪೈಪೋಟಿ ನೀಡುವ ಸೂಚನೆಯನ್ನು ನೀಡಿದೆ. ವಾಸ್ತವವಾಗಿ ಕಾಂಗ್ರೆ ಹೈಕಮಾಂಡ್ ತನಗೆ ರಾಮನಗರದಿಂದ ಸ್ಪರ್ಧಿಸಲು ಟಿಕೆಟ್ ನೀಡದಿದ್ದರೆ ಬಿಜೆಪಿಗೆ ಹಾರಲು ಲಿಂಗಪ್ಪ ತೆರೆಮರೆಯಲ್ಲಿ ಎಲ್ಲಾ ಮಾತುಕತೆಯನ್ನು ಮುಗಿಸಿ ಜಿಗಿಯಲು ತುದಿಗಾಲಲ್ಲಿ ನಿಂತಿದ್ದರು. ಈ ಹಿಂದೆ ರಾಮನಗರದ ಶಾಸಕರಾಗಿದ್ದ ಲಿಂಗಪ್ಪ ಬಿಜೆಪಿ ಪಕ್ಷಕ್ಕೆ ಬಂದರೆ ಪಕ್ಷಕ್ಕೊಬ್ಬ ಒಕ್ಕಲಿಗ ನಾಯಕ ಸಿಕ್ಕಿದಂತಾಗುತ್ತದೆ; ಆ ಮೂಲಕ ಆ ಕ್ಷೇತ್ರದಲ್ಲಿ ಕುಮಾರಸ್ವಾಮಿಯವರ ಸಾರ್ವಭೌಮತ್ವವನ್ನು ಮುರಿಯಬಹುದು ಎಂದು ಯಡಿಯೂರಪ್ಪ ಕನಸು ಕಾಣುತ್ತಿದ್ದರು. ಆದರೆ ಯಡಿಯೂರಪ್ಪನವರ ಈ ಕನಸನ್ನು ಲಿಂಗಪ್ಪರಿಗೆ ಟಿಕೆಟ್ ನೀಡುವ ಮುಖಾಂತರ ಕಾಂಗ್ರೆ ಭಗ್ನಗೊಳಿಸಿದೆ.

ಲಿಂಗಪ್ಪ ಕಾಂಗ್ರೆಸ ಅಭ್ಯರ್ಥಿಯೆಂದು ಘೋಷಣೆಯಾದದ್ದೇ ತಡ, ಬಿಜೆಪಿ ವಲಯದಲ್ಲಿ ತಳಮಳವುಂಟಾಯಿತು. ಯಾಕೆಂದರೆ ರಾಮನಗರ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯಾಗಿ ಬೇರೆ ಯಾರನ್ನೂ ಪಕ್ಷದ ನಾಯಕರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕೊನೆಗೆ ಸಹಕಾರಿ ಬ್ಯಾಂಕ್ ವಲಯದಲ್ಲಿದ್ದ ನಾರಾಯಣಗೌಡ ಎಂಬುವರನ್ನು ರಾಜಕೀಯಕ್ಕೆ ಕರೆತಂದು ತನ್ನ ಅಭ್ಯರ್ಥಿಯನ್ನಾಗಿಸಿದೆ ಬಿಜೆಪಿ.

ಗೌಡ V/s ಗೌಡ V/s ಗೌಡ

ಈಗ ರಾಮನಗರದಲ್ಲಿ ಗೌಡ V/s ಗೌಡ V/s ಗೌಡ ಎಂಬ ಸ್ಪರ್ಧೆ ಏರ್ಪಟ್ಟಿದೆ. ಈ ಮೂವರಲ್ಲಿ ಕಾಂಗ್ರೆಸ ಲಿಂಗಪ್ಪ ಅವರಿಗೆ ತನ್ನದೇ ಆದ ವರ್ಚಸ್ಸು ಇದೆ. ಇವರು ಈಗಾಗಲೇ ರಾಮನಗರದ ಕ್ಷೇತ್ರವನ್ನು ಪ್ರತಿನಿಧಿಸಿರುವ ಮಾಜಿ ಶಾಸಕರು. ಇವರನ್ನು ಎದುರಿಸುತ್ತಿರುವ ರಾಜು ಮತ್ತು ನಾರಾಯಣಗೌಡ ಈಗಷ್ಟೇ ರಾಜಕೀಯಕ್ಕೆ ಎಂಟ್ರಿ ಪಡೆದು ಅಂಬೆಗಾಲಿಡುತ್ತಿರುವ ಹೊಸಬರು.



ಗೌಡ

ವಾಸ್ತವವಾಗಿ ಇಲ್ಲಿ ಚುನಾವಣೆ ನಡೆಯಲಿರುವುದು ಕುಮಾರಸ್ವಾಮಿ ಮತ್ತು ಲಿಂಗಪ್ಪ ನಡುವೆ ಎಂದು ಹೇಳಬಹುದು. ಇನ್ನೂ ನಿಖರವಾಗಿ ಹೇಳುವುದಾದರೆ ಇದು ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯರ ನಡುವಿನ ಪರೋಕ್ಷ ಕದನ ಎನ್ನಬಹುದು. ಸಿದ್ದರಾಮಯ್ಯ ಕಾಂಗ್ರೆಸ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿರುವುದರಿಂದ ರಾಮನಗರ ಮತ್ತು ಗೋವಿಂದರಾಜನಗರದಂತಹ ಪ್ರತಿಷ್ಠಿತ ಕ್ಷೇತ್ರಗಳನ್ನು ಗೆದ್ದು ಪಕ್ಷದಲ್ಲಿ ತನ್ನ ವರ್ಚಸ್ಸು ಮತ್ತು ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಸಿದ್ದರಾಮಯ್ಯ ತೆರೆಮರೆಯಲ್ಲಿ ಅನೇಕ ಕಸರತ್ತು ನಡೆಸುತ್ತಿದ್ದಾರೆ. ಇದನ್ನೆಲ್ಲಾ ಅರಿತಿರುವ ಕುಮಾರಸ್ವಾಮಿ ಯಾವುದೇ ಕಾರಣಕ್ಕೂ ಈ ಕ್ಷೇತ್ರ ಬೇರೆ ಪಕ್ಷದವರ ಪಾಲಾಗದಂತೆ ಎಚ್ಚರಿಕೆ ವಹಿಸಿದ್ದಾರೆ.

ಹೈಟೆಕ್ ಕೃಷ್ಣನಿಗೆ ಕಾಯುತ್ತಿರುವ ರಾಮನಗರ

ರಾಮನಗರ ಕ್ಷೇತ್ರದ ಇನ್ನೊಂದು ಬ್ಯೂಟಿ ಎಂದರೆ ಈ ಕ್ಷೇತ್ರದ ಜವಾಬ್ದಾರಿಯನ್ನು ಕಾಂಗ್ರೆ ಹೈಕಮಾಂಡ್ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣರವರಿಗೆ ವಹಿಸಿರುವುದು. ಈ ಸುದ್ದಿಯನ್ನು ಕೇಳಿ ಸಂತೋಷಪಟ್ಟಿರುವ ದೇವೇಗೌಡರು "ಆ ಹೈಟೆಕ್ ಕೃಷ್ಣ ರಾಮನಗರಕ್ಕೆ ಕಾಲಿಡಲಿ, ಅವರು ಹೈಟೆಕ್ಕಾ? ನಾವು ಹೈಟೆಕ್ಕಾ?" ಎಂದು ಬುಸುಗುಡುತ್ತಿದ್ದಾರೆ. ಮತ್ತೊಂದೆಡೆ ಮೊನ್ನೆ ತಾನೆ ಕೆಎಂಎಫ್ ಅಧ್ಯಕ್ಷ ಪದವಿಯಿಂದ ನಿರ್ಗಮನಗೊಂಡಿರುವ ಹೆಚ್.ಡಿ.ರೇವಣ್ಣ ಕೂಡಾ ರಾಮನಗರದಲ್ಲಿ ಪಕ್ಷದ ಅಭ್ಯರ್ಥಿಯನ್ನು ಭಾರೀ ಅಂತರದಿಂದ ಗೆಲ್ಲಿಸಲು ಟೊಂಕಕಟ್ಟಿ ನಿಂತಿದ್ದಾರೆ.

ಕುಮಾರಣ್ಣ-ರೇವಣ್ಣ-ದೇವಣ್ಣ ಈ ಮೂವರು ಜೆಡಿಎಸ್ ಅಭ್ಯರ್ಥಿಯ ಜಯಕ್ಕಾಗಿ ಹಗಲಿರುಳೂ ಕೆಲಸ ಮಾಡುವುದು ಗ್ಯಾರಂಟಿಯಾಗಿದೆ.

ರಾಮನಗರ ಗೌಡರ ಕರ್ಮಭೂಮಿ!

ಅದನ್ನು ಕೇಳಿ "ರಾಮನಗರ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಗೆಲುವು ಅಷ್ಟೊಂದು ಕಷ್ಟನಾ?" ಎಂದು ನೀವು ಭಾವಿಸಬಹುದು. ಆದರೆ ಹಿಂದೊಮ್ಮೆ ದೇವೇಗೌಡರು ಇದೇ ರಾಮನಗರದಲ್ಲಿ ಮುಖಭಂಗಕ್ಕೊಳಗಾಗಿದ್ದರು. ಅವರು ಈ ದೇಶದ ಪ್ರಧಾನಿಪಟ್ಟವನ್ನು ಅಲಂಕರಿಸಿದ ಸಂದರ್ಭದಲ್ಲಿ ತನ್ನ ಉತ್ತರಾಧಿಕಾರಿಯಾಗಿ ಚಲನಚಿತ್ರ ನಟ ಅಂಬರೀಶ್ ಅವರನ್ನು ಉಪಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯಾಗಿ ರಾಮನಗರದಿಂದ ನಿಲ್ಲಿಸಿದ್ದರು. ಒಕ್ಕಲಿಗರೂ ಆದ, ಖ್ಯಾತ ಚಲನಚಿತ್ರ ನಟರು ಆಗಿದ್ದ ಅಂಬರೀಶ್ ಆಗ ಖಂಡಿತವಾಗಿ ಆಯ್ಕೆಯಾಗುತ್ತಾರೆ ಎಂದು ಬಹುತೇಕ ರಾಜಕೀಯ ಪಂಡಿತರು ಭವಿಷ್ಯ ನುಡಿದಿದ್ದರು. ಆದರೆ ರಾಮನಗರದ ಮತದಾರರು ನೀಡಿದ ತೀರ್ಪು ಅವರೆಲ್ಲರಿಗೆ ಶಾಕ್ ನೀಡಿತ್ತು. ಅಂದು ಇದೇ ಸಿ.ಎಂ.ಲಿಂಗಪ್ಪ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅಂಬರೀಶ್‌ರನ್ನು ಸೋಲಿಸಿದ್ದರು.

ಅಂದು ದೇವೇಗೌಡರ ಉತ್ತರಾಧಿಕಾರಿಯಾಗಿ ಸ್ಪರ್ಧಿಸಿದ್ದ ಅಂಬರೀಶರನ್ನು ಸೋಲಿಸಿದ್ದ ಲಿಂಗಪ್ಪ ಈಗ ಕುಮಾರಸ್ವಾಮಿಯವರ ಉತ್ತರಾಧಿಕಾರಿಯಾಗಿ ಕಣಕ್ಕಿಳಿದಿರುವ ರಾಜು ಎಂಬ ಅನಾಮಿಕನನ್ನು ಸೋಲಿಸದಿರುತ್ತಾರೆಯೇ? ಎಂದು ರಾಜಕೀಯ ವಲಯದಲ್ಲಿ ಈಗ ಚರ್ಚೆಯಾಗುತ್ತಿದೆ. ಈ ಕಾರಣಕ್ಕೇ ಕುಮಾರಣ್ಣ-ರೇವಣ್ಣ-ದೇವಣ್ಣ ಒಟ್ಟಾಗಿ ರಾಜುವನ್ನು ಗೆಲ್ಲಿಸಲು ಹೊರಟಿದ್ದಾರೆ. ಯಾಕೆಂದರೆ ಈ ರಾಮನಗರ ದೇವೇಗೌಡರು ಮತ್ತು ಅವರ ಮಕ್ಕಳ ರಾಜಕೀಯ ಭವಿಷ್ಯವನ್ನು ನಿರ್ಧರಿಸಿದ ಕರ್ಮಭೂಮಿಯಾಗಿದೆ. ಹೀಗಾಗಿ ಇದನ್ನು ಕಳೆದುಕೊಳ್ಳಲು ಅವರು ಸುತರಾಂ ತಯಾರಿಲ್ಲ. ಅಂಬರೀಶ್‌ಗೆ ಹೋಲಿಸಿದರೆ ರಾಜು ಅಂತಹ ವರ್ಚಸ್ಸು ಮತ್ತು ಜನಪ್ರಿಯತೆಯುಳ್ಳ ಜನನಾಯಕರಲ್ಲದ ಕಾರಣ ಈ ಚುನಾವಣೆಯನ್ನು ಕುಮಾರಸ್ವಾಮಿ ಗಂಭೀರವಾಗಿ ತೆಗೆದುಕೊಂಡಿದ್ದಾರೆ.

ರಾಮನಗರದಲ್ಲಿ ರಾಮನಪಕ್ಷ! ರಾಜಕೀಯ

ಬಜೆಪಿ ಅಭ್ಯರ್ಥಿ ನಾರಾಯಣಗೌಡ ಒಂದು ಕಾಲದಲ್ಲಿ ದೇವೇಗೌಡರ ಬಲಗೈ ಬಂಟ ಎನಿಸಿಕೊಂಡಿದ್ದವರು. ಯಾವಾಗ ದೇವೇಗೌಡರು ನಾರಾಯಣಗೌಡರಿಗೆ ಪಕ್ಷದಲ್ಲಿ ಯಾವುದೇ ಸ್ಥಾನಮಾನ ನೀಡಲಿಲ್ಲವೋ ಆಗ ನಾರಾಯಣಗೌಡರು ಕಾಂಗ್ರೆಸ್ ಪಕ್ಷಕ್ಕೆ ಹಾರಿದ್ದರು. ಅದು ಕೂಡಾ ಆಗಿನ ಸಹಕಾರ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್‌ರವರ ಪಿತೂರಿಯ ಫಲವಾಗಿ. ನಾರಾಯಣಗೌಡ ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಗೋಲ್‌ಮಾಲ್ ಮಾಡಿದ ಕುಖ್ಯಾತಿಯನ್ನು ಹೊಂದಿದ್ದರು. ಕಾಂಗ್ರೆ ಪಕ್ಷಕ್ಕೆ ಬರದಿದ್ದರೆ ತನಿಖೆಯನ್ನು ಎದುರಿಸಬೇಕಾಗುತ್ತದೆ ಎಂದು ಶಿವಕುಮಾರ್ ಆವಾಜ್ ಹಾಕಿದ್ದರಿಂದ ನಾರಾಯಣಗೌಡ ದೇವೇಗೌಡರ ಪಾಳಯದಿಂದ ಕಾಂಗ್ರೆಗೆ ವಲಸೆ ಬಂದಿದ್ದರು.

ಆದರೆ ಕಾಂಗ್ರೆನಲ್ಲೂ ಅವರಿಗೆ ಯಾವುದೇ ಹುದ್ದೆ ದೊರಕದ ಕಾರಣ ನಾರಾಯಣಗೌಡ ಬಜೆಪಿಗೆ ಬಂದಿದ್ದಾರೆ. ಈ ಪಕ್ಷಾಂತರಿಯನ್ನೇ ಚೆಡ್ಡಿಗಳು ಈಗ ಚುನಾವಣಾ ಕಣಕ್ಕೆ ಇಳಿಸಿದ್ದಾರೆ. ಕನಕಪುರ ಕ್ಷೇತ್ರದ ಕೆಲವು ಹೋಬಳಿಗಳಲ್ಲಿ ಇವರು ಪ್ರಭಾವ ಹೊಂದಿದ್ದಾರೆ. ಜೊತೆಗೆ ದಳ ಮತ್ತು ಕಾಂಗ್ರೆನಲ್ಲಿದ್ದುದ್ದರಿಂದ ಒಂದಿಷ್ಟು ಕಾರ್ಯಕರ್ತರನ್ನು ತಮ್ಮ ಜೊತೆಗೆ ಕರೆದುಕೊಂಡು ಬಂದಿದ್ದಾರೆ. ಹೇಗಿದ್ದರೂ ರಾಜ್ಯದ ಅಧಿಕಾರ ಈಗ ಬಜೆಪಿ ಕೈಲಿರುವುದರಿಂದ ಹಣಬಲ ಮತ್ತು ತೋಲ್ಬಳದಿಂದಾಗಿ ಅವರು ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳಿಗೆ ಸಾಕಷ್ಟು ಪೈಪೋಟಿ ಕೊಡಬಹುದೆಂದು ಅಂದಾಜಿಸಲಾಗಿದೆ.

ಮುಸ್ಲಿಮರದ್ದೇ ನಿರ್ಣಾಯಕ ಪಾತ್ರ

ರಾಮನಗರ ಅಸೆಂಬ್ಲಿ ಕ್ಷೇತ್ರದಲ್ಲಿ ಒಕ್ಕಲಿಗ ಮತಬಾಂಧವರೇ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿದ್ದರೂ, ಮುಸ್ಲಿಂ ಮತಬಾಂಧವರ ಒಲವು ಯಾರ ಕಡೆ ಇದೆಯೆಂಬುದರ ಮೇಲೆ ಅಭ್ಯರ್ಥಿಯ ಗೆಲುವು ನಿಂತಿದೆ. ಯಾಕೆಂದರೆ ಮೊನ್ನೆ ಲೋಕಸಭೆಯ ಚುನಾವಣೆಯಲ್ಲಿ ಮುಸ್ಲಿಂ ಮತಬಾಂಧವರೆಲ್ಲ ಒಕ್ಕೊರಲಿನಿಂದ ಕುಮಾರಣ್ಣನಿಗೆ ಮತ ಹಾಕಿ ಗೆಲ್ಲಿಸಿದ್ದರು. ಆದರೆ ಈಗ ಮತ್ತೆ ಅದು ರಿಪೀಟ್ ಆಗಲಿದೆ ಎಂದು ಹೇಳಲಾಗುವುದಿಲ್ಲ.

ಸದ್ಯದ ಪರಿಸ್ಥಿತಿಯಲ್ಲಿ ರಾಮನಗರದ ಜನರಿಗೆ ಕುಮಾರಸ್ವಾಮಿಯೇ 'ಡಾರ್ಲಿಂಗ್' ರಾಮನಗರ ಕ್ಷೇತ್ರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಭದ್ರಬುನಾದಿ ಹಾಕಿದ ಕುಮಾರಸ್ವಾಮಿ ಎಲ್ಲಾ ಕೋಮಿನ ಜನರ ಪ್ರೀತಿ ವಿಶ್ವಾಸ ಗಳಿಸಿದ್ದಾರೆ. ಹೀಗಾಗಿ ಇವರು ಕಟ್ಟಿರುವ 'ರಾಮನಗರ'ಕೋಟೆ 'ಶೋಲೆ'ಚಿತ್ರದ ಗಬ್ಬರ್ ಸಿಂಗ್ ಕಟ್ಟಿದ್ದ ಕೋಟೆಗಿಂತಲೂ ಭದ್ರವಾಗಿದೆ.

● ಸದಾಶಿವ ಶೆಣೈ

ಗೋವಿಂದರಾಜನಗರ
ಪ್ರಿಯಕೃಷ್ಣನ ಎಂಟ್ರಿಗೆ ಥರಗುಟ್ಟಿದ ಸೋಮಣ್ಣ



ಈತನಕ ಸೋಮಣ್ಣ ಸೆಣಸಿದ ಚುನಾವಣೆಗಳೆಲ್ಲದರ ಲೆಕ್ಕಾಚಾರವೇ ಒಂದಾದರೆ ಈಗ ನಡೆಯುತ್ತಿರುವುದು ಅಸಲೀ ಯುದ್ಧ. ಪ್ರಿಯಕೃಷ್ಣ ಎಂಬ ಇಪ್ಪತ್ತೈದರ ಪೋರನೊಬ್ಬ ಗೋವಿಂದರಾಜನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾದ ಸುದ್ದಿ ಕೇಳಿದ್ದೇ ಮೊದಲು ಥರಗುಟ್ಟಿದ್ದು ಸೋಮಣ್ಣ! ವಿಜಯನಗರದ ಹಾಲಿ ಶಾಸಕ ಬೆಂಗಳೂರಿನ ಅತೀ ಯಶಸ್ವೀ ಲ್ಯಾಂಡ್ ಡೀಲರ್ 'ಲೇಔಟ್ ಕೃಷ್ಣಪ್ಪನವರ ಮೊದಲ ಮಗನೇ ಈ ಪ್ರಿಯಕೃಷ್ಣ.

ಪ್ರಿಯಕೃಷ್ಣ ಎಂಬ ಇಪ್ಪತ್ತೈದರ ಪೋರನೊಬ್ಬ ಗೋವಿಂದರಾಜನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾದ ಸುದ್ದಿ ಕೇಳಿದ್ದೇ ಮೊದಲು ಥರಗುಟ್ಟಿದ್ದು ಸೋಮಣ್ಣ!

ಈತನಕ ಸೋಮಣ್ಣ ಸೆಣಸಿದ ಚುನಾವಣೆಗಳೆಲ್ಲದರ ಲೆಕ್ಕಾಚಾರವೇ ಒಂದಾದರೆ ಈಗ ನಡೆಯುತ್ತಿರುವುದು ಅಸಲೀ ಯುದ್ಧ. ಹಿಂದಾದರೆ ತನ್ನ ವಿರುದ್ಧ 'ಡಮ್ಮಿ' ಅಭ್ಯರ್ಥಿಗಳನ್ನು ಹಾಕಿಸಿಕೊಂಡು ಸಲೀಸಾಗಿ ಗೆದ್ದು ಬರುತ್ತಿದ್ದ ಸೋಮಣ್ಣನಿಗೆ ಈ ಬಾರಿಯೂ ಅಂಥದ್ದೇ ನಿರೀಕ್ಷೆಯಿತ್ತು. ತನ್ನ ವಿರುದ್ಧ ಗೋವಿಂದರಾಜನಗರಕ್ಕೆ ಹಳೇ ರಾಜಕಾರಣಿ ಮಾಗಡಿಯ ಎಚ್.ಎಂ.ರೇವಣ್ಣ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾನೆ. ಮೊದಲೇ ಸುಸ್ತಾದ ರಾಜಕಾರಣಿ. ದುಡ್ಡೂಕಾಸು ವಿಷಯದಲ್ಲಿ ತನಗೆ ಹೋಲಿಸಿದರೆ ರೇವಣ್ಣ ಏನೇನೂ ಅಲ್ಲ. ತಾನೇ ಒಂದಷ್ಟು ದುಡ್ಡು ತಿನ್ನಿಸಿ ರೇವಣ್ಣನನ್ನು ತೆಪ್ಪಗಾಗಿಸಿಬಿಟ್ಟರೆ ಕತೆ ಮುಗಿದಂತೆಯೇ. ನಿರಾಯಾಸವಾಗಿ ಗೆದ್ದು ತಾನು ಮಂತ್ರಿಯಾಗಬಹುದೆಂಬ ಸೋಮಣ್ಣನ ಲೆಕ್ಕಾಚಾರ ಮೊದಲ ಬಾರಿಗೆ ತಲೆಕೆಳಗಾಗಿದೆ.


ಪ್ರಿಯಕೃಷ್ಣ ಈಗ ಸೋಮಣ್ಣನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ. ವಿಜಯನಗರದ ಹಾಲಿ ಶಾಸಕ ಬೆಂಗಳೂರಿನ ಅತೀ ಯಶಸ್ವೀ ಲ್ಯಾಂಡ್ ಡೀಲರ್ ಲೇಔಟ್ ಕೃಷ್ಣಪ್ಪನವರ ಮೊದಲ ಮಗನೇ ಈ ಪ್ರಿಯಕೃಷ್ಣ.



ಪ್ರಿಯಾಕೃಷ್ಣ

ಲೇಔಟ್ ಕೃಷ್ಣಪ್ಪ ಬೆಂಗಳೂರು ಸುತ್ತಮುತ್ತ ಖರೀದಿಸಿದ ಸಾವಿರಾರು ಎಕರೆ ಜಮೀನುಗಳ ಅಧಿಕೃತ ಅಗ್ರಿಮೆಂಟ್ ಹೋಲ್ಡರ್ ಆಗಿರುವ ಪ್ರಿಯಕೃಷ್ಣ ಹೆಚ್ಚೂ ಕಮ್ಮಿ ಸಾವಿರ ಕೋಟಿಯ ಸುಲ್ತಾನ. ಸೋಮಣ್ಣ ನೂರು ರೂಪಾಯಿ ಬಿಚ್ಚುವಲ್ಲಿ ಪ್ರಿಯಕೃಷ್ಣ ಸಾವಿರ ರೂಪಾಯಿ ಬಿಸಾಕಬಲ್ಲ. ದುಡ್ಡೂ ಕಾಸಿನ ಕತೆ ಬದಿಗಿಟ್ಟು ಬೇರೆ ವಿಷಯಕ್ಕೆ ಬಂದರೂ ಆತ ಕಳಂಕಿತನಲ್ಲ. ಕಾಂಟ್ರಾಕ್ಟ್ ಡೀಲು, ರೋಲ್‌ಕಾಲ್, ರೌಡಿ ಹಾವಳಿ ಎಲ್ಲದರಿಂದಲೂ ಹೊರತಾದ. ಈತನಕ ಹೊರಜಗತ್ತಿಗೇ ಎಕ್ಸಪೋಸ್ ಆಗದ ಪ್ರಿಯಕೃಷ್ಣ ಕಾಂಗ್ರೆಸ್ಸಿನ ಮತ್ತೊಬ್ಬ ಯುವನಾಯಕ ಕೃಷ್ಣಭೈರೇಗೌಡರ ತದ್ರೂಪಿ.

ಪೊಲಿಟಿಕಲ್ ಸೈನ್ಸ್‌ನಲ್ಲಿ ಎಂ.ಎ. ಮುಗಿಸಿದ್ದಾನೆ. ಬೆಂಗಳೂರು ವಿವಿಯಿಂದ ಎಲ್‌ಎಲ್‌ಬಿ ಮುಗಿಸಿದ್ದಾನೆ. ಬಿಜಿನೆಸ್ ಆತನ ಹವ್ಯಾಸ ಎಂಬುದನ್ನು ಬಿಟ್ಟರೆ ಪ್ರಿಯಕೃಷ್ಣ ಹೆಸರಾಂತ ಗಾಲ್ಫ್ ಆಟಗಾರ. 2001ರಲ್ಲಿ ಪಂಜಾಬಿನಲ್ಲಿ ನಡೆದ ರಾಷ್ಟ್ರೀಯ ಗಾಲ್ಫ್ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ. ಇದಿಷ್ಟೂ ಆತನ ಸಂಕ್ಷಿಪ್ತ ಪರಿಚಯವಾದರೆ ಹೊರಜಗತ್ತಿಗೆ ಗೊತ್ತೇ ಇರದ ಕೆಲವು ಸಂಗತಿಗಳಿವೆ. ಅದು ಆತನ ವ್ಯವಹಾರ ಚಾತುರ್ಯ.



ನಂಜನಗೂಡು: ಮರಳು ಮಾಫಿಯಾದಿಂದ ಹೋರಾಟಗಾರನ ಕೊಲೆ ಯತ್ನ!

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಜೀವನದಿಗಳಾಗಿರುವ ಕಪಿಲಾ, ಕಾವೇರಿಗಳ ಒಡಲಿನ ಮರಳು ಮಾಫಿಯಾ ತೀವ್ರ ರೀತಿಯಲ್ಲಿ, ನದಿತೀರಗಳುದ್ದಕ್ಕೂ ನಿತ್ಯ ನಿರಂತರವಾಗಿ ಅಕ್ರಮವಾಗಿ ನಡೆಯುತ್ತಿರುವುದು ಹೊರಜಗತ್ತಿಗೆ ತಿಳಿಯದ ವಿಷಯವಲ್ಲ. ಕರ್ನಾಟಕದ ಗಡಿಯನ್ನೇ ನಾಪತ್ತೆ ಮಾಡಿ ಗಣಿಗಾರಿಕೆ ನಡೆಸಿ ಅದೇ ಧೂಳಿನಿಂದ ಯಡ್ಡಿಯ ಬಿಜೆಪಿ ಸರ್ಕಾರವನ್ನು ತನ್ನ ಮುಷ್ಠಿಯಲ್ಲಿಟ್ಟುಕೊಂಡಿರುವ ರೆಡ್ಡಿ ಕುಟುಂಬದಂತೆ ಮೈಸೂರು, ಮಂಡ್ಯ, ಚಾಮರಾಜನಗರಗಳಲ್ಲಿನ ನದಿ ಒಡಲುಗಳಿಗೆ ಬಾಯಿ ಇಟ್ಟವನೇ ಸಚಿವ ನರೇಂದ್ರಸ್ವಾಮಿ. ಈತನದೇ ಮನೊಪಲಿ, ನದೀ ತೀರದ ಪ್ರತೀ ಹಳಿಯಲ್ಲಿ ಹುಟ್ಟಿಕೊಂಡಿರುವ ಮರಳು ಮಾಫಿಯಾದ ಗೂಂಡಾ ಪಟಾಲಂಗಳ ಅಬ್ಬರ ಒಂದು ಕಡೆಯಾದರೆ, ರೈತರ, ಹಳ್ಳಿಗರ, ಹೋರಾಟಗಾರರ ಮೇಲಿನ ಹಲ್ಲೆಗಳು, ಕೊಲೆ ಯತ್ನಗಳು ದಿನನಿತ್ಯದ ವಿದ್ಯಮಾನಗಳಾಗಿವೆ. ಮೊನ್ನೆ ಬೊಕ್ಕಳ್ಳಿ ನಂಜುಂಡಸ್ವಾಮಿ ಎಂಬ ಪ್ರಾಮಾಣಿಕ ಹೋರಾಟಗಾರ ನಂಜನಗೂಡಿನ ಮರಳು ಮಾಫಿಯಾದಿಂದ ಕೊಲೆಯಾಗುವ ಸ್ವಲ್ಪದರಲ್ಲೆ ಪಾರಾಗಿದ್ದಾರೆ.

ಒಂದು ಮಿತಿ ಬೇಡವೆ?

ಶ್ರೀಕಂಠೇಶ್ವರ ದೇವಾಲಯ ಇರುವುದರಿಂದ ನಂಜನಗೂಡು ದಕ್ಷಿಣ ಕಾಶಿ ಎಂತಲೂ ಹೆಸರು ಪಡೆದಿರುವ ಪ್ರೇಕ್ಷಣೀಯ ಸ್ಥಳ. ಮರಳು ಲಾರಿಗಳ ಓವರ್‌ಲೋಡ್, ಮಿತಿಮೀರಿದ ಓಡಾಟಗಳಿಂದ, ಇಲ್ಲಿಯ ರಸ್ತೆಗಳು ಕೊರಕಲು ಗುಂಡಿಗಳಾಗಿ ಮರಳು ಮಾಫಿಯಾದವರ ಖಾಸಗಿ ಆಸ್ತಿಯಂತಾಗಿವೆ. ಕಪಿಲಾ ನದಿಯ ತೀರದುದ್ದಕ್ಕೂ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಮರಳು ಮಾಫಿಯಾಕ್ಕೆ ಅದೆಷ್ಟು ತಲೆಗಳು ಉರುಳಿವೆಯೊ ಲೆಕ್ಕ ಇಟ್ಟವರಿಲ್ಲ. ಮರಳು ಮಾಫಿಯಾದ ಆರ್ಭಟ ಮಾತ್ರ ಯಾವ ಎಗ್ಗಿಲ್ಲದೇ ಸಾಗಿದೆ. ನದಿಗಳ ದಿಕ್ಕುಗಳೇ ಬದಲಾಗಿ ನದಿತೀರದ ಹಳ್ಳಿಗಳು ಮುಳುಗಡೆಯ ಭೀತಿಯಲ್ಲಿವೆ. ಮರಳೆತ್ತುವ ಬಕಾಸುರ ಯಂತ್ರಗಳ ಸುಂಗಾಟಕ್ಕೆ ಭೂಕುಸಿತಗಳು ಉಂಟಾಗಿವೆ. ಪ್ರತೀ ಹಳ್ಳಿಗಳಲ್ಲಿ ಗಲಭೆಗಳಿಂದ, ಕೊಲೆ ಬೆದರಿಕೆಗಳಿಂದ, ಹೊಡೆದಾಟ ಬಡಿದಾಟಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದಕ್ಕೆ ಮರಳು ಮಾಫಿಯಾವೇ ಕಾರಣ.

ಪರಿಸರವಾದಿಗಳೇ ಟಾರ್ಗೆಟ್!

ನಂಜನಗೂಡು ತಾಲೂಕಿನ ಅಕ್ರಮ ಜಾಡುಗಳ ಮೇಲೆ ಹಿಡಿತ ಹೊಂದಿರುವವರು ಎಚ್.ಸಿ.ಮಹದೇವಪ್ಪನ ಸಂಬಂಧಿ ಇಂದನ್ ಬಾಬು, ಟ್ರಾನ್ಸ್‌ಫರ್ ದಂಧೆಯ ಪುಢಾರಿ ಸಿದ್ದಲಿಂಗ ಮೂರ್ತಿಯ ಚೇಲಾ ಲಿಂಗವಂತ ವೀರೇಶ್ ಮತ್ತು ರಾಕೇಶ್ ಸಿದ್ದರಾಮಯ್ಯನ ಚೇಲಾ ಲಾರಿಸ್ವಾಮಿ. ಈ ಕ್ಷೇತ್ರದ ಶಾಸಕ ಶ್ರೀನಿವಾಸ್ ಪ್ರಸಾದರವರ ಸಂಬಂಧಿಗಳ ಪಾಲೂ ಇದರಲ್ಲಿದೆ.


ನಟೋರಿಯಸ್ ಅಕ್ರಮ ಮರಳು ಕಳ್ಳರಾದ ವೀರೇಶ್, ಇಂದನ್ ಬಾಬುಗಳು ಅಕ್ರಮವಾಗಿ ಮರಳು ಬಗೆಯುತ್ತಿರುವುದನ್ನು ಪ್ರತಿಭಟಿಸುತ್ತಲೇ ಬರುತ್ತಿದ್ದ ರೈತ ಸಂಘದ ಪ್ರಮುಖರಲ್ಲಿ ಬೊಕ್ಕಳ್ಳಿ ನಂಜುಂಡಸ್ವಾಮಿಯವರೂ ಒಬ್ಬರು. ವೀರೇಶ್ ಮತ್ತು ಇಂದನ್ ಬಾಬುಗಳ ಅಕ್ರಮ ಮರಳುಗಾರಿಕೆಯನ್ನು ಹಲವಾರು ಬಾರಿ ತಡೆದದ್ದು ಸಹ ಇದೇ ನಂಜುಂಡಸ್ವಾಮಿ. ಜೂನ್ 27ರಂದು ಯಾವುದೇ ಅನುಮತಿ ಇಲ್ಲದೆ ಹತ್ತಾರು ಹೆಕ್ಟೇರುಗಳಲ್ಲಿ ಮರಳು ಲೂಟಿ ಮಾಡುತ್ತಿದ್ದ ಜಾಡಿಗೆ ಸುತ್ತಮುತ್ತಲ ಊರಿನಿಂದ ರೈತರನ್ನು ಕರೆದುಕೊಂಡು ಹೋಗಿ 3 ಹಿಟಾಚಿ, 7 ಮರಳು ಎತ್ತುವ ಯಂತ್ರಗಳು, 11 ಲಾರಿಗಳನ್ನು ರಾತ್ರಿ ತಡೆದಾಗ ಗಣಿ ಇಲಾಖೆಯ ಅಧಿಕಾರಿ ಅಲ್ಫಾನೋಸಸ್, ತಹಸೀಲ್ದಾರ್ ಸುರೇಶ್ ಕುಮಾರ್, ಆರ್‌ಟಿಒ ರಾಘವೇಂದ್ರರೆಲ್ಲರೂ ಬಂದು ಅನಿವಾರ್ಯವಾಗಿ ರೇಡ್ ಮಾಡಿದ್ದರು.

ಮೊನ್ನೆ ಜುಲೈ 27ರಂದು ನಂಜುಂಡಸ್ವಾಮಿಯವರು ಹದಿನಾರು ಗ್ರಾಮಕ್ಕೆ ಕೃಷಿ ಸಾಲ ಪಡೆಯಲು ಕಾವೇರಿ ಕಲ್ಪತರು ಬ್ಯಾಂಕ್‌ಗೆ ಹೋಗಿದ್ದಾಗ, ಹೊಂಚು ಹಾಕಿದ್ದ ನಟೋರಿಯಸ್ ವೀರೇಶ್ ತನ್ನ ಗೂಂಡಾ ಪಟಾಲಂನ ಗಿರೀಶ್, ರವಿಕುಮಾರ್ ಎಲ್ಲಪ್ಪ, ಬಸವರಾಜು, ತಮ್ಮಯ್ಯರ ಮೂಲಕ ಅವರನ್ನು ಕೊಲೆ ಮಾಡಿ ಕಬಿನಿ ನಾಲೆಗೆಸೆಯಲು ಸೂಚಿಸಿದ್ದಾನೆ. ಈ ಪಟಾಲಂ ಅದೇ ರೀತಿ ಹದಿನಾರು ಗ್ರಾಮದಿಂದ ಕೆಎ09 U6896 ಸಂಖ್ಯೆಯ ಗೂಡ್ಸ್ ಆಟೋದಲ್ಲಿ ನಂಜುಂಡಸ್ವಾಮಿಯ ಕೈ, ಕಾಲುಗಳನ್ನು ಕಟ್ಟಿ ಹಾಕಿ



ಬಾಯಿಗೆ ಬಟ್ಟೆ ಸಿಗಿಸಿ, ಪ್ರಜ್ಞೆ ತಪ್ಪುವಂತೆ ಹೊಡೆದಿದ್ದಾರೆ. ಆನಂತರ ನಂಜನಗೂಡಿನ ಸೇತುವೆ ಬಳಿ ಅದೇ ಆಟೋದಲ್ಲಿ ಅವರನ್ನೆತ್ತಿಕೊಂಡು ಹೋಗುತ್ತಿದ್ದಾಗ ನಂಜುಂಡಸ್ವಾಮಿ ಪತ್ನಿಗೆ ವಿಷಯ ಗೊತ್ತಾಗಿದೆ. ಆಕೆ ತಕ್ಷಣ ರೈತ ಮುಖಂಡ ಗುರುಲಿಂಗೇಗೌಡರಿಗೆ ಫೋನ್ ಮಾಡಿದ್ದರಿಂದ ಹಲವಾರು ರೈತ ಮುಖಂಡರು ಆ ವಾಹನವನ್ನು ಹಿಂಬಾಲಿಸಿ ನಂಜುಂಡಸ್ವಾಮಿಯನ್ನು ಬಚಾವ್


ಕಳೆದ ಲೋಕಸಭಾ ಚುನಾವಣೆ, ವಿಧಾನಸಭಾ ಚುನಾವಣೆ ಮತ್ತು 2004ರ ಲೋಕಸಭಾ ಚುನಾವಣೆಯಲ್ಲಿ ಸ್ವತಃ ಲೇಔಟ್ ಕೃಷ್ಣಪ್ಪನವರೇ ಸ್ಪರ್ಧಿಸಿದ್ದಾಗ ತಂದೆಯ ಎಲ್ಲಾ ದುಡ್ಡೂಕಾಸಿನ ವ್ಯವಹಾರ ನಿಭಾಯಿಸಿದ್ದು ಇದೇ ಪ್ರಿಯಕೃಷ್ಣ. ಯಾರು? ಎತ್ತ? ಅಂತ ನೋಡದೇ ಬಡವರಿಗೆ ದುಡ್ಡೆತ್ತಿಕೊಡುವ ದಾನಿ ಲೇಔಟ್ ಕೃಷ್ಣಪ್ಪನವರ ಸ್ವಭಾವಕ್ಕೂ ಆತನ ತಾಕತ್ತೇನು? ಹಿನ್ನೆಲೆಯೇನೆಂದು ಮಾಹಿತಿ ಕಲೆಹಾಕಿ ಅಳೆದು ತೂಗಿ ರೊಕ್ಕ ಬಿಚ್ಚುವ ಮಗನ ಕಸುಬುದಾರಿಕೆಗೂ ವ್ಯತ್ಯಾಸವಿದೆ. ವ್ಯವಹಾರಿಕವಾಗಿ ಪ್ರಿಯಕೃಷ್ಣ ಪಕ್ಕಾ ಮಾರ್ವಾಡಿ. ಮಾತು ಕಮ್ಮಿ. ಪಕ್ಕಾ ಕೆಲಸಗಾರ. ತನ್ನದೇ ಸ್ನೇಹಿತರ ನೆಟ್‌ವರ್ಕ್ ಇದೆ. ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಆಸ್ತಿಪಾಸಿಗಳ ಒಟ್ಟು ಮೊತ್ತವೇ ಏಳುನೂರ ಎಪ್ಪತ್ತು ಕೋಟಿ. ಅಂದರೆ ತಂದೆ ಲೇಔಟ್ ಕೃಷ್ಣಪ್ಪ ಪೋಷಿಸಿಕೊಂಡಿದ್ದ ಐವತ್ತು ಕೋಟಿಗೆ ಹೋಲಿಸಿದರೆ ಮಗನ ಸಂಪತ್ತು ಅದಕ್ಕಿಂತಲೂ ಹದಿನೈದು ಪಟ್ಟು ಹೆಚ್ಚು!



ಇದು ಮಂತ್ರಿ ಸೋಮಣ್ಣನ ಹೊಟ್ಟೆ ಸಂಕಟ. ಈತನಕ ಎದುರಿಸಿದ ಚುನಾವಣೆಗಳಲ್ಲಿ ಸೋಮಣ್ಣನ ಎದುರಿರುತ್ತಿದ್ದವರೆಲ್ಲ ನರಸತ್ತವರೆ. ಮೊದಲು ಜಿ.ನಾರಾಯಣಕುಮಾರ್, ನಂತರ ಜಮೀರ್ ಅಹ್ಮದ್, ಆನಂತರ ಬಿಜೆಪಿಯ ಅಶ್ವತ್ಥನಾರಾಯಣ, ತದನಂತರ ವಿಮಲಾಗೌಡ ಮತ್ತು ಕಳೆದ ಚುನಾವಣೆಯಲ್ಲಿ ರವೀಂದ್ರ; ಹೀಗೆ ಯಾರೆಲ್ಲ ಈತನಕ ಸೋಮಣ್ಣನ ಪ್ರತಿಸ್ಪರ್ಧಿಗಳಾಗಿದ್ದರೋ ಅವರೆಲ್ಲ 'ಡಮ್ಮಿ' ಅಭ್ಯರ್ಥಿಗಳಾಗಿದ್ದರು. ಕಾಂಗ್ರೆಸ್ಸಿನಲ್ಲಿದ್ದರೂ ಬಿಜೆಪಿಯ ರಾಷ್ಟ್ರನಾಯಕ ಅನಂತಕುಮಾರ್ ಸ್ನೇಹವಿತ್ತು, ತನ್ನ ವಿರುದ್ಧ ದುಡ್ಡೂಕಾಸಿನಲ್ಲಿ ಏನೇನೂ ಅಲ್ಲದ ಅಶ್ವಥನಾರಾಯಣನಂಥವರನ್ನು ಹಾಕಿಸಿಕೊಂಡು ಹೇಗೋ ಗೆದ್ದು ಬರುತ್ತಿದ್ದ ಸೋಮಣ್ಣನಿಗೆ ಕಳೆದ ಚುನಾವಣೆಯಲ್ಲೂ ಮತ್ತೆ ಅನಂತಕುಮಾರ್ ನೆರವಾದರು. ಗೋವಿಂದರಾಜನಗರಕ್ಕೆ ರವೀಂದ್ರನಂಥ ದುರ್ಬಲ ಅಭ್ಯರ್ಥಿಯನ್ನು ಹಾಕಿಕೊಟ್ಟರು. ಜೆಡಿಎಸ್ ಅಭ್ಯರ್ಥಿ ರಂಗೇಗೌಡ ಬೇರೆ ಇಪ್ಪತ್ತು ಸಾವಿರದಷ್ಟು ಮತ ಕಿತ್ತ. ಪಾರ್ಟಿ ಫಂಡ್ ಹೊರತಾಗಿ ನಯಾ ಪೈಸೆ ಬಿಚ್ಚದ ಬಿಜೆಪಿ ಅಭ್ಯರ್ಥಿ ರವೀಂದ್ರ ಮೂವತ್ಮೂರು ಸಾವಿರದಷ್ಟು ಓಟು ಕೇಳುವುದಕ್ಕೇ ಸುಸ್ತು ಹೊಡೆದ. ಹೆಚ್ಚೂಕಮ್ಮಿ ಮೂರು ಕೋಟಿಗೂ ಹೆಚ್ಚು ಮೊತ್ತದ ದುಡ್ಡು ಸುರಿದಿದ್ದ ಸೋಮಣ್ಣ ಬಿಜೆಪಿಯ ರವೀಂದ್ರನಿಗಿಂತ ಇಪ್ಪತ್ಮೂರು ಸಾವಿರದಷ್ಟು ಹೆಚ್ಚು ಮತಗಳಿಸಿ ಗೆದ್ದುಬಿಟ್ಟರು.

ಇದು ಕಳೆದ ಚುನಾವಣೆಯ ಕತೆಯಾದರೆ ಈ ಬಾರಿ ಅದಕ್ಕೆ ತದ್ವಿರುದ್ಧ. ಮಾಗಡಿಯ ಹೆಚ್.ಎಂ.ರೇವಣ್ಣ ನಿಂತಿದ್ದರೆ ಸೋಮಣ್ಣನಿಗೆ ಕಷ್ಟವಿರಲಿಲ್ಲ. ಆದರೆ ಪ್ರಿಯಕೃಷ್ಣ ಹಾಗಲ್ಲ. ಅದು ಮತ್ತೊಂದರ್ಥದಲ್ಲಿ ಸೋಮಣ್ಣನ ಕಡುವೈರಿ ಸಾಕ್ಷಾತ್ ಲೇಔಟ್ ಕೃಷ್ಣಪ್ಪನವರೇ ಯುದ್ಧಕ್ಕಿಳಿದಂತೆ. ಹೆಸರಿಗಷ್ಟೇ ಮಗನಾದರೂ ಯುದ್ಧವಿರುವುದು ಲೇಔಟ್ ಕೃಷ್ಣಪ್ಪ ಮತ್ತು ಸೋಮಣ್ಣನ ಮಧ್ಯೆಯೇ. ಕಳೆದ ಲೋಕಸಭಾ ಚುನಾವಣೆಯಲ್ಲಿ ಗೋವಿಂದರಾಜನಗರದ ಮಟ್ಟಿಗೆ ಸೋಮಣ್ಣ ಎಷ್ಟೇ ಲಗಾಟಿ ಹೊಡೆದರೂ ಕಾಂಗ್ರೆಸ್ಸಿಗಿಂತ ಬಿಜೆಪಿ ಕೇವಲ ಒಂಬತ್ತು ಸಾವಿರದಷ್ಟು ಅಧಿಕ ಮತಗಳಿಸಿತೇ ಹೊರತು ಅದಕ್ಕಿಂತ ಹೆಚ್ಚಿಗೆ ಗಳಿಸಲು ಸಾಧ್ಯವಾಗಲಿಲ್ಲ.

ಈಗ ಹಾಗಿಲ್ಲ. ಪ್ರಿಯಕೃಷ್ಣನಿಗೆ ಅನುಕೂಲವಾಗಲಿ ಅಂತಲೇ ಜೆಡಿಎಸ್ ನಾಗೇಂದ್ರ ಪ್ರಸಾದ್ ಉರ್ಫ್ ಬಾಬು ಎಂಬ ಡಮ್ಮಿ ಅಭ್ಯರ್ಥಿಯನ್ನು ಹಾಕಿದೆ. ಬಾಬು ಜಾತಿಯಲ್ಲಿ ಲಿಂಗಾಯತ. ಸೋಮಣ್ಣನ ವಿರುದ್ಧ ಮತ್ತೊಬ್ಬ ಲಿಂಗಾಯತ ಅಭ್ಯರ್ಥಿಯನ್ನು ಸ್ವತಃ ಲೇಔಟ್ ಕೃಷ್ಣಪ್ಪನವರೇ ಹೇಳಿ ಹಾಕಿಸಿಕೊಂಡಿದ್ದಾರೆಂಬುದು ಈಗಾಗಲೇ ಜನಜನಿತ. ವೀರಶೈವ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷನಾಗಿದ್ದ ಬಾಬು ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳಿಗೆ ಪರಮಾಪ್ತ. ಬಾಬು ಲಿಂಗಾಯತರ ಮತ ಕಿತ್ತಷ್ಟೂ ಸೋಮಣ್ಣನ ಕಷ್ಟ ಹೆಚ್ಚುತ್ತದೆ.


ನಾಗೇಂದ್ರ ಪ್ರಸಾದ್

ಗೋವಿಂದರಾಜನಗರದ ಒಟ್ಟು ಎರಡು ಲಕ್ಷದ ಎಪ್ಪತ್ತೊಂದು ಸಾವಿರ ಮತದಾರರ ಪೈಕಿ ಒಕ್ಕಲಿಗರೇ ತೊಂಬತ್ತೆಂಟು ಸಾವಿರದಷ್ಟಿದ್ದಾರೆ. ಜಾತಿ ವಿಷಯಕ್ಕೆ ಬಂದರೆ ಕಾಂಗ್ರೆಸ್ಸಿನ ಪ್ರಿಯಕೃಷ್ಣ ಏಕೈಕ ಒಕ್ಕಲಿಗ ಅಭ್ಯರ್ಥಿ. ಮೂವತ್ತೈದು ಸಾವಿರದಷ್ಟಿರುವ ಕುರುಬರು ಯಾವ ಕಾರಣಕ್ಕೆ ಸಿದ್ಧರಾಮಯ್ಯನವರ ಹಂಗು ತೊರೆದು ಬಿಜೆಪಿಯ ಕೈಹಿಡಿಯುತ್ತಾರೆ? ಮೂರು ಸಾವಿರದಷ್ಟಿರುವ ಬ್ರಾಹ್ಮಣರು, ಏಳು ಸಾವಿರದಷ್ಟಿರುವ ಲಿಂಗಾಯತರು ಮತ್ತು ಎಂಟು ಸಾವಿರದಷ್ಟಿರುವ ಗೊಲ್ಲರು ಸಾರಾಸಗಟಾಗಿ ಸೋಮಣ್ಣನ ಕೈಹಿಡಿದರೂ ಇಪ್ಪತ್ತೆರಡು ಸಾವಿರದಷ್ಟಿರುವ ಮುಸ್ಲಿಮರಾಗಲಿ, ನಾಲ್ಕು ಸಾವಿರದಷ್ಟಿರುವ ಕ್ರಿಶ್ಚಿಯನ್ನರಾಗಲಿ ಯಾವುದೇ ಕಾರಣಕ್ಕೂ ಬಿಜೆಪಿಗೆ ಓಟು ಕೊಡಲಾರರು.

ಹಾಗೊಮ್ಮೆ ಹನ್ನೆರಡು ಸಾವಿರದಷ್ಟಿರುವ ದಲಿತರು ಇಡೀಇಡಿಯಾಗಿ ಸೋಮಣ್ಣನ ಕೈಹಿಡಿದರೂ ಒಕ್ಕಲಿಗರು ಮತ್ತು ಕುರುಬರ ಮತವೊಂದರಿಂದಲೇ ಪ್ರಿಯಕೃಷ್ಣ ಗೆದ್ದುಬಿಡುತ್ತಾರೆ. ಎಷ್ಟೇ ದುಡ್ಡು ಸುರಿದು ಓಟು ಖರೀದಿಗಿಳಿದರೂ ಅದರ ದುಪ್ಪಟ್ಟು ಸುರಿಯಲು ಪ್ರಿಯಕೃಷ್ಣ ರೆಡಿಯಾಗಿದ್ದಾನೆ. ಸೋಮಣ್ಣನ ಪಾಲಿಗಿದು ಆತನ ಬದುಕಿನ ಅತ್ಯಂತ ಜಿದ್ದಾಜಿದ್ದಿಯ ಚುನಾವಣೆ. ಕಳೆದ ಚುನಾವಣೆಯಲ್ಲಿ ಜೊತೆಗಿದ್ದ ಮಾಜಿ ಉಪಮೇಯರ್ ಪುಟ್ಟರಾಜು, ಗೋವಿಂದರಾಜನಗರದ ಕೆರೆ ಕಳ್ಳ ಕೌನ್ಸಿಲರ್ ಜಿ.ಕೃಷ್ಣಪ್ಪ, ವಿಜಯನಗರದ ಸಿಸಿಬಿ ನಟರಾಜ್ ಇತ್ಯಾದಿಗಳ್ಯಾರೂ ಈಗ ಸೋಮಣ್ಣನ ಜೊತೆಗಿಲ್ಲ. ಮಂತ್ರಿಗಿರಿಯೊಂದೇ ಶ್ರೀರಕ್ಷೆ ಎಂಬುದನ್ನು ಬಿಟ್ಟರೆ ಹೇಳಿಕೊಳ್ಳುವಂಥ ಸಾಧನೆಗಳಾಗಲಿ, ಜಾತಿ ಬೆಂಬಲವಾಗಲಿ, ಜನಪ್ರಿಯತೆಯಾಗಲಿ ಮೊದಲೇ ಇಲ್ಲ. ಬೆನ್ನಿಗಿರುವ ಪಟಾಲಮ್ಮಿಗೆ ಹಿಂದಿನಷ್ಟು ಹುಮ್ಮಸ್ಸು ಉಳಿದಿಲ್ಲ.

ಬಿಜೆಪಿ ಅಧಿಕಾರದಲ್ಲಿದೆ ಎಂಬುದನ್ನು ಬಿಟ್ಟರೆ ಸೋಮಣ್ಣನಿಗೆ ನೆರವಾಗುವ ಅಂಶಗಳು ತೀರಾ ವಿರಳ. ಎಷ್ಟೇ ದುಡ್ಡು ಸುರಿದು, ಏನೆಲ್ಲಾ ತಾಕತ್ತು ಬಳಸಿ ಸೆಣಸಿದರೂ ಲೇಔಟ್ ಕೃಷ್ಣಪ್ಪನವರ ಧನಬಲದ ಮುಂದೆ ನೀರು ಕುಡಿಯಲೇಬೇಕು. ಗೆದ್ದರೆ ಮಂತ್ರಿಗಿರಿ ಗಟ್ಟಿ. ಸೋತರೆ ಅಪನಿಂದೆ ಕಟ್ಟಿಟ್ಟಬುತ್ತಿ.

ಸೋಮಣ್ಣನಿಗಿದು ಮಾಡು ಇಲ್ಲವೇ ಮಡಿಯುವ ಅಂತಿಮ ಯುದ್ಧ!


● ರಾ. ಸೋಮನಾಥ್



...ಮಾಡಿದ್ದಾರೆ, ಆದರೆ ಕೊಲೆಗಡುಕರು ...ನಂಜುಂಡಸ್ವಾಮಿ ನಮ್ಮಿಂದ ಪಡೆದ ಸಾಲ ...ಹಿಂದಿರುಗಿಸದೆ ಸತಾಯಿಸುತ್ತಿದ್ದ, ಅದಕ್ಕೆ ...ಹೊಡೆದುಕೊಂಡು ಹೋಗುತ್ತಿದ್ದೆವು' ಎಂದು ...ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಆದರೆ ಇದು ...ನೋಟೋರಿಯಸ್ ಮರಳು ಕಳ್ಳ ವೀರೇಶನ ಪಾತಕಿ ...ಕೃತ್ಯ ಎಂದು ತಿಳಿಯುತ್ತಿದ್ದಂತೆ ಅವರಿಗೆ ಸ್ಥಳೀಯ ...ರೈತರು ಬುದ್ಧಿ ಕಲಿಸಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ...ಪ್ರಮೋದ್ ಕುಮಾರ್ ಸ್ಥಳಕ್ಕೆ ಬಂದು ಆಟೋ ...ಡ್ರೈವರ್ ಸೇರಿದಂತೆ ಐವರನ್ನು ವಶಕ್ಕೆ ...ಪಡೆದುಕೊಂಡು ಹೋಗಿದ್ದಾರೆ. ಆದರೆ ಸ್ಟೇಷನ್‌ಗೆ ...ಹೋಗುವುದರೊಳಗೆ ವೀರೇಶ್‌ನ ರಾಜಕೀಯ ...ಪ್ರಭಾವ ಮತ್ತು ದುಡ್ಡಿನ ದರ್ಪ ಪ್ರಮೋದ್ ...ಕುಮಾರ್ ಅವರನ್ನೂ ಸುಮ್ಮನಾಗುವಂತೆ ...ಮಾಡಿದೆ. ಪರಿಣಾಮವಾಗಿ ಕೊಲೆಗಡುಕರು ...ಸ್ಟೇಶನ್ ಮೆಟ್ಟಿಲು ಹತ್ತುವ ಮೊದಲೆ ...ತಲೆಮರೆಸಿಕೊಂಡಿದ್ದಾರೆ... ...ಬಚಾವಾಗಿದ್ದಾರೆ. ರೈತ ಸಂಘದವರು ...ಪ್ರತಿಭಟಿಸುತ್ತಾರೆಂದು ತಿಳಿದು ಇದು ಕೊಲೆಯತ್ನದ ...ಪ್ರಕರಣವಾದರೂ ಸರಿಯಾಗಿ ಎಫ್‌ಐಆರ್ ಹಾಕದೆ ...ಯಾವುದೋ ಸಣ್ಣಪುಟ್ಟ ಹಲ್ಲೆ, ಅಕ್ರಮ ಬಂಧನ ...ಕೇಸ್‌ಗಳನ್ನು ಹಾಕಿ ಆರೋಪಿಗಳನ್ನು ಬಿಟ್ಟಿದ್ದಾರೆ. ...ಜೊತೆಗೆ ಪ್ರಮುಖ ಆರೋಪಿಗಳಾದ ವೀರೇಶ್, ...ಇಬ್ಬರನ್ನೂ ಎಫ್.ಐ.ಆರ್.ನಿಂದಲೇ ...ಕೈಬಿಡಲಾಗಿದೆ.

...ಚೊಕ್ಕಳ್ಳಿ ನಂಜುಂಡಸ್ವಾಮಿ ಅಪ್ಪಟ ...ಪರಿಸರಪ್ರೇಮಿ, ಕೈಬಾಯಿ ಶುದ್ಧ ...ಇಟ್ಟುಕೊಂಡಿರುವ ಪ್ರಾಮಾಣಿಕ ರೈತ ...ಹೋರಾಟಗಾರ. ಇಂತಹ ಹೋರಾಟಗಾರನ ...ಮೇಲೆ ಮರಳು ಮಾಫಿಯಾದ ಇಂದನ್ ಬಾಬುನ ...ಕಾಲಂ 2 ಅಟ್ರಾಸಿಟಿ ಕೇಸು ಜಡಿಸಿದೆ. ವೀರೇಶ ...ಕೇಸು ಜಡಿಸಿದ್ದಾನೆ. ಏಕೆಂದರೆ ಪರಿಸರ ...ನಾಶವಾಗದಂತೆ ತಡೆದಿದ್ದಕ್ಕೆ, ಮರಳು ...ಮಾಫಿಯಾಗೆ ಶರಣಾಗದಿದ್ದಕ್ಕೆ.

● ಲಕ್ಷ್ಮಣ್ ಚೀರನಹಳ್ಳಿ.


ಹಾಲಪ್ಪ

ಹುಬ್ಬಳ್ಳಿ: ಉದಾಸಿ ಗೋಡೌನ್‌ಗೆ

ಹರತಾಳು ರೇಡ್


ಕಳೆದ ಭಾನುವಾರ ಹುಬ್ಬಳ್ಳಿಯ ಬಂಕಾಪೂರ್ ಚೌಕ್ ಸಮೀಪದ ಅಶೋಕ್ ತಿಳವಳ್ಳಿ ಎಂಬುವವನ ಗೋಡೋನ್‌ನಲ್ಲಿ 3050 ಕ್ವಿಂಟಾಲ್ ಅಕ್ರಮ ಅಕ್ಕಿ ದಾಸ್ತಾನು ಪತ್ತೆಯಾಗಿದೆ. ಅದು ಸರ್ಕಾರ ಬಡಬಗ್ಗರಿಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಹಂಚುವುದಕ್ಕಾಗಿ ಕಳುಹಿಸಿದ್ದ ಅಕ್ಕಿ. ಆದರೆ ಅದು ಬಡವರ ಹೊಟ್ಟೆ ತುಂಬಿಸುವ ಬದಲಿಗೆ ಶ್ರೀಮಂತರ ಜೇಬು ತುಂಬಿಸುವುದಕ್ಕೆ ಈ ರೀತಿ ಅಕ್ರಮವಾಗಿ ಶೇಖರಣೆಗೊಂಡಿತ್ತು. ಇದನ್ನು ಥೇಟ್ ಸಿನಿಮಾ ಶೈಲಿಯಲ್ಲಿ ರೇಡ್ ಮಾಡಿದವರು ಬೇರೆ ಯಾರೂ ಅಲ್ಲ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಹರತಾಳು ಹಾಲಪ್ಪ. ಆದರೆ ತಾನು ಏನೋ ದೊಡ್ಡ ಸಾಧನೆ ಮಾಡಿದೆ ಎಂದು ಬೆನ್ನು ತಟ್ಟಿಕೊಳ್ಳುವ ಬದಲು ಹರತಾಳು ಹಾಲಪ್ಪ ಇವತ್ತು ತಲೆ ಚಚ್ಚಿಕೊಳ್ಳುತ್ತಿದ್ದಾರೆ. ಕಾರಣ: ಈ ಅಕ್ರಮ ದಾಸ್ತಾನು ಮಾಡಿದ್ದು ಬಿಜೆಪಿಯ ಮುದಿ ನಾಯಕ ಸಿ.ಎಂ. ಉದಾಸಿಯ ಪುತ್ರ ಹಾಗೂ ಸಂಸದ ಶಿವಕುಮಾರ್ ಉದಾಸಿ! ದೊಡ್ಡ ಅಕ್ಕಿ ಕಳ್ಳ ಅಶೋಕ್ ತಿಳವಳ್ಳಿಯ ಪಾರ್ಟನರ್‌ಶಿಪ್‌ನೊಂದಿಗೆ!!

ಆರು ತಿಂಗಳ ಹಿಂದೆ ಪೊಲೀಸರು ಮತ್ತು ಆಹಾರ ಮತ್ತು ಪೂರೈಕೆ ಇಲಾಖೆಯ ಅಧಿಕಾರಿಗಳು ಸೇರಿ ಇದೇ ಬಂಕಾಪೂರ ಚೌಕದ ಬಳಿ ತಿಳವಳ್ಳಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ಇಷ್ಟೇ ಪ್ರಮಾಣದ ಅಕ್ಕಿಯನ್ನು ವಶಪಡಿಸಿಕೊಂಡಿದ್ದರು. ಆ ಪ್ರಕರಣದ ಫೈಲ್ ಇನ್ನೂ ಧೂಳು ತಿನ್ನುತ್ತಾ ಕುಳಿತಿರುವಾಗಲೇ ಈಗ ಮತ್ತೊಂದು ರೇಡ್‌ನಲ್ಲಿ ಈ ಅಕ್ರಮ ಬಯಲಾಗಿದೆ. ಅಂದರೆ ರೇಡ್‌ಗಳ ಮೇಲೆ ರೇಡ್ ನಡೆದರೂ ಬಡವರಿಗೆ ಸೇರಬೇಕಾದ ಅಕ್ಕಿ ಈ ಕಳ್ಳರ ಪಾಲಾಗುವುದು ಮಾತ್ರ ನಿಂತಿಲ್ಲ.

ಧಾರವಾಡ ಜಿಲ್ಲೆಯಲ್ಲಿ ಪಡಿತರ ಧಾನ್ಯ ವಿತರಣೆಗಾಗಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ 605. ಇವುಗಳಿಗೆ ಪ್ರತಿ ತಿಂಗಳು ಸರಬರಾಜಾಗುವ ಧಾನ್ಯ ಸುಮಾರು 5800 ಟನ್. ಇದರಲ್ಲಿ 5000 ಟನ್ ಅಕ್ಕಿ ಹಾಗೂ ಉಳಿದ 800 ಟನ್ ಗೋಧಿ. ಸಕ್ಕರೆ ಇತ್ಯಾದಿ ಸೇರಿದೆ. ಗ್ರಾಮಾಂತರ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲೇ ನ್ಯಾಯಬೆಲೆ ಅಂಗಡಿಗಳು ಜಾಸ್ತಿ ಇವೆ. ಪ್ರತಿ ಅಂಗಡಿಯಲ್ಲೂ 250 ರಿಂದ 4000 ಕಾರ್ಡ್‌ಗಳಿಗೆ ಧಾನ್ಯ ನೀಡಲಾಗುತ್ತದೆ. ಪ್ರತಿ ನ್ಯಾಯಬೆಲೆ ಅಂಗಡಿಯಲ್ಲೂ ಏನಿಲ್ಲವೆಂದರೂ 50 ರಿಂದ 100 ಕಾರ್ಡುಗಳನ್ನು ಅಕ್ಕಿ ಕಳ್ಳರು ಬೇನಾಮಿ ಹೆಸರಿನಲ್ಲಿ ಪಡೆದುಕೊಂಡಿದ್ದಾರೆ. ಈ ಹಲ್ಕಟ್ ಕೆಲಸ ಮಾಡಿಕೊಡುವುದಕ್ಕೆ ಫುಡ್ ಇನ್ಸ್‌ಪೆಕ್ಟರ್‌ಗಳು ಸುಮಾರು ಐದಾರು ಸಾವಿರ ಲಂಚ ನುಂಗಿದ್ದಾರೆ. ಈ ಕಳ್ಳರು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದವರು ಅಂತೇನೂ ಇಲ್ಲ. ಎಲ್ಲಾ ಪಕ್ಷದವರೂ ಇದ್ದಾರೆ. ಅಂತಹ ಬೇನಾಮಿ ಕಾರ್ಡುಗಳನ್ನು ಹೊಂದಿರುವ ಅಕ್ಕಿ ಕಳ್ಳರಲ್ಲಿ ರಮೇಶ್ ಭಾಪಣ, ಶಂಕ್ರಣ್ಣ ಮುನವಳ್ಳಿ, ಗಂಗಣ್ಣ ಬತ್ತಿ, ಹರ್ಲಾಪೂರ್ ಅಶೋಕ್ ತಿಳವಳ್ಳಿ ಪ್ರಮುಖರು.


ರಮೇಶ್






ಹರ್ಲಾಪೂರ್ ಮತ್ತು ಅಶೋಕ್ ತಿಳವಳ್ಳಿಗಳು ಈ ಬೇನಾಮಿ ಕಾರ್ಡುಗಳ ಮೂಲಕ ಕಡಿಮೆ ಬೆಲೆಗೆ ಅಕ್ಕಿ ಖರೀದಿಸಿದರೆ ಬಿಜೆಪಿ ಮತ್ತು ವಿಶ್ವ ಹಿಂದೂ ಪರಿಷತ್ ನೆರಳಿನಲ್ಲಿರುವ ರಮೇಶ್ ಭಾಪಣ, ಮಾಜಿ ಸಚಿವ ಕಾಂಗ್ರೆಸ್‌ನ ಜಬ್ಬರ್‌ಖಾನ್ ಹೊನ್ನಳ್ಳಿ ಶಿಷ್ಯ ಇಮಾಮ ಕೊಳೂರ್, ಅಶೋಕ್ ತಿಳವಳ್ಳಿಯ ಗೋಡೌನ್‌ನಲ್ಲಿ ಆ ಅಕ್ಕಿಯನ್ನು ಪಾಲಿಷ್ ಮಾಡುವ ದಂಧೆ ಮಾಡುತ್ತಾರೆ. ಈ ಕಡಿಮೆ ದರ್ಜೆಯ ಅಕ್ಕಿಯನ್ನು ಉತ್ತಮ ದರ್ಜೆಯ ಅಕ್ಕಿಯೊಂದಿಗೆ ಬೆರೆಸಿ ಮಾರಾಟ ಮಾಡುವ ದಂಧೆಯನ್ನು ರಮೇಶ್ ಭಾಪಣ ಮಾಡುತ್ತಾನೆ.

ಪ್ರತಿ ಕ್ವಿಂಟಾಲ್ ಅಕ್ಕಿಯನ್ನು ನೇರವಾಗಿ ಗೋಡೌನ್‌ನಿಂದಲೇ ಕೇವಲ 300 ರೂಪಾಯಿಗೆ ಖರೀದಿಸುತ್ತಾರೆ. ಒಂದೊಂದು ಕ್ವಿಂಟಾಲ್‌ಗೆ 100 ರೂಪಾಯಿಯಂತೆ ಆಹಾರ ಇಲಾಖೆಯ ಅಧಿಕಾರಿಗಳಿಗೆ ದಕ್ಷಿಣೆ ನೀಡುತ್ತಾರೆ. ಧಾರವಾಡದ ಫುಡ್ ಇನ್ಸ್‌ಪೆಕ್ಟರ್ ಬನವಾಸಿ ಮತ್ತು ಹುಬ್ಬಳ್ಳಿಯ ದೇಸಾಯಿಗಳು ಅಕ್ಕಿ ಕಳ್ಳರ ಈ ದಕ್ಷಿಣೆ ಪಡೆದು ಸೇವೆ ಸಲ್ಲಿಸುವಲ್ಲಿ ಬಹಳ ಹೆಸರು ಮಾಡಿದ್ದಾರೆ. ಅಶೋಕ್ ತಿಳವಳ್ಳಿಯೊಬ್ಬನೇ ಪ್ರತಿ ತಿಂಗಳು 5000 ಕ್ವಿಂಟಾಲ್‌ಗಿಂತ ಹೆಚ್ಚು ಅಕ್ಕಿ ಕದ್ದು ಮಾರುತ್ತಾನೆಂದರೆ ಈ ದಂಧೆ ಯಾವ ಮಟ್ಟದಲ್ಲಿ ನಡೆಯುತ್ತಿದೆ ಎಂದು ನೀವೇ ಊಹಿಸಿ. ಈ ಬಿಸಿನೆಸ್‌ನಲ್ಲಿ ಉದಾಸಿ ಮಗ ಮತ್ತು ಸಂಸದ ಶಿವಕುಮಾರ್ ಉದಾಸಿ ಆಕ್ಟೀವ್ ಪಾರ್ಟನರ್ ಆಗಿದ್ದಾನೆ. ಹಿಂದುಮುಂದು ನೋಡದೇ ಹರತಾಳು ಬಂದು ರೇಡ್ ಮಾಡಿ, ಪತ್ರಿಕೆಗಳ ಕ್ಯಾಮರಾಗಳಿಗೆ ಪೋಜ್ ಕೊಟ್ಟು ಬೆಂಗಳೂರು ತಲುಪುತ್ತಿದ್ದಂತೆಯೇ ಅದರಲ್ಲಿ ಉದಾಸಿಯ ಪಾರ್ಟನರ್‌ಶಿಪ್ ಇರುವುದು ಗೊತ್ತಾಗಿ ತಲೆನೋವು ಶುರುವಾಗಿದೆ.

ಇಂಥ ರಾಜಕಾರಣಿಗಳನ್ನು, ಇಂಥ ಅಕ್ಕಿ ಕಳ್ಳರನ್ನು ಹೊಂದಿರುವ ಕನ್ನಡನಾಡಿನ ಜನರಿಗೆ ಎಲ್ಲಿಯ ನ್ಯಾಯ ಸಿಗಬೇಕು?



ಅಕ್ಕಿ ಅಕ್ರಮ ದಾಸ್ತಾನು ಗೋಡೌನ್...

● ಹುಬ್ಬಳ್ಳಿಯಾಂವ





ಬುಲೆಟ್ ರವಿ ಮನೆ...



ಬುಲೆಟ್ ರವಿ ಹತ್ಯೆಗೆ ಬಳಸಿದ ಆಯುಧ

ಬುಲೆಟ್ ರವಿ ಹಂತಕರ ಬಿಜೆಪಿ ಲಿಂಕ್

ಮಚ್ಚನ ಕೊಲೆಯ ನಂತರ ಇತ್ತೀಚೆಗೆ ಬೆಂಗಳೂರು ಕಂಡ ಅತ್ಯಂತ ವ್ಯವಸ್ಥಿತ ಹತ್ಯೆಯಿದು. ಹಂತಕರ ತಂಡಕ್ಕೆ ಪ್ರತಿನಿತ್ಯ ರವಿ ಜಿಮ್ಮಿಗೆ ಬರುತ್ತಿದ್ದ ಸಂಗತಿ ಗೊತ್ತಿತ್ತು. ದಿನದ ಯಾವುದೇ ಗಳಿಗೆಯಲ್ಲೂ ಕನಿಷ್ಠ ನಾಲ್ಕೈದು ಮಂದಿ ಬಂದೂಕುಧಾರಿ 'ಗನ್‌ಮೆನ್' ರಕ್ಷಣೆಯಲ್ಲಿರುತ್ತಿದ್ದ ಬುಲೆಟ್ ರವಿ ಸದ್ಯದ ಮಟ್ಟಿಗೆ ಬೆಂಗಳೂರಿನ ಕೆಲವೇ ಕೆಲವು ಶ್ರೀಮಂತ ರೌಡಿಗಳ ಪೈಕಿ ಪ್ರಮುಖನಾಗಿದ್ದ. ಬಹುಶಃ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿಯ ವಿಶ್ವನಾಥ್ ಗೆದ್ದು ಎಮ್ಮೆಲ್ಲೆಯಾಗದೇ ಇರುತ್ತಿದ್ದರೆ ಇನ್ನಷ್ಟು ಕಾಲ ರವಿ ಬದುಕಿರುತ್ತಿದ್ದನೇನೊ?

■ ರಾ. ಸೋಮನಾಥ್




ಬುಲೆಟ್ ರವಿ

ಲೆಕ್ಕಾಚಾರದಂತೆಯೇ ಕೊಲೆಯಾಗಿದ್ದಾನೆ ಬುಲೆಟ್ ರವಿ!

ಕಳೆದೊಂದು ವಾರದಿಂದ ನಿಗೂಢವಾಗಿ ಸುತ್ತುತ್ತಿದ್ದ ಗಾಡಿಗಳು, ಇದ್ದಕ್ಕಿದ್ದಂತೆ ಭೂಗತರಾದ ಆತನ ವಿರೋಧಿಗಳು, ಬುಲೆಟ್ ರವಿಯ ಚಡಪಡಿಕೆ ಮತ್ತು ಮುಂಬರುವ ಪಾಲಿಕೆ ಚುನಾವಣೆಯ ಜಿದ್ದಾಜಿದ್ದಿ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಯಲಹಂಕದ ಪೊಲೀಸರ ನಿರೀಕ್ಷೆಗೆ ತಕ್ಕಂತೆಯೇ ಅನಾಹುತ ನಡೆದದ್ದು ಜುಲೈ 27ರ ಬೆಳ್ಳಂಬೆಳಿಗ್ಗೆ-

ಯಲಹಂಕದ ಶೇಷಾದ್ರಿಪುರಂ ಕಾಲೇಜಿನ ಪಕ್ಕದಲ್ಲೇ ಇರುವ 'ಫಿಟ್‌ನೆಸ್ ವರ್ಲ್ಡ್' ಎಂಬ ಜಿಮ್ಮಿನ 'ಬೆಂಚ್‌ಪ್ರೆಸ್'ನ ಮೇಲೆಯೇ ರವಿ ಹೆಣವಾಗಿದ್ದ. ಪಕ್ಕದಲ್ಲೇ ಆತನ ಸ್ನೇಹಿತ ಸೀನನ ಶವ ಬಿದ್ದಿತ್ತು. ತಲೆ, ಮುಖ, ಕತ್ತು, ಎದೆ, ಹೊಟ್ಟೆ ಯಾವುದನ್ನೂ ಬಿಡದೇ ಕತ್ತರಿಸಲಾಗಿತ್ತು. ರವಿ ಜೊತೆಗಿದ್ದ ವಾಸು 'ಲಾಂಗ್' ಏಟು ತಿಂದೂ ಹೇಗೋ ಬಚಾವಾಗಿದ್ದು ಬಿಟ್ಟರೆ ಸೀನ ಮತ್ತು ರವಿ ಇಬ್ಬರೂ ಜಿಮ್ಮಿನಲ್ಲೇ ಮಾಂಸದ ಮುದ್ದೆಯಂತಾಗಿ ಹೋಗಿದ್ದರು.

ಬಹುಶಃ ಮಚ್ಚನ ಕೊಲೆಯ ನಂತರ ಇತ್ತೀಚೆಗೆ ಬೆಂಗಳೂರು ಕಂಡ ಅತ್ಯಂತ ವ್ಯವಸ್ಥಿತ ಹತ್ಯೆಯಿದು. ಹಂತಕರ ತಂಡಕ್ಕೆ ಪ್ರತಿನಿತ್ಯ ರವಿ ಜಿಮ್ಮಿಗೆ ಬರುತ್ತಿದ್ದ ಸಂಗತಿ ಗೊತ್ತಿತ್ತು. ದಿನದ ಯಾವುದೇ ಗಳಿಗೆಯಲ್ಲೂ ಕನಿಷ್ಠ ನಾಲ್ಕೈದು ಮಂದಿ ಬಂದೂಕುಧಾರಿ 'ಗನ್‌ಮೆನ್' ರಕ್ಷಣೆಯಲ್ಲಿರುತ್ತಿದ್ದ ಬುಲೆಟ್ ರವಿ ಸದ್ಯದ ಮಟ್ಟಿಗೆ ಬೆಂಗಳೂರಿನ ಕೆಲವೇ ಕೆಲವು ಶ್ರೀಮಂತ ರೌಡಿಗಳ ಪೈಕಿ ಪ್ರಮುಖನಾಗಿದ್ದ. ಕೇವಲ ಆರೇಳು ವರ್ಷಗಳಲ್ಲಿ ನೂರು ಕೋಟಿಗೂ ಅಧಿಕ ಮೊತ್ತದ ಆಸ್ತಿಗಳಿಸಿದ್ದ ಬುಲೆಟ್ ರವಿ ಅಲಿಯಾಸ್ ಗೋಲ್ಡ್ ರವಿ ಆ ಕಾರಣಕ್ಕಾಗಿಯೇ ಥರೇವಾರಿ ಶತ್ರುಗಳನ್ನು ಸೃಷ್ಟಿಸಿಕೊಂಡ.



ಮೊದಲ ಬಾರಿಗೆ ಬುಲೆಟ್ ರವಿ ಎಂಬ ಹೆಸರು ಯಲಹಂಕದಿಂದಾಚೆಗೆ ಕೇಳಿಬಂದಿದ್ದು 2005ರ ನವೆಂಬರ್ 1ರಂದು. ಆವತ್ತು ಬೆಳಿಗ್ಗೆ ಯಲಹಂಕದ ಪಕ್ಕದ ಜಡ್ಜಸ್ ಕಾಲೋನಿಯಲ್ಲಿ ಕೊಲೆಯಾದವನು ಮಚ್ಚ. ಹಾಗೆ ಮುಲಾಮನ ತಂಡದಿಂದ ಹತನಾದ ಮಚ್ಚನನ್ನು ದೂರದ ಯಲಹಂಕಕ್ಕೆ ಬರಮಾಡಿಕೊಂಡು ಮನೆ ಮಾಡಿ ಇಟ್ಟದ್ದೇ ಬುಲೆಟ್ ರವಿ. ವಿಕಟವೆಂದರೆ ಕೊಲೆಯಲ್ಲಿ ಮಚ್ಚನ ವಿರೋಧಿಗಳಿಗೆ ನೆರವಾಗಿದ್ದೂ ಬುಲೆಟ್ ರವಿಯೇ ಎಂಬುದು ರಹಸ್ಯವಾಗಿ ಉಳಿಯಲಿಲ್ಲ. ಮುಂದೆ ಮಚ್ಚನ ಹಂತಕರ ಜೊತೆಗೇ ರವಿ ಕಾಣಿಸಿಕೊಂಡ. ಮಚ್ಚ, ಸೈಲೆಂಟ್ ಸುನೀಲ, ಗೆಡ್ಡಾ ನಾಗ ಮತ್ತು ಕೊರಂಗು ಸಿಂಡಿಕೇಟಿನ ಪರಮ ವೈರಿಗಳಾದ ಮುಲಾಮು, ರಾಮ-ಲಕ್ಷ್ಮಣ ಮತ್ತು ಸುಪಾರಿ ಕಿಲ್ಲರ್ ಸೈಕಲ್ ರವಿಯಂಥ ಪಾತಕಿಗಳಿಗೆಲ್ಲ ದುಡ್ಡು, ಆಶ್ರಯ ಕೊಡುತ್ತಿರುವುದೇ ಈತ ಎಂಬುದು ಬಹುಬೇಗನೇ ಹೊರಜಗತ್ತಿಗೆ ಗೊತ್ತಾಗಿತ್ತು.

ಹಾಗೆ ಖತರ್‌ನಾಕ್ ರೌಡಿಗಳ ಹೆಸರು ಬಳಸಿಕೊಂಡು ಕಂಡಕಂಡ ಆಸ್ತಿಯನ್ನೆಲ್ಲ ಕಬಳಿಸುತ್ತಿದ್ದ ಬುಲೆಟ್ ರವಿಗೆ ಯಾರಿಂದ, ಯಾವ ಮೂಲೆಯಿಂದ ತನಗೆ ಸಾವು ಕಾದಿದೆಯೆಂಬುದು ಮಾತ್ರ ಗೊತ್ತಾಗಲೇ ಇಲ್ಲ.

ಬಹುಶಃ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿಯ ವಿಶ್ವನಾಥ್ ಗೆದ್ದು ಎಮ್ಮೆಲ್ಲೆಯಾಗದೇ ಇರುತ್ತಿದ್ದರೆ ಇನ್ನಷ್ಟು ಕಾಲ ರವಿ ಬದುಕಿರುತ್ತಿದ್ದನೇನೊ? ಎಮ್ಮೆಲ್ಲೆ ವಿಶ್ವನಾಥ್ ಕೂಡ ರವಿಯಷ್ಟೇ ಖತರ್‌ನಾಕ್ ಭೂಕಂಟಕ. ತನಗೆ ಸರಿಸಮನಾಗಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮಿಂಚುತ್ತಿರುವ

▶▶▶ 14

ಮಚ್ಚನ ಹತ್ಯೆಯ ಮೂರನೇ ರೀವೇಂಜ್?

ಮುನಿ ಆಂಜನಪ್ಪನೆಂಬ ದಲಿತ ನಾಯಕನ ಕೊಲೆಗೆ ಪ್ರತೀಕಾರವಾಗೇ ಬುಲೆಟ್ ರವಿಯ ಹತ್ಯೆ ನಡೆಯಿತೆಂದು ಯಾರೆಷ್ಟೇ ವಾದ ಮಂಡಿಸಿದರೂ ಅದು ಪೂರ್ತಿ ಸತ್ಯವಲ್ಲ.

2006 ರ ಫೆಬ್ರವರಿ 6 ರಂದು ಬುಲೆಟ್ ರವಿ ಗ್ಯಾಂಗ್‌ನಿಂದ ಹತನಾದ ಮುನಿ ಆಂಜನಪ್ಪ ಕೂಡ ಒಂದಾನೊಂದು ಕಾಲಕ್ಕೆ ಬುಲೆಟ್ ರವಿ ಜೊತೆಗಿದ್ದವನೆ. ಮೂಲತಃ ಕನಕಪುರದ ತಿಮ್ಮಯ್ಯನ ಮಗನಾದ ಬುಲೆಟ್ ರವಿಯ ಮೂಲ ಹೆಸರು ರವಿರಾಜ್ ಜಾತಿಯಲ್ಲಿ ದಲಿತ. ಲಾರಿ ಕ್ಲೀನರ್ ಆಗಿ ಬೆಂಗಳೂರು ಸೇರಿಕೊಂಡ ರವಿ ಆಟೋ ಸೀಝಿಂಗ್ ದಂಧೆಗಿಳಿಯುತ್ತಿದ್ದಂತೆ ಯಾವುದೋ ಕ್ಷುಲ್ಲಕ ವಿಷಯಕ್ಕೆ ಮುನಿ ಆಂಜನಪ್ಪನಿಂದ ಒದೆ ತಿಂದ. ಹಾಗೇ ತಲೆ ಒಡೆದು ರಕ್ತ ಬರುವಂತೆ ಹೊಡೆಸಿಕೊಂಡ ರವಿ 2006 ರ ಫೆಬ್ರವರಿ 6 ರಂದು ಮುನಿ ಆಂಜನಪ್ಪನನ್ನು ಕಿಡ್ನಾಪ್ ಮಾಡಿದ

ಮರುದಿನ ಅಂದರೆ ಫೆಬ್ರವರಿ 7ರ ಬೆಳಿಗ್ಗೆ ಮುನಿ ಆಂಜನಪ್ಪನ ಹೆಣ ಯಲಹಂಕದ ಗಣೇಶ್ ಚಿತ್ರಮಂದಿರದ ಹಿಂಭಾಗದಲ್ಲಿ ಬಿದ್ದಿತ್ತು. ಆವತ್ತು ಬುಲೆಟ್ ರವಿಯ ಜೊತೆ ಪ್ರೇಮ್‌ಕುಮಾರ್, ಬಸವ, ಸಂತೋಷ್‌ಕುಮಾರ್, ನಾಗೇಶ್, ವಿಸು, ನಿರಂಜನ್ ನಾಗ, ಹರೀಶ ಸಂದೀಪ ಮತ್ತು ಅರುಣ್ ಕುಮಾರ್ ಎಂಬ ಹತ್ತು ಮಂದಿ ಹುಡುಗರು ಜೈಲು ಪಾಲಾದರು. ಆದರೆ ಇದನ್ನೇ ನೆಪ ಮಾಡಿಕೊಂಡು ಬುಲೆಟ್ ರವಿಯಿಂದ ದುಡ್ಡು ಕೀಳಲು ನಿಂತವನು ಪಾತಕಿ ಗೆಡ್ಡಾನಾಗ!

ಕೊಲೆಯಾದ ಮುನಿ ಆಂಜನಪ್ಪ ಹೇಳಿಕೇಳಿ ಗೆಡ್ಡಾನಾಗನ ಶಿಷ್ಯ. ನನ್ನ ಶಿಷ್ಯನನ್ನು ಕೊಂದಿದ್ದಕ್ಕೆ ನಿನ್ನ ಮೇಲೆ ರೀವೇಂಜ್ ತಗೋಬಾರ್ದು ಅಂತಿದ್ದರೆ ಅಷ್ಟು ಲಕ್ಷ ಕೊಡು ಇಷ್ಟು ಲಕ್ಷ ಕೊಡು ಎಂದು ಆಗಾಗ ದುಡ್ಡು ಕೀಳುತ್ತಲೇ ಇದ್ದ. ಹಾಳಾಗಲಿ ಎಂದು ರವಿಯೂ ಕೊಟ್ಟು ಕಳಿಸುತ್ತಿದ್ದ. ಈ ಮಧ್ಯೆ ಹತ ಮುನಿಆಂಜನಪ್ಪನ ಪತ್ನಿ ಗಾಯತ್ರಿಯ ಕಾಲಿಗೆ ಬಿದ್ದು ರಾಜಿ ಮಾಡಿಕೊಂಡ ರವಿ ಆಕೆಯ ಇಬ್ಬರು ಮಕ್ಕಳ ಹೆಸರಿಗೂ ತಲಾ ಐದು ಲಕ್ಷದಂತೆ ಬ್ಯಾಂಕ್ ಠೇವಣಿ ಇಟ್ಟು ರಾಜಿ ಮಾಡಿಕೊಂಡ.

ಅಲ್ಲಿಗೆ ಮುನಿ ಆನಂಜಪ್ಪನ ಕೊಲೆ ಕೇಸೇ ಬಿದ್ದು ಹೋಯಿತು.

ಹಾಗಂತ ಗೆಡ್ಡಾ ಬಿಡಬೇಕಲ್ಲ. ಎಲ್ಲಕ್ಕೂ ಮಿಗಿಲಾಗಿ ಮಚ್ಚನ ಜೊತೆಗಿದ್ದೇ ಆತನ ಹತ್ಯೆಗೆ ನೆರವಾದ ರವಿ ಮೇಲೆ ಕೊರಂಗು ತಂಡ ಕಣ್ಣಿಟ್ಟೇ ಇತ್ತು. ಮಚ್ಚನ ಹತ್ಯೆಯ ರೀವೇಂಜ್ ತನ್ನನ್ನು ಬೆಂಬತ್ತಿದ ಭೂತದಂತೆ ಕಾಡುತ್ತಿರುವುದರ ಸ್ಪಷ್ಟ ಮಾಹಿತಿಯಿದ್ದುದರಿಂದಲೇ ರವಿ ಕೊರಂಗು ವಿರೋಧಿ ತಂಡದ ಮುಲಾಮನ ಜೊತೆ ಗುರುತಿಸಿಕೊಂಡ. ಬೆಂಗಳೂರಿನ ನಟೋರಿಯಸ್ ಸುಪಾರಿ ಕಿಲ್ಲರ್ ಸೈಕಲ್ ರವಿ. ಕೊರಂಗೂನ ಪರಮ ವೈರಿ ಹೆಬ್ಬೆಟ್ಟು ಮಂಜ ಮತ್ತು ಮುಲಾಮನ ಬಂಟರಾದ ರಾಮ-ಲಕ್ಷ್ಮಣರನ್ನು ಆಗಾಗ ಯಲಹಂಕಕ್ಕೆ ಕರೆಸಿಕೊಂಡು ಪೋಷಿಸ ಕೊಟ್ಟ. ಅಲ್ಲಿಗೆ ಕೊರಂಗು ವಿರೋಧಿ ಗ್ಯಾಂಗಿಗೆ ದುಡ್ಡೂ ಕಾಸಿನ ನೆರವು ಸಿಗುತ್ತಿರುವುದೆ ಬುಲೆಟ್ ರವಿಯಿಂದ ಎಂಬುದು ಗ್ಯಾರಂಟಿಯಾಗಿದೆ.

ಸೈಕಲ್ ರವಿ ಮತ್ತು ಮುಲಾಮರ ಎಲ್ಲಾ ವಿರೋಧಿಗಳೂ ಕೊರಂಗು ನೇತೃತ್ವದಲ್ಲಿ ಒಂದಾಗಿದ್ದಾರೆ. ಇದನ್ನು ಮೊದಲೇ ಗ್ರಹಿಸಿದ ಗೆಡ್ಡಾನಾಗ ಹೇಗೂ ಕೊಲೆಯಾಗುವುದು ಗ್ಯಾರಂಟಿ. ಅದಕ್ಕೂ ಮೊದಲೇ ಒಂದಷ್ಟು ದುಡ್ಡು ಕಿತ್ತುಕೊಂಡರಾಯ್ತು ಎಂದು ರವಿಗೆ ಫೋನು ಹಾಕಿದ್ದಾನೆ. 'ಹೇಗೋ ಹತ್ತು ಕೋಟಿ ಲ್ಯಾಂಡಿನ ಕಮೀಷನ್ನಾಗಿ ಎರಡು ಕೋಟಿ ಸಂಪಾದಿಸಿದ್ದೀಯಾ. ನನಗೊಂದು 25 ಲಕ್ಷ ಮಡಗು' ಎಂಬ ಗೆಡ್ಡಾನಾಗನ ಧಮಕಿಗೆ ರವಿ ಖಡಕ್ಕಾಗಿಯೇ ಆವಾಜು ಬಿಟ್ಟಿದ್ದಾನೆ. ಯಾವತ್ತು ರವಿಯಿಂದ ಕಾಸು ಗಿಟ್ಟಲ್ಲವೋ ಗೆಡ್ಡಾ ಗ್ರೀನ್ ಸಿಗ್ನಲ್ ಕೊಟ್ಟುಬಿಟ್ಟ.

ಇಷ್ಟೊಂದು ವ್ಯವಸ್ಥಿತವಾಗಿ ಕೊಲ್ಲುವ ಚಾಕಚಕ್ಯತೆಯಾಗಲಿ, ಸಿದ್ಧತೆಯಾಗಲಿ ಖಂಡಿತ ಅಲ್ಲಾಳಸಂದ್ರದ ಶೇಖ್ರಿಗಿಲ್ಲ. ಬಹುಶಃ ಕೊರಂಗು ಗ್ಯಾಂಗ್ ಕೊಂದು ಅದನ್ನು ಎಮ್ಮೆಲ್ಲೇ ವಿಶ್ವನಾಥ ಬಂಟ ಶೇಖ್ರಿಯ ತಲೆಗೆ ಕಟ್ಟಿದೆಯೇ? ಯಾರೋ ಮಾಡಿದ ಹತ್ಯೆಯನ್ನು ಶೇಖ್ರಿ ತಾನು ಹೊತ್ತು ಹೆಸರು ಮಾಡಿಕೊಳ್ಳುತ್ತಿರಬಹುದಾ

ಏಕೆಂದರೆ ಮುನಿ ಆಂಜನಪ್ಪನ ಹತ್ಯೆಗಿಂತಲೂ ಮಚ್ಚನ ತಲೆಗೇ ಹೆಚ್ಚು ಬೆಲೆ. ಮಚ್ಚನ ಹತ್ಯೆಗೆ ಪ್ರತೀಕಾರವಾಗಿ ನಡೆದ ತಿಮ್ಮೇನಹಳ್ಳಿ ಸೂರಿ ಮತ್ತು ಮಂಡ್ಯ ಕೃಷ್ಣ ಹತ್ಯೆಯ ನಂತರ ಬುಲೆಟ್ ರವಿ ಮೂರನೇ ಬಲಿಯಾ?

ಪೊಲೀಸರೇ ಉತ್ತರಿಸಬೇಕು.


...ಲ್ಲಾಗೆ ಅಧಿಕಾರ ಬಂದ್ರೆ ಅಪ್ಪಲ್ಲನಿಗೆ ಬಿಡಿಎ ಸೈಟು ಕೊಟ್ಟಂತೆ' ... ಆಧುನಿಕ ಗಾದೆ ಮಾತು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ... ಮಾಡಿಬಿದಂತಿದೆ.

...ದ ವಾರ ಯಡ್ಡಿ 66 ಜನರಿಗೆ ಜಿ ಕ್ಯಾಟಗರಿಯಲ್ಲಿ ಬಿಡಿಎ ... ದಯಪಾಲಿಸಿದರಲ್ಲ ಆ ಫಲಾನುಭವಿಗಳ ಪೈಕಿ ಒಬ್ಬ ... ಘಾತುಕನ ಹೆಸರೂ ಕಾಣಿಸಿಕೊಂಡಿದೆ.

ಆತ ಪಿ.ವಿ. ಕೃಷ್ಣಭಟ್ಟ!

...ರ್ಕಾರಿ ಆದೇಶದಲ್ಲಿ ಈತನನ್ನು ಸಮಾಜ ಸೇವಕ, ... ತಜ್ಞ ಎಂದು ಹೆಸರಿಸಲಾಗಿದೆ. ಈಗಿನ ...ಯ ಕನ್ನಡಿಗರಿಗೆ ಕೃಷ್ಣಭಟ್ಟನ ಜಾತಕ ...ವಿರಬಹುದು. ಆದರೆ ಕರ್ನಾಟಕದ ಜನ ...ಲಭಕ್ಕೆ ಮರೆಯಬಹುದಾದ ಹೆಸರಲ್ಲ ...ಷ್ಣಭಟ್ಟನದ್ದು.

...ವತ್ತಾಗೆ ಈತ ಒಂದು ಕಾಲದಲ್ಲಿ ...ಕ ಸೆಕ್ಸ್ ಪತ್ರಿಕೆ ರತಿ ವಿಜ್ಞಾನದ ...ೋಗ್ರಾಫರ್ ಎಂದು ಹೇಳಿಕೊಳ್ಳುತ್ತಿದ್ದ ...ರ ಚಂದ್ರಗುತ್ತಿ ಬೆತ್ತಲೆ ಸೇವೆ ...ೊಗ್ಗ ಜಿಲ್ಲೆಯ ಸೊರಬಾದ ...ಕಾಂಬ ದೇವಿಯ ದೊಂಬ ...ದಲ್ಲಿ ಈತನ ಕೈವಾಡವಿತ್ತೆಂದು ...ಸಂಘರ್ಷ ಸಮಿತಿ ಆರೋಪಿಸಿತ್ತು. ಆನಂತರ ...ಯಣ' ಪುಸ್ತಕ ಬರೆದಿದ್ದ ಪೋಲಂಕಿ ...ಮೂರ್ತಿಯವರು ಒಮ್ಮೆ ಶಿವಮೊಗ್ಗಕ್ಕೆ ಹೋಗಿದ್ದಾಗ ...ಟ್ಟನ ಚಿತಾವಣೆಯಿಂದಲೇ RSS ದುರಾತ್ಮರು ...ಕಿ ಮೇಲೆ ಹಲ್ಲೆ ನಡೆಸಿದ್ದರು.



ಚುನಾವಣೆಯಲ್ಲಿ 75 ಕೋಟಿ ರೂಪಾಯಿ ಖರ್ಚು ಮಾಡಿ ಶಿವಮೊಗ್ಗ ಎಂಪಿಯಾಗಿ ಗೆದ್ದ ಯಡ್ಡಿ ಸುಪುತ್ರ, ರಾಘವೇಂದ್ರನೂ ಸೈಟಿನ ಫಲಾನುಭವಿಗಳಲ್ಲೊಬ್ಬ. ಈ ಭ್ರಷ್ಟರು ಸರ್ಕಾರಿ ಆಸ್ತಿ, ಸರ್ಕಾರಿ ದುಡ್ಡು ಕದಿಯುವುದು ಹೊಸದೇನಲ್ಲ, ಆದರೆ ಮಾತೆತ್ತಿದರೆ ಭಾರತಾಂಬೆ, ದೇಶಭಕ್ತಿ ಎನ್ನುತ್ತಾ ಓಡಾಡಿಕೊಂಡಿದ್ದ ಕೃಷ್ಣಭಟ್ಟನಿಗೂ ಸರ್ಕಾರಿ ಆಸ್ತಿ ಕದಿಯುವಷ್ಟು ಹಸಿವಾಯಿತು ಎಂಬುದೇ ಹೊಸ ವಿದ್ಯಮಾನ.

ಚಂದ್ರಗುತ್ತಿಯ ಬೆತ್ತಲೆ ಸೇವೆ ಪರ ಇದ್ದ

ಈ ಕೃಷ್ಣಭಟ್ಟ ಶಿವಮೊಗ್ಗದವನು. ಮೀಸೆ ಮೂಡುವ ಮೊದಲೇ RSS ಸೋಂಕು ತಗುಲಿಸಿಕೊಂಡ ಕಾರಣ ಹಾಗೂ ಪುರೋಹಿತಶಾಹಿ ಕಷಾಯ ಅರೆದು ಕುಡಿದಿದ್ದರಿಂದ ಕಳೆದ ನಾಲ್ಕು ದಶಕಗಳಿಂದಲೂ ಹಿಂದೂ ಧರ್ಮದ ಉದ್ಧಾರಕ್ಕಾಗಿ ಶಾಂತಿಭಂಗದ ಕೆಲಸ ಮಾಡಿಕೊಂಡೇ ಬಂದಿದ್ದಾನೆ. ಇವನೆಂಥ ಗುಳ್ಳೇನರಿ ಎಂಬುದು ಬಯಲಾಗಿದ್ದು ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆಯೆಂಬ ಘನತೆಹೀನ ಆಚರಣೆಯ ವಿವಾದದ ಪ್ರಕರಣದಲ್ಲಿ.

ಆಗ ದಲಿತ ಸಂಘರ್ಷ ಸಮಿತಿಯ ನಾಯಕರಾಗಿದ್ದ ಪ್ರೊ. ಬಿ. ಕೃಷ್ಣಪ್ಪನವರು ತಮ್ಮ ಅನೇಕ ಗೆಳೆಯರು ಹಾಗೂ ಕಾರ್ಯಕರ್ತರೊಂದಿಗೆ ಮಾಡಿಬಿಟ್ಟರು. ಬೆತ್ತಲೆಸೇವೆಗೆ ಬಂದಿದ್ದ ಭಕ್ತರಿಗೆ ಚಪ್ಪಲ್ಲ-ಹೊದಿಕೆ ವಿತರಿಸಿ ಹುರಿದುಂಬಿಸಿದ್ದರು. ಈ ಕೃಷ್ಣಭಟ್ಟನ ತರ್ಕ ವಿಚಿತ್ರವಾದ "ಭಕ್ತರು ತಮ್ಮ ನಂಬಿಕೆ ಆಚರಿಸಿದರೆ ತಪ್ಪೇನು" ಎಂಬುದಾಗಿತ್ತು, 1986 ರ ಮಾರ್ಚ್ 20 ರ ಆ ಕರಾಳ ದಿನ RSS ನವರಿಂದ ದಲಿತ ನಾಯಕ ಪ್ರೊ.ಬಿ. ಕೃಷ್ಣ ಕೊಲೆಯಾಗುವುದು ಸ್ವಲ್ಪದರಲ್ಲಿ ತಪ್ಪಿತು. ನಾಟಕ್ಕು ಪೊಲೀಸರಿದ್ದರೂ ಕೂಡಾ ಪ್ರಗತಿಪರರು "ದೇವಿಗೆ ಅಪಮಾನ ಮಾಡುತ್ತಿದ್ದಾರೆಂದು" ನೆರೆದಿದ್ದ 20 ಸಾವಿರದಷ್ಟು ಭಕ್ತರನ್ನು ಪ್ರಚೋದಿಸಿದ್ದರು. ಮೊದಲೇ ಮೂಢನಂಬಿಕೆ ಕಂದಾಚಾರಗಳಲ್ಲಿ ಹೂತುಹೋಗಿದ್ದ ರೇಣುಕಾಂಬ ಭಕ್ತರು ವಿಕಾರಿ ಆಕ್ರೋಶದ ದೊಂಬಿ ನಡೆಸಿಬಿಟ್ಟರು. ಇವರೊಂದಿಗೆ ವಿಶ್ವಹಿಂದೂ ಪರಿಷತ್ತಿನ ವಿಮರ್ಶಕಗಳೂ ಕೈಜೋಡಿಸಿದ್ದರು. ಈ ದೊಂಬಿಯಲ್ಲಿ ಅವತ್ತು ಪೊಲೀಸ್ ಅಧಿಕಾರಿ ರಾಮಚಂದ್ರಪ್ಪ, ಮಹಿಳಾ ಪೊಲೀಸ್ ಪೇದೆಯೊಬ್ಬಳಿಗೆ ಹೊಡೆದು ಬಟ್ಟೆ ಹರಿದು ಬಲವಂತವಾಗಿ ಬೆತ್ತಲೆಸೇವೆ ಮಾಡಿಸಲಾಗಿತ್ತು, ನಂತರ ಗಲಭೆ ನಿಯಂತ್ರಿಸಲು ಟಿಯರ್ ಗ್ಯಾಸ್, ಲಾಠಿ ಚಾರ್ಜ್ ಎಲ್ಲಾ ನಡೆಯಿತು. ಕೊನೆಗೆ ಸರ್ಕಾರ ಈ ಬಗ್ಗೆ ವಿಚಾರಣೆ ನಡೆಸಲು ಚಿಕ್ಕಮಗಳೂರಿನ ಜಿಲ್ಲಾ ನ್ಯಾಯಾಧೀಶರಾಗಿದ್ದ ಚನ್ನವೀರಪ್ಪನವರನ್ನು ಏಕಸದಸ್ಯ ಆಯೋಗವಾಗಿ ನೇಮಿಸಿತ್ತು.

ಈ ಕೃಷ್ಣಭಟ್ಟ ಆಯೋಗದೆದಿರು ಸಾಕ್ಷ್ಯ ಹೇಳಲು ಬಂದವನು ಏನಂತ ಬೊಗಳಿದ್ದ ಗೊತ್ತೆ?

"ನಾನು ರತಿ ವಿಜ್ಞಾನ ಪತ್ರಿಕೆಯ ಫೋಟೋಗ್ರಾಫರ್ ಆಗಿ ಅಲ್ಲಿಗೆ ಹೋಗಿದ್ದೆ" ಅಂತ!

ಈ ವಿಚಾರಣೆ ಕೊನೆಗೊಂಡಾಗ ನ್ಯಾಯಾಧೀಶ ಚನ್ನವೀರಪ್ಪ "ಈ ದೊಂಬಿಗೆ ವಿಶ್ವಹಿಂದೂ ಪರಿಷತ್ ಹೊಣೆಯಲ್ಲ, ಬದಲಾಗಿ ಬೆತ್ತಲೆ ಸೇವೆ ತಡೆಯಲು ಹೋಗಿದ್ದ ದಲಿತ ಸಂಘರ್ಷ ಸಮಿತಿಯವರದ್ದೇ ತಪ್ಪು" ಎಂಬ ವರದಿ ನೀಡಿದ್ದರು! ಅವತ್ತು ದಲಿತ ಮಹಿಳೆಯರು ಬೆತ್ತಲೆ ಸೇವೆ ನಡೆಸುವುದು ಹಿಂದೂ ಸಂಸ್ಕೃತಿಯ ಭಾಗ ಎಂದು ಪ್ರತಿಪಾದಿಸಿದ್ದ ಕೃಷ್ಣಭಟ್ಟನೇ ಮುಂದೆ ರಾಜ್ಯದ ಮುಖ್ಯಮಂತ್ರಿ ಯಡ್ಡಿ ಮತ್ತವರ ಚೆಡ್ಡಿ ಬಳಗಕ್ಕೆ ರಾಜಗುರುವಾಗಿ ಬೆಳೆದ.

ಬೆತ್ತಲೆ ಸೇವೆ ಕುಖ್ಯಾತಿಯ ರತಿ ವಿಜ್ಞಾನಿಗೆ ಯಡ್ಡಿ ಸೈಟು ಕೊಟ್ಟರು!



ಪೋಲಂಕಿ ಮೇಲೆ ಹಲ್ಲೆ ಮಾಡಿಸಿದ


ಶಿವಮೊಗ್ಗದ ಡಿವಿಎಸ್ ಕಾಲೇಜಿನಲ್ಲಿ ಸೋಷಿಯಾಲಜಿ ಉಪನ್ಯಾಸಕನಾಗಿದ್ದ ಕೃಷ್ಣಭಟ್ಟ ವಿವಾದಿತ 'ಸೀತಾಯಣ' ಪುಸ್ತಕ ಬರೆದ ಪೋಲಂಕಿ ರಾಮಮೂರ್ತಿಯವರ ಮೇಲೂ ಹಲ್ಲೆ ಮಾಡಿಸಿದ್ದ. ಈ ಪುಸ್ತಕವನ್ನೂ ಮೊದಲು ಪ್ರಕಟಿಸಿದ್ದು ಶಿವಮೊಗ್ಗದ ಪಿ.ಎಸ್. ನಂಜುಂಡಯ್ಯನವರು. ಪೋಲಂಕಿ ಒಮ್ಮೆ ಶಿವಮೊಗ್ಗದ ಕಮಲಾ ನೆಹರು ಕಾಲೇಜಿಗೆ ಭಾಷಣ ಮಾಡಲು ಬಂದಾಗ RSS ಹುಡುಗರನ್ನು ಛೂಬಿಟ್ಟು ಹಲ್ಲೆ ಮಾಡಿಸಿದ್ದ ಕೃಷ್ಣಭಟ್ಟ. ಆಮೇಲೆ ಇವನಿಗೆ ಕುವೆಂಪು ವಿ.ವಿ.ಗೆ ಸೆನೆಟ್ ಮೆಂಬರ್‌ಗಿರಿಯೂ ಸಿಕ್ಕಿತು. ಭಟ್ಟ ವೈಯಕ್ತಿಕವಾಗಿ ಭ್ರಷ್ಟನಾಗಿರಲಿಲ್ಲ, ಆದರೆ ಸೆನೆಟ್ ಮೆಂಬರ್‌ಗಿರಿ ಬಳಸಿಕೊಂಡು ಅಲ್ಲೂ ಹಿಂದೂ ಧರ್ಮ ಉದ್ಧಾರ ಮಾಡುವ ದುಷ್ಟ ಕೆಲಸ ಮುಂದುವರೆಸಿದ. ಈ ಪ್ರಕ್ರಿಯೆಯಲ್ಲಿ ಅವನಿಗೆ ಶಿಕ್ಷಣತಜ್ಞನೆಂಬ ಬಿರುದೂ ಸಿಕ್ಕಿಬಿಟ್ಟಿತು. ನಂತರ ಕೇಂದ್ರದಲ್ಲಿ ಬಿಜೆಪಿಗಳ ಎನ್‌ಡಿಎ ಸರ್ಕಾರ ಬಂದಾಗ ಇಂದಿರಾಗಾಂಧಿ ನ್ಯಾಷನಲ್ ಸೆಂಟರ್ ಫಾರ್ ಆರ್ಟ್ಸ್ (IGNCA) ನ ಸದಸ್ಯನೂ ಆದ. ಅಲ್ಲೊಮ್ಮೆ ಕಳ್ಳ ಲೆಕ್ಕ ತೋರಿಸಿ ಟಿಎ-ಡಿಎ ನುಂಗಿದನೆಂಬ ಹಗರಣವೂ ನಡೆಯಿತೆಂಬ ಸುದ್ದಿ ಇದೆ. ಇನ್ನೊಮ್ಮೆ ಕುವೆಂಪು ಯುನಿವರ್ಸಿಟಿಯ ಇತಿಹಾಸ ವಿಭಾಗದವರು ಸಕ್ಸಲ್ ನಾಯಕ ಸಾಕೇತ್ ಬರೆದ Making history ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಓದಿಸುತ್ತಿದ್ದಾರೆಂದು ಸುಮ್ಮನೆ ಗುಲ್ಲೆಬ್ಬಿಸಿ ವೈಸ್‌ಚಾನ್ಸಲರ್‌ಗೆ ದೂರು ಕೊಟ್ಟಿದ್ದ. ಶಿವಮೊಗ್ಗದಲ್ಲಿ ಇವೆಲ್ಲಾ ಚಿಲ್ಲರೆ ಕೆಲಸ ಮುಗಿಸಿ ಈಗೊಂದು ಮೂರು ವರ್ಷಗಳ ಹಿಂದೆ ಕೃಷ್ಣಭಟ್ಟನ ಪಾದ ಬೆಂಗಳೂರಿಗೆ ಆಗಮಿಸಿತು. ಇಲ್ಲಿನ RSS ನಾಯಕರು ಕೂಡಲೇ ಭಟ್ಟನ ನೇತೃತ್ವದಲ್ಲಿ 'ವಿದ್ಯಾಪಥ' ಎಂಬ ಖಾಸಗಿ ಸಂಸ್ಥೆ ಶುರು ಮಾಡಿದರು. ಇದು ವಿದ್ಯಾರ್ಥಿ ಶಿಕ್ಷಣ ಸೇವಾ ಟ್ರಸ್ಟ್ ಎಂಬ ಸಂಘ ಪರಿವಾರದ ಎನ್‌ಜಿಓದ ಅಂಗಸಂಸ್ಥೆಯಾಗಿದೆ.

ಕೃಷ್ಣಭಟ್ಟ ಕರ್ನಾಟಕದ ಹಿಂದೂತ್ವವಾದಿ ನಾಯಕರ ಪೈಕಿ ಹಿರಿಯ. ಹುಡುಗನಾಗಿದ್ದಾಗ ಎಬಿವಿಪಿ ಸೇರಿ ಹಿಂದೂ ಧರ್ಮ ಕಾಪಾಡಿದವನು. ಬೆತ್ತಲೆ ಸೇವೆಯಂಥ ಹಿಂದೂ ಸಂಸ್ಕೃತಿಯ ರಕ್ಷಣೆಗಾಗಿ ಹೋರಾಡಿದ ಮಹಾನ್ ನಾಯಕ. ಇಂತಹ ಚೆಲ್ರೆಗಳಿಗೆ ಯಡಿಯೂರಪ್ಪ ಕೋಟ್ಯಂತರ ಬೆಲೆಯ ಬಿಡಿಎ ಸೈಟು ಕೊಟ್ಟು ತನ್ನ ಅಯೋಗ್ಯತೆ ಎಷ್ಟೆಂದು ತೋರಿಸಿಕೊಂಡಂತಾಗಿದೆ.

...ಷ್ಟು ಹೇಳಿದ ಮೇಲೆ ಈ ಕೃಷ್ಣಭಟ್ಟನ ಹಿನ್ನೆಲೆ ಏನೆಂಬುದು ನಿಮಗೂ ...ಗಿರಬೇಕು....

...ದು, ಇದೊಂದು ಆರ್‌ಎಸ್‌ಎಸ್ ಎಲಿಮೆಂಟು. ಹುಟ್ಟಿದಾಗಿನಿಂದ ...ವರೆಗೂ ಬ್ರಾಹ್ಮಣಶಾಹಿ ಹಿಂದೂತ್ವದ ವಿಷವನ್ನೇ ಉಸಿರಾಡುತ್ತಾ, ... ವಿಷಗಾಳಿಯನ್ನು ಕನ್ನಡ ಸಮಾಜಕ್ಕೂ ಹಬ್ಬಿಸುತ್ತಾ ಬಂದಿರುವ ...ಸುಭಾವನೀತ.

...ಮುಖ್ಯಮಂತ್ರಿ ಯಡ್ಡಿಯಿಂದ ಈಗ ಬಿಡಿಎ ಸೈಟು ಗಿಟ್ಟಿಸಿರುವ ...ಭವಿಗಳಲ್ಲಿ ಬಡವರೆನ್ನಿಸಿಕೊಂಡವರ್‍ಯಾರೂ ಇಲ್ಲ. ಬೆಂಗಳೂರಿನ ...ಎಸ್‌ಆರ್ ಲೇಔಟ್, ಕೋರಮಂಗಲ, ಬಿಟಿಎಂ ಲೇಔಟ್, ಬನಶಂಕರಿ ...ದೆಡೆ 50x80 ಅಡಿ ಸೈಟುಗಳ ಬೆಲೆ ಇವತ್ತಿನ ರಿಸಷನ್‌ನಲ್ಲೂ 1 ...ಗೂ ಜಾಸ್ತಿ ಇದೆ. ಆದರೆ ಇವರೆಲ್ಲಾ ತಲಾ 6 ರಿಂದ 10 ಲಕ್ಷ ...ಮ ಮಾತ್ರ ಕೊಟ್ಟು ಬಿಡಿಎ ಸೈಟು ಕಬಳಿಸುತ್ತಿದ್ದಾರೆ. ಇವರಲ್ಲಿ ...ೇಕರು ಬಿಜೆಪಿ ರಾಜಕಾರಣಿಗಳೇ ಇದ್ದಾರೆ. ಮೊನ್ನಿನ ಸಂಸತ್



...ಬೆತ್ತಲೆ ಸೇವೆಯ ಭಕ್ತರನ್ನು ದೈಹಿಕವಾಗಿ ತಡೆದು ನಿಲ್ಲಿಸಲು ಹೋದ ಬಗ್ಗೆ ... ನಾಗೇಂದ್ರ ಸಾಗರ. ಪಿ.ವಿ. ಕೃಷ್ಣಭಟ್ಟ, ಜಿ. ಹನುಮಂತಪ್ಪ, ಕೃಷ್ಣಮೂರ್ತಿ ... ದೊಡ್ಡೇರಪ್ಪ, ಶಿವನಾಗಪ್ಪ ... ಇವರ ಹೇಳಿಕೆ ಮತ್ತು ಪಾರ್ಟಿ ಸವಾಲುಗಳು ... ನಾಗೇಂದ್ರಸಾಗರ ಇವರು ಹೊಸ ದಿಗಂತ ಪತ್ರಿಕೆಯ ವರದಿಗಾರರು ... ತಮ್ಮ ಹೇಳಿಕೆಯ ಒಂದನೇ ಪ್ಯಾರದಲ್ಲಿ ಸಂಘರ್ಷ ಸಮಿತಿಯವರ ಸಂಘರ್ಷ ... ಭಕ್ತಾದಿಗಳನ್ನು ಕೆರಳಿಸಿ ಹಠಮಾರಿತನವನ್ನು ಬೆಳೆಸಿದ್ದಲ್ಲದೆ, ಕ್ರಮೇಣ ಅಲ್ಲಿನ ಪರಿಸ್ಥಿತಿ ... ಕೈಗೊಂಡಿತು ಎಂದಿದ್ದಾರೆ. ಇವರು ತಮ್ಮ ಹೇಳಿಕೆಯ ಪ್ಯಾರ 8ರಲ್ಲಿ ಈ ಘಟನೆ ಬಗ್ಗೆ ... ದಲಿತ ಸಂಘರ್ಷ ಸಮಿತಿಯವರ ದೋರಣೆ ವಿನಾಕಾರಣ ಭಕ್ತಾದಿಗಳನ್ನು ...

... ಪಿ.ವಿ. ಕೃಷ್ಣಭಟ್ಟ ಇವರು ಆಯೋಗದ ಮುಂದೆ ಕೊಟ್ಟ ಹೇಳಿಕೆಯಲ್ಲಿ ಈ ಗಲಭೆ ...

ಈ ಬೆತ್ತಲೆ ಸೇವೆಯೆಂಬ ಅಮಾನವೀಯ ಆಚರಣೆ ನಿಲ್ಲಿಸುವಂತೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದರು. 1982 ರಿಂದ 86 ರವರೆಗೂ ಈ ಸಾಮಾಜಿಕ ಕೆಲಸ ನಡೆದಿತ್ತು. ಕೊನೆಗೆ 1986 ರ ಮಾರ್ಚ್‌ನಲ್ಲಿ ಚಂದ್ರಗುತ್ತಿಯ ರೇಣುಕಾಂಬ ಜಾತ್ರೆ ಮತ್ತೆ ಏರ್ಪಟ್ಟಾಗ ಡಿಎಸ್‌ಎಸ್ ಪೊಲೀಸ್ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳೆಲ್ಲಾ ಒಟ್ಟಾಗಿ ಸೇರಿ ಬೆತ್ತಲೆಸೇವೆ ನಿಲ್ಲಿಸುವ ಪ್ರಯತ್ನ ಮಾಡಲು ತೀರ್ಮಾನಿಸಿದ್ದರು. ಶಿವಮೊಗ್ಗ, ಚಿತ್ರದುರ್ಗ, ಧಾರವಾಡ ಸೀಮೆಯ ಮುಖ್ಯವಾಗಿ ದಲಿತ ಹಾಗೂ ಇನ್ನಿತರ ಹಿಂದುಳಿದ ಜಾತಿಗಳ ಮಹಿಳೆಯರು ಈ ಜಾತ್ರೆಗೆ ಒಂದು ದೇವಿಗೆ ಬೆತ್ತಲೆಸೇವೆ ನಡೆಸುತ್ತಿದ್ದರು. ಚಂದ್ರಗುತ್ತಿಯ ವರದಾ ನದಿಯಲ್ಲಿ ಮುಳುಗೆದ್ದು ಮೈಮೇಲಿನ ಬಟ್ಟೆ ಕಳಚಿ ರೇಣುಕಾಂಬ ದೇವಾಲಯದವರೆಗೂ ಬರಿ ಬೆತ್ತಲೆಯಾಗಿ 'ಉಧೋ' ಎನ್ನುತ್ತಾ ನಡೆದುಕೊಂಡೂ ಅಥವಾ ಓಡುತ್ತಲೋ ಹೋಗುವುದೇ ಬೆತ್ತಲೆಸೇವೆಯಾಗಿತ್ತು. ಇದರೊಳಗಿನ ಧಾರ್ಮಿಕ ಶ್ರದ್ಧೆ ಎಷ್ಟೇ ಇದ್ದರೂ ಮಹಿಳೆಯರ ಘನತೆಗೆ ಕುಂದು ತರುವ, ಶೋಷಣೆಯ ಆಚರಣೆ ಇದಾಗಿತ್ತು. ಸಹಜವಾಗೇ ಸರ್ಕಾರ ಇದನ್ನು ನಿಲ್ಲಿಸಲು ಬಯಸಿತ್ತು. ದಲಿತ ಹೋರಾಟಗಾರರೂ ಜನರ ಮನ ಒಲಿಸಲು ಅಂದು ಅಲ್ಲಿಗೆ ಹೋಗಿದ್ದರು.

ಇವತ್ತಿನ ಬಿಡಿಎ ಸೈಟ್ ಫಲಾನುಭವಿ ಕೃಷ್ಣಭಟ್ಟನೂ ಅವತ್ತು ಅಲ್ಲಿದ್ದ. ಇವನೊಬ್ಬನೇ ಅಲ್ಲ ವಿಶ್ವಹಿಂದೂ ಪರಿಷತ್, RSS ನ ಅನೇಕರೂ ಅಲ್ಲಿ ಸೇರಿದ್ದರು. ಕಾಟಾಚಾರಕ್ಕೆ ತಾವೂ ಬೆತ್ತಲೆಸೇವೆಗೆ ವಿರುದ್ಧ ಇದ್ದೇವೆ ಎಂದು ಕರಪತ್ರ ಹಾಕಿಸಿದ್ದ ಈ ನೀಚರು ಆ ದಿನ ರೇಣುಕಾಂಬ ದೇವಿಭಕ್ತರನ್ನು ಪ್ರಚೋದಿಸಿ ದಲಿತ ನಾಯಕರು ಹಾಗೂ ಪೊಲೀಸರ ಮೇಲೂ ಹಲ್ಲೆ

● ವರದಿಗಾರ

ಬೆತ್ತಲೆ ಸೇವೆ ತನಿಖೆ: ಕೃಷ್ಣಭಟ್ಟನ ಸ್ಟೇಟ್‌ಮೆಂಟು

ನ್ಯಾಯಮೂರ್ತಿ ಚನ್ನವೀರಪ್ಪನವರ ಏಕಸದಸ್ಯ ಆಯೋಗವು ಚಂದ್ರಗುತ್ತಿ ಬೆತ್ತಲೆ ಸೇವೆ ದೊಂಬಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದಾಗ ಈ ಕೃಷ್ಣಭಟ್ಟನೂ ಹೇಳಿಕೆ ನೀಡಿದ್ದ.


ದಿನಾಂಕ 29.1.1987 ರಂದು 23ನೇ ಸಾಕ್ಷಿಯಾಗಿ ಅವತ್ತು ಭಟ್ಟ ಬೆತ್ತಲೆ ಸೇವೆ ಬಗ್ಗೆ ಏನಂದಿದ್ದ ಗೊತ್ತೆ? "ಬೆತ್ತಲೆ ಸೇವೆ ತಡೆಯಲು ಹೋದ ದಲಿತ ಸಂಘರ್ಷ ಸಮಿತಿಯ ದುಡುಕುತನ ಮತ್ತು ಮೂರ್ಖತನ ಹಾಗೂ ದಾಷ್ಟ್ಯತನ ಪೂರಕವಾಗಿತ್ತು" ಎಂದು.

ಇವನೆಂಥ ಮನೋರೋಗಿ ಎನ್ನಲು ಇನ್ನೇನು ಸಾಕ್ಷಿ ಬೇಕು?

ಇವನೊಂದಿಗೆ ಹೊಸ ದಿಗಂತ ಪತ್ರಿಕೆಯ ನಾಗೇಂದ್ರ ಸಾಗರನೂ ಇದ್ದ. ಮತ್ತವನ ಹೇಳಿಕೆಯೂ ಬೆತ್ತಲೆ ಸೇವೆ ಪರವಾಗಿಯೇ ಇತ್ತು.

ಈಗ ಯಡ್ಡಿಯ ಕೃಪಾಕಟಾಕ್ಷದಿಂದ ಬಿಡಿಎ ಸೈಟು ಗಿಟ್ಟಿಸಿರುವ ಕೃಷ್ಣಭಟ್ಟನೂ ಇದೇ ಕ್ಯಾಟಗರಿಯ ವ್ಯಕ್ತಿ.

ಈ ಹಿಂದೂ ಧರ್ಮ ರಕ್ಷಕರು ಎರಡು ನಾಲಿಗೆಯ ಜನ. ನಾವೆಲ್ಲಾ ಈಗ ನೋಡುತ್ತಿರುವಂತೆ ಮಹಿಳೆಯರು ಜೀನ್ಸ್ ಪ್ಯಾಂಟು ಹಾಕಬಾರದು ಪಬ್ಬಿಗೆ ಹೋಗಬಾರದು ಎಂದು ದೊಂಬಿ-ಹಲ್ಲೆ ಮಾಡುತ್ತಾರೆ. ಮತ್ತೊಂದು ಕಡೆ ಬೆತ್ತಲೆ ಸೇವೆ ನಡೆಯಲಿ. ಅದು ಹಿಂದೂ ಸಂಸ್ಕೃತಿಯ ಪ್ರತೀಕ ಅಂತಲೂ ಈ ಹಿಂದೆ ಗಲಭೆ ಮಾಡಿಸಿದ್ದಾರೆ.



ಶೌಚಾಲಯ ಉದ್ಘಾಟಿಸಿದ ಗೃಹ ಸಚಿವ!!

ಕರಾವಳಿ ನೆರೆಹಾವಳಿಯಿಂದ ತತ್ತರಿಸುವಾಗ, ಮೈಸೂರಿನಲ್ಲಿ ಗಲಭೆಗಳು ನಡೆಯುತ್ತಿದ್ದಾಗ ಈ 'ರೋಮ್ ದೊರೆ' ಪಿಟೀಲು ಬಾರಿಸುತ್ತಿದ್ದ!

ಈ 'ರೋಮ್ ದೊರೆ' ಇನ್ಯಾರಲ್ಲ, ಉಡುಪಿಯ ಮಹಾನ್ ನಾಯಕ, ಗೃಹ ಸಚಿವ ವಿ.ಎಸ್. ಆಚಾರ್ಯ...

ಜುಲೈ 11 ರಂದು ತನ್ನೂರು ಉಡುಪಿಯಲ್ಲಿ ಸಾರ್ವಜನಿಕ ಶೌಚಾಲಯವೊಂದನ್ನು ಆಚಾರ್ಯರು ಉದ್ಘಾಟಿಸಿದ್ದಾರೆ. ರಾಜ್ಯ ಕ್ಯಾಬಿನೆಟ್‌ನ ನಂಬರ್ ಟೂ ಸಚಿವ ಆಚಾರ್ಯ ಮುನ್ಸಿಪಾಲ್ಟಿಯ ವಾರ್ಡ್ ಮೆಂಬರು ಮಾಡಬಹುದಾದ ಕೆಲಸವನ್ನು ಮಾಡಲು ಬೆಂಗಳೂರಿನಿಂದ ಹೋಗಿದ್ದಾರೆಂದರೆ ಇವರ ಬಗ್ಗೆ ಏನನ್ನಬೇಕು?

ರಾಜ್ಯದ ಕಾನೂನು ಸುವ್ಯವಸ್ಥೆಯ ಬಗ್ಗೆ ಆಚಾರ್ಯ ತಲೆಕೆಡಿಸಿಕೊಳ್ಳಬೇಕು. ಗಲಭೆ, ಕೊಲೆ, ದರೋಡೆ ನಡೆಯದಂತೆ ಪೊಲೀಸರಿಗೆ ಎಚ್ಚರ ನೀಡಬೇಕು. ಅದನ್ನು ಮಾಡಲಾಗದ ಇವರು ಎಲ್ಲಾ ಬಿಟ್ಟು ಒಂದು ಪುಟ್ಟ ಟಾಯಲೆಟ್ ಉದ್ಘಾಟಿಸಲು ಹೋಗುತ್ತಾರೆ ಎಂದರೆ ಇವರು ವಿವೇಕಿಯೋ ಅವಿವೇಕಿಯೋ, ನೀವೇ ನಿರ್ಧರಿಸಿ.

ಇನ್ನೂ ತಮಾಷೆಯ ವಿಷಯ ಯಾವುದೆಂದರೆ, ಈ ಶೌಚಾಲಯದ ಉದ್ಘಾಟನೆಯನ್ನು ಆಚಾರ್ಯರು ಉತ್ಸಾಹದಿಂದ ಮಾಡಿದ್ದಾರಲ್ಲದೆ, ಅದನ್ನು ಪತ್ರಿಕೆಗಳು, ಟಿವಿ ಕ್ಯಾಮರಾಗಳೆದುರು ಮಾಡಿದ್ದಾರೆ. ಅವರು ಆ ಶೌಚಾಲಯದಿಂದ ಹೊರಬರುತ್ತಿರುವ ಫೋಟೋವನ್ನೇ ನೋಡಿ. ಹಿಂದೊಮ್ಮೆ, ಬೆಂಗಳೂರಿನಲ್ಲಿ ಒಂದು ಈಜು ಕೊಳವನ್ನು ಉದ್ಘಾಟಿಸಲು ಅಂದಿನ ಮುಖ್ಯಮಂತ್ರಿ ಗುಂಡೂರಾವ್ ಅವರು ಆ ಕೊಳಕ್ಕೇ ಹಾರಿ ಉದ್ಘಾಟಿಸಿದ್ದನ್ನು ನೆನಪಿಸುವುದಿಲ್ಲವೇ?!

ಇದೂ ಸಾಲದೆಂಬಂತೆ ಈ ಶೌಚಾಲಯದ ಉದ್ಘಾಟನೆಗೆ ಗೃಹ ಮಂತ್ರಿ ಜೊತೆ ಯಾರ್ಯಾರಿದ್ದರು ಗೊತ್ತ? ಉಡುಪಿ-ಚಿಕ್ಕಮಗಳೂರು ಸಂಸದನಾಗಿರುವ ಮತ್ತು ರಾಜ್ಯ ಬಿಜೆಪಿಯ ಅಧ್ಯಕ್ಷರಾಗಿರುವ ಹಲ್ಲುಕಿರಿ ಸದಾನಂದಗೌಡ. ಅಷ್ಟೇ ಅಲ್ಲದೆ ಈ ಕಾರ್ಯಕ್ರಮಕ್ಕೆ ಉಡುಪಿ ಶಾಸಕ ರಘುಪತಿ ಭಟ್ಟ ಕೂಡ ಬಂದಿದ್ದ. ಪತ್ನಿ ಪದ್ಮಪ್ರಿಯಾಳನ್ನು ಬಲಿ ತೆಗೆದುಕೊಂಡಾದ ಮೇಲೆ ಈ ಆಚಾರ್ಯ-ಭಟ್ಟ ಜೋಡಿ ಎಷ್ಟು ಕ್ಲೋಸ್ ಆಗಿದೆ ಎಂದರೆ ಇಂತಹ ಕಾರ್ಯಕ್ರಮಕ್ಕೂ ಜೊತೆಜೊತೆಯಾಗಿ ಬರುತ್ತಾರೆ!

ಗೃಹ ಸಚಿವರಿಗ್ಯಾಕೆ ಈ ರಿಬ್ಬನ್ ಕಟ್ ಮಾಡುವ ಹುಚ್ಚು? ಗೃಹ ಸಚಿವರಿಗೆ ಕೆಲಸವೇ ಇಲ್ಲವೆ?

ಹೌದು, ಈ ರಬ್ಬರ್ ಸ್ಟ್ಯಾಂಪ್ ಸಚಿವರಿಗೆ ಕೆಲಸವೇ ಇಲ್ಲದಂತಾಗಿದೆ. ಯಾಕೆಂದರೆ ಪೊಲೀಸ್ ಇಲಾಖೆಯ ಉನ್ನತ ಮಟ್ಟದ ನಿರ್ಧಾರಗಳನ್ನೆಲ್ಲ ನಿಯಂತ್ರಿಸುವುದು ಯಡ್ಡಿಯ ಎಡವಟ್ಟು ಪುತ್ರ ವಿಜಯೇಂದ್ರ. ಇದರಿಂದಾಗಿ ನಿರುದ್ಯೋಗಿಯಂತಾಗಿರುವ ಆಚಾರ್ಯ ಉಡುಪಿಯಲ್ಲಿ ಕಂಡಕಂಡ ಕಡೆ ಕತ್ತರಿ ಹಿಡಿದು ತಿರುಗುತ್ತಿದ್ದಾರೆ. ಬ್ರಹ್ಮಕಲಶಕ್ಕೆ ಕರೆದರೂ ಬರುತ್ತಾರೆ, ಯಾವುದೋ ಗುಡಿಯ ಜೀರ್ಣೋದ್ಧಾರದ ಕೆಲಸದ ಉದ್ಘಾಟನೆಗೂ ಹೋಗುತ್ತಾರೆ, ಯಾವುದೋ ಸಂಘದವರು ಶಾಲಾಮಕ್ಕಳಿಗೆ ಪುಸ್ತಕ ವಿತರಣೆ ಮಾಡಿದರೂ ಅಲ್ಲಿಯೂ ಆಚಾರ್ಯ ಹಾಜರ್. ಉಡುಪಿಯಲ್ಲೀಗ ಯಾವುದೇ ಪೂಜೆ, ಸಭೆ, ಕೊನೆಗೆ ಶೌಚಾಲಯದ ಉದ್ಘಾಟನೆಗೂ ಆಚಾರ್ಯರೇ ಚೀಫ್ ಅಲ್ಲಲ್ಲ ಚೀಫ್ ಗೆಸ್ಟ್!

ಹೀಗೆ ಸಚಿವಗಿರಿ ಇದ್ದರೂ ಕೆಲಸವಿಲ್ಲದ ಆಚಾರ್ಯರು ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳದ ಪುಂಡ ಕಾರ್ಯಕರ್ತರನ್ನು ಸಂತೃಪ್ತಿಗೊಳಿಸುವ ಕೆಲಸಗಳಲ್ಲೇ ಮುಳುಗಿದ್ದಾರೆ. ಪುದಿ ಕಾನ್‌ಸ್ಟೇಬಲ್‌ಗಳನ್ನು ವರ್ಗಾ ಮಾಡಿಸುತ್ತಾರೆ. ಇತ್ತೀಚೆಗಷ್ಟೇ ಉಡುಪಿ ಬಿಜೆಪಿಯ ಸ್ಥಳೀಯ ಮುಖಂಡನೊಬ್ಬ ಅಪರಾತ್ರಿ ಫುಲ್ ಟೈಟಾಗಿ ರಸ್ತೆ ತುಂಬಾ ಯಕ್ಷಗಾನ ಮಾಡುತ್ತ ಕೇಕೆ ಹಾಕುತ್ತಾ ಬರುತ್ತಿದ್ದ. ಆತನನ್ನು ಪ್ರಶ್ನಿಸಿದ ಮೂವರು ಪೊಲೀಸರಿಗೇ ದಬಾಯಿಸಲು ಹೋದ. ಕುಡಿದು ಯಕ್ಷಗಾನ ಮಾಡ್ತೀಯಾ, ಬಾ ಕಥಕ್ಕಳಿ ಕಲಿಸ್ತೀವಿ ಎಂದು ಟೌನ್ ಸ್ಟೇಷನ್‌ಗೆ ಒಯ್ದು ಒಂದು ಪೆಟ್ಟಕೇಸ್ ಜಡಿದರು. ಸಿಟ್ಟಿಗೆದ್ದ ಕುಡುಕ ಕಾರ್ಯಕರ್ತ ಆಚಾರ್ಯರಿಗೆ ಚಾಡಿ ಹೇಳಿದ. ತಮ್ಮ ಪವರ್ ತೋರಿಸಲು ಇದೇ ಅವಕಾಶ ಎಂದು ಆಚಾರ್ಯ ಆ ಮೂವರು ಪೊಲೀಸರನ್ನು ನಕ್ಸಲ್ ಏರಿಯಾಕ್ಕೆ ಎತ್ತಂಗಡಿ ಮಾಡಿಸಿದರು.

ಬರೀ ಇಂತಹ ಗಿಮಿಕ್‌ಗಳಲ್ಲೇ ಮುಳುಗಿರುವ ಆಚಾರ್ಯರಿಗೆ ಮೈಸೂರಲ್ಲಿ ಗಲಭೆಯಾದರೂ ಎಚ್ಚರವಾಗುವುದಿಲ್ಲ, ಕರಾವಳಿ ತುಂಬಾ ಚಿಕೂನ್ ಗುನ್ಯಾದ ಚೀತ್ಕಾರವಿದ್ದರೂ ಅದು ಅವರ ಕಿವಿಗೆ ಬೀಳುವುದಿಲ್ಲ, ರೈತರ ಮೇಲೆ ಸುಮ್ಮಸುಮ್ಮನೆ ಗೋಲಿಬಾರ್ ನಡೆದರೂ ಅಲುಗಾಡಲ್ಲ, ನೆರೆಹಾವಳಿಯಿಂದ ಹನ್ನೆರಡು ಜನ ಸತ್ತು, ಸಾವಿರಾರು ಕುಟುಂಬಗಳು ನಿರಾಶ್ರಿತರಾಗಿ, ಕೋಟ್ಯಂತರ ನಷ್ಟವಾದರೂ ಆಚಾರ್ಯ ಮಾತ್ರ ಉದ್ಘಾಟನೆ, ಸಮಾರೋಪ, ಮುಂಜಿ, ತಿಥಿಗಳಲ್ಲಿ ಮುಳುಗಿರುತ್ತಾರೆ. ನೆರೆ ಸಂತ್ರಸ್ತರಿಗೆ ಪರಿಹಾರ ರೂಪಿಸುವುದಿರಲಿ, ಮೊನ್ನೆ ಹೋಗಿ ಸ್ವರ್ಣಾ ನದಿಗೆ ಬಾಗೀನ ಅರ್ಪಿಸಿ ಬಂದಿದ್ದಾರೆ!

ಈ ರಾಜ್ಯ ಉದ್ಧಾರವಾಗುವುದಾದರೂ ಹೇಗೆ?

ಕತೆಗಾರ ಕಟ್ಪಾಡಿಗೆ ಕೊಕ್ ಬ್ಯಾರಿ ಅಕಾಡೆಮಿಯಲ್ಲೂ ಕಮಲದ 'ಕೈ'

ಸಂಸ್ಕೃತಿ, ಶಿಷ್ಟಾಚಾರ ಒಂದೂ ಇಲ್ಲದ ಕೋಮುವಿಷದ ಸರ್ಕಾರವಿದ್ದರೆ ಏನೇನೆಲ್ಲ ಆಗುತ್ತದೆ ನೋಡಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಾದ ಕೆಲಸವನ್ನು ಬಂದರು, ಒಳನಾಡು ಜಲಸಾರಿಗೆಯ ಮಂತ್ರಿ ಮಾಡುತ್ತಾರೆ. ಅವನಷ್ಟೇ ಮೂರ್ಖನಾಗಿರುವ ಮುಖ್ಯಮಂತ್ರಿ ಸಂಸ್ಕೃತಿ ಇಲಾಖೆಯ ಶಿಫಾರಸ್ಸನ್ನೇ ಕಸದಬುಟ್ಟಿಗೆ ಎಸೆದು, ಬಂದರು ಸಚಿವರ ಶಿಫಾರಸ್ಸಿಗೆ ಜೈ ಅಂತಾನೆ, ರಾತ್ರೋರಾತ್ರಿ ಆದೇಶ ಹೊರಡಿಸಿ ತನ್ನ ಸಚಿವನನ್ನು ಸಂತೃಪ್ತಗೊಳಿಸುತ್ತಾರೆ.

ಆಪರೇಷನ್ ಕಮಲದ ಮೂಲಕ ಎಲ್ಲ ಕಡೆ ಗಬ್ಬುನಾತ ಎಬ್ಬಿಸಿರುವ ಬಿಜೆಪಿಯೀಗ ಆ ದುರ್ನಾತವನ್ನು ಸಾಹಿತ್ಯ ಅಕಾಡೆಮಿಗಳಿಗೂ ಹರಡಿಬಿಟ್ಟಿದೆ. ಅದಕ್ಕೆ ಉದಾಹರಣೆಯಾಗಿ ನಮ್ಮ ಮುಂದೀಗ ಬ್ಯಾರಿ ಸಾಹಿತ್ಯ ಅಕಾಡೆಮಿಯಿದೆ. ಮೊದಲಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಿಫಾರಸ್ಸಿನಂತೆ ಬ್ಯಾರಿ ಅಕಾಡೆಮಿಗೆ ಸೂಕ್ಷ್ಮ ಸಂವೇದನೆಗಳ ಕತೆಗಾರ ಫಕೀರ್ ಮಹಮ್ಮದ್ ಕಟ್ಪಾಡಿಯವರನ್ನು ನೇಮಿಸಲಾಗಿತ್ತು. ಅದು ಅನೌನ್ಸೂ ಆಗಿತ್ತು. ಆದರೀಗ ಮಂಗಳೂರಿನ ಭೂಗಳ್ಳ ಸಚಿವ ಕೃಷ್ಣ ಪಾಲೆಮಾರ್ ಬಯಕೆಯಂತೆ ಕಟ್ಪಾಡಿಯವರಿಗೆ ಕೊಕ್ ಕೊಟ್ಟು, ಅಬ್ದುಲ್ ರೆಹಮಾನ್ ಎಂಬಾತನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. 'ನೀವು ಯಾವ ಸಾಹಿತ್ಯ ರಚಿಸಿದ್ದೀರಿ ರೆಹಮಾನ್ ಸಾಬ್' ಎಂದು ಕೇಳಿದರೆ ಈ ಮನುಷ್ಯ ಏನು ಹೇಳ್ತಾನೆ ಗೊತ್ತೆ? 'ಅಂಗಣೆ ಚೊನ್ನೆ ಎಂಥ್ಯ'? (ಹಂಗಂದ್ರೇನು?) ಎಂದು ಬಿಡುತ್ತಾನೆ!

ಬ್ಯಾರಿ ಜನಾಂಗದ ಬದುಕಿನ ವಿವರಗಳನ್ನೊಳಗೊಂಡ ಅತ್ಯುತ್ತಮ ಕತೆಗಳನ್ನು ಬರೆದಿರುವ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ವಿಜೇತ ಫಕೀರ್ ಕಟ್ಪಾಡಿಯವರಿಗೆ ಈ ಚೆಡ್ಡಿ ಸರ್ಕಾರ ಈ ರೀತಿಯಾಗಿ ಅವಮಾನ ಮಾಡಿದೆ. ಕಟ್ಪಾಡಿಯವರೇನೂ ಈ ಮುಠ್ಠಾಳ ಸರ್ಕಾರಕ್ಕೆ, ಬ್ಯಾರಿ ಅಕಾಡೆಮಿಗೆ ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ಕೇಳಿರಲಿಲ್ಲ, ಅವರ ಅರ್ಹತೆ ಆಧರಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ಹೆಸರನ್ನು ಶಿಫಾರಸ್ಸು ಮಾಡಿತ್ತು, ಮುಖ್ಯಮಂತ್ರಿ ಯಡ್ಡಿಯೇ ಅದಕ್ಕೆ ಒಪ್ಪಿ ಸಹಿ ಮಾಡಿದ್ದರು. ಆ ಕುರಿತ ಆದೇಶವೂ ಹೊರಬಿದ್ದಿತ್ತು, ಅಷ್ಟರೊಳಗೆ ಸಚಿವ ಕೃಷ್ಣ ಪಾಲೇಮಾರ್‌ನ ಕಿತಾಪತಿ ಶುರುವಾಗಿತ್ತು, ಕೆಲ ಬಿಜೆಪಿ ಬ್ಯಾರಿಗಳು ಕಟ್ಪಾಡಿ ಅವರ ವಿರುದ್ಧ ಒಳಗೊಳಗೆ ಮಸಲತ್ತು ಮಾಡಿದರು. ಕಾಂಗ್ರೆಸ್‌ನಲ್ಲಿದ್ದ ರೆಹಮಾನ್ ಪಾಲೇಮಾರ್ ಜೊತೆ ಕೈಗೂಡಿಸಿದ, ಬ್ಯಾರಿ ಅಕಾಡೆಮಿಯ ಅಧ್ಯಕ್ಷತೆಯನ್ನು ಖಾತ್ರಿ ಮಾಡಿಕೊಂಡ.

ಜನವರಿ 2 ರಂದು ಪಾಲೇಮಾರ್ ಮುಖ್ಯಮಂತ್ರಿ ಯಡ್ಡಿಗೆ ಒಂದು ಪತ್ರ ಬರೆದು, ಬ್ಯಾರಿ ಅಕಾಡೆಮಿಗೆ ಈಗ ನೇಮಿಸಿರುವ ಕಟ್ಪಾಡಿಯನ್ನು ತೆಗೆದು ಅಬ್ದುಲ್ ರೆಹಮಾನ್‌ನನ್ನು ನೇಮಿಸಿ ಎನ್ನುತ್ತಾರೆ. ಜೊತೆಗೆ ಇನ್ನು ನಾಲ್ವರ ಹೆಸರು ಸೇರಿಸಿ ಅವರನ್ನು ಸದಸ್ಯರನ್ನಾಗಿ ಮಾಡಿ ಎನ್ನುತ್ತಾರೆ. ಪಾಲೇಮಾರ್‌ಗೆ ಹೀಗೆ ಶಿಫಾರಸ್ಸು ಮಾಡುವ ಅಧಿಕಾರವಿದೆಯೇ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ನಿರ್ಲಕ್ಷಿಸಿ ಸಚಿವನೇ ನೇರ ನೇಮಕಾತಿಗೆ ಇಳಿದಿದ್ದು ಹೇಗೆ? ಮುಖ್ಯಮಂತ್ರಿ ಯಡ್ಡಿಗೆ ನೀತಿನಿಯಮಾವಳಿಗಳ ಪರಿಜ್ಞಾನವೇ ಇಲ್ಲ, ಇದ್ದರೂ ಅವಕ್ಕೆ ಈತ ಕೇರ್ ಮಾಡುವುದಿಲ್ಲ, ಇಲ್ಲಿ ಯಡ್ಡಿ ಎಷ್ಟು ಆತುರಾತುರದಿಂದ ಕಟ್ಪಾಡಿಯವರ ನೇಮಕಾತಿಗೆ ತಡೆಹಿಡಿಯುತ್ತಾರೆ ನೋಡಿ. ಪಾಲೇಮಾರ್ ಪತ್ರ ಕೊಟ್ಟ ಮರುದಿನವೇ ಅಂದರೆ ಜನವರಿ 3 ರಂದು ಆದೇಶ ಹೊರಡಿಸಿ ಅಬ್ದುಲ್ ರೆಹಮಾನ್‌ನನ್ನು ಬ್ಯಾರಿ ಅಕಾಡೆಮಿಯ ಅಧ್ಯಕ್ಷನಾಗಿ ನೇಮಿಸಿಬಿಡುತ್ತಾರೆ. ಐದಾರು ಬಿಜೆಪಿ ಬ್ಯಾರಿಗಳನ್ನು ಸದಸ್ಯರನ್ನಾಗಿ ಮಾಡುತ್ತಾರೆ. ಪಾಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ರುಕ್ಮಿಣಿ ದಿವಾಕರ್ ಒಲ್ಲದ ಮನಸ್ಸಿನಿಂದಲೇ ಮುಖ್ಯಮಂತ್ರಿಯ ಆದೇಶವನ್ನು ಪಾಲಿಸುತ್ತಾರೆ.

ಇಲ್ಲಿ ಕಟ್ಪಾಡಿ ಮಾಡಿದ ತಪ್ಪೇನು? ಅವರು ಪ್ರಗತಿಪರರಾಗಿದ್ದೇ ಚೆಡ್ಡಿಗಳ ಕೆಂಗಣ್ಣಿಗೆ ಕಾರಣವಾಗಿದೆ. ಮಂಗಳೂರಿನಲ್ಲಿ ಕೋಮುಗಲಭೆಗಳಲ್ಲಿ ನೊಂದ ಬ್ಯಾರಿಗಳ ಪರವಾಗಿ ನಿಂತು, ಸರ್ಕಾರದ ಕ್ರೌರ್ಯವನ್ನು, ಸಂಘ ಪರಿವಾರದ ಹಿಂಸೆಯನ್ನು ಖಚಿತ ಧ್ವನಿಯಲ್ಲಿ ಖಂಡಿಸಿ ಬೀದಿಗಿಳಿದಿದ್ದ ಕಟ್ಪಾಡಿಯವರನ್ನು ಅವಮಾನಿಸಲೆಂದೇ ಮೊದಲು ನೇಮಕ ಮಾಡಿ, ನಂತರ ರದ್ದು ಮಾಡಿದ್ದಾವೆ ಚೆಡ್ಡಿಗಳು. ಅಲ್ಲಿಗೆ 'ಆಪರೇಷನ್ ಕಮಲ' ಎಂಬ ವೈರಸ್ ಸಾಂಸ್ಕೃತಿಕ ವಲಯಕ್ಕೂ ಹರಡಿದಂತಾಯ್ತು.

ಕಾಗೆ ಕೈಗೆ ಕಚೇರಿ ಕೊಟ್ಟರೆ ಕಚೇರಿ ತುಂಬಾ ಹೇತಿತ್ತಂತೆ. ಬಿಜೆಪಿಯೆಂಬ ಈ ಕಾಗೆಯ ವಿರುದ್ಧ ಪ್ರಜ್ಞಾವಂತ ಬ್ಯಾರಿಗಳು ಪ್ರತಿಭಟನೆ ನಡೆಸಬೇಕಾಗಿದೆ. ಇವರ ಜೊತೆಗೆ ಸಾಂಸ್ಕೃತಿಕ ವಲಯದ ಹಿರಿಯರು ನಿಲ್ಲಬೇಕಾಗಿದೆ.

● ಪಿ.ಕೆ. ಮಲ್ಲನಗೌಡರ್

ಕೃಷ್ಣನ ಹಿಂದೊಬ್ಬ ಶಾಸ್ತ್ರಿ

'ನೀವೆಲ್ಲೋ ನಾನಲ್ಲೆ... ಈ ಜೀವ ನಿಮ್ಮಲ್ಲೆ.... 'ಅಂತಾ ಹಾಡೊಂದು ತೇಲಿ ಬರುತ್ತಿದೆ ದೆಹಲಿಯ ಸೌತ್‌ಬ್ಲಾಕ್‌ನ ಮೊದಲ ಮಹಡಿಯಿಂದ...

ಸಿಂಗರ್: ರಾಘವೇಂದ್ರ ಶಾಸ್ತ್ರಿ

ಮ್ಯೂಸಿಕ್ ಡೈರೆಕ್ಟರ್: ಕಾಫಿಡೇ ಸಿದ್ಧಾರ್ಥ

ನಿರ್ಮಾಪಕ: ಎಸ್.ಎಂ. ಕೃಷ್ಣ



ಕೃಷ್ಣರಿದ್ದಲ್ಲಿ ಈ ಶಾಸ್ತ್ರಿ ಇರಲೇಬೇಕು. ಕೃಷ್ಣರ ವ್ಯವಹಾರಗಳಲ್ಲಿ ಬಿರುಕಾಗದಂತೆ ತೇಪೆ ಹಚ್ಚುವ ಮೇಸ್ತ್ರಿ ಕೆಲಸ ಈ ಶಾಸ್ತ್ರಿಯದು.


ಕೇವಲ ತಮ್ಮ ಹೈಟೆಕ್ ಇಂಗ್ಲಿಷ್, ಹೈಟೆಕ್ ಒಡನಾಟಗಳ ಕಾರಣಕ್ಕಾಗಿಯೇ ಕೃಷ್ಣ ವಿದೇಶಾಂಗ ವ್ಯವಹಾರ ಸಚಿವರಾಗಿದ್ದು ಒಂದು ಆಶ್ಚರ್ಯವೇ. ಈಗವರು ತಮಗೊಬ್ಬ ಸಲಹಾಗಾರನನ್ನು ನೇಮಿಸಿಕೊಂಡು, ಅವನಿಗೆ ಹೆಚ್ಚುವರಿ ಕಾರ್ಯದರ್ಶಿಯ ಸ್ಥಾನಮಾನ ನೀಡಿದ್ದಾರೆ. ಆ ಭಾಗ್ಯಶಾಲಿಯೇ ಈ ರಾಘವೇಂದ್ರರ ಶಾಸ್ತ್ರಿ ಎಂಬ ತಂತ್ರಗಾರ ಬ್ಯುಸಿನೆಸ್‌ಮನ್.

ಮೊದಲಿಗೆ ಯಾರಿವನು ಎಂಬ ಪ್ರಶ್ನೆ ಏಳುತ್ತದಲ್ಲವೆ? ಸಡನ್ನಾಗಿಯೇನೂ ಈ ವ್ಯಕ್ತಿ ವಿದೇಶಾಂಗ ಇಲಾಖೆ ತಲುಪಿಲ್ಲ. ಈತ ಪ್ರಚಾರದಲ್ಲಿರದೇ ತೆರೆಮರೆಯಲ್ಲಿ ನಿಂತು ರಾಜಕಾರಣಿ, ಬ್ಯುಸಿನೆಸ್‌ಮನ್‌ಗಳ ನಡುವೆ ದಲ್ಲಾಳಿ ಕೆಲಸ ಮಾಡಿಕೊಂಡು ಬಂದವನೆ. ಆರಂಭದ ಸ್ಕೂಲು ದಿನಗಳನ್ನು ಬೆಂಗಳೂರಲ್ಲೇ ಕಳೆದಿರುವ ಈತ ಮೂಲತಃ ಪುತ್ತೂರು ಕಡೆಯ ಜ್ಯೋತಿಷಿಯೊಬ್ಬರ ಮಗನಂತೆ.

ಸದ್ಯ ಬೆಂಗಳೂರಿನಲ್ಲೀತ ಬ್ಯುಸಿನೆಸ್‌ಮನ್, ಹಲವಾರು ಕಂಪನಿಗಳಿಗೆ ಸಲಹಾಗಾರ! ಈತನ ಐಡೆಂಟಿಟಿ ಇರುವುದೇ ಗೆಟ್‌ಇಟ್ ಯೆಲ್ಲೊ ಪೇಜಸ್ ಡೈರೆಕ್ಟರಿಯೊಂದಿಗೆ. ಗೆಟ್ ಇಟ್ ಯೆಲ್ಲೊ ಪೇಜಸ್‌ನ ಸಂಸ್ಥಾಪಕ ಇವನೇ. ಆದರೆ ಈ ಮನುಷ್ಯ ಎಸ್.ಎಂ. ಕೃಷ್ಣರಿಗೆ ಆಪ್ತನಾಗಿದ್ದು 90 ರ ದಶಕದ ಮಧ್ಯಭಾಗದಲ್ಲಿ. ಮುಂದೆ ಕೃಷ್ಣರ ನೇತೃತ್ವದಲ್ಲಿ ನಡೆದ ಚುನಾವಣಾ ಸಮರದಲ್ಲಿ ಈತ ಕೃಷ್ಣರ ಟೆಲಿಫೋನ್ ಕ್ಯಾಂಪೇನ್‌ನ ಉಸ್ತುವಾರಿ ಹೊತ್ತಿದ್ದ. ಕೃಷ್ಣ ಸಿ.ಎಂ. ಆದ ಮೇಲಂತೂ, ಸರ್ಕಾರದ ಕೈಗಾರಿಕಾ ಇಲಾಖೆ ಮತ್ತು ಮಲ್ಟಿ ನ್ಯಾಷನಲ್ ಕಂಪನಿಗಳ ನಡುವೆ ಹೈಟೆಕ್ ಬ್ರೋಕರ್‌ನಂತೆ ಕೆಲಸ ಮಾಡಿದ. ಅಂದಂತೆ ಕೃಷ್ಣರಿಗೆ ಇವನನ್ನು ತಗುಲಿಹಾಕಿದ್ದು ಕೃಷ್ಣರ ಅಳಿಯ, ಕಾಫಿಡೇ ಸಂಸ್ಥಾಪಕ ವಿ.ಜಿ. ಸಿದ್ಧಾರ್ಥ...

ಸೆಕ್ಸ್ ಸಿಡಿ: ಸಿಕ್ಕಿಬಿದ್ದ ಭಜರಂಗಿಗೆ ಪೊಲೀಸ್ ನೆರವು!

ಇದು ಕೇವಲ ಒಬ್ಬ ವಿಕೃತಕಾಮಿ ಸುರೇಶನ ಅಪರಾಧವೆಂದು ಪರಿಗಣಿಸಲು ಆಗುತ್ತದಾ? ಖಂಡಿತ ಇಲ್ಲ; ಭಜರಂಗದಳದ ಹೆಸರಲ್ಲಿ ಬಿಜೆಪಿ ಸಾಕುತ್ತಿರುವ ದುಷ್ಟಜಂತುಗಳ ವ್ಯೂಹವೊಂದು ಎಲ್ಲ ಊರುಗಳಲ್ಲಿ ಇಂತಹ ಕೆಲಸಗಳಲ್ಲಿ ನಿರತವಾಗುತ್ತಿದೆ. ಏಕೆಂದರೆ ಅವರಿಗೆ ಪೊಲೀಸರ ಭಯವಿಲ್ಲ.



...ಏಳೆ ಭಜರಂಗಿಗಳು ತಾವು ...ೀಕವಾಗಿ ಮಾಡುತ್ತಿರುವ ಹಲ್ಕಾ ...ನ್ನು ಕೆಎಫ್‌ಡಿ (ಕರ್ನಾಟಕ ...ಮ್ ಫಾರ್ ದಿಗ್ನಿಟಿ) ಮೇಲೆ ...ಸಿ. ಸುಳ್ಳು ಎಸ್‌ಎಂಎಸ್‌ಗಳನ್ನು ... ನೀಚ ಕೆಲಸಗಳಲ್ಲಿ ...ದ್ದಾರೆ. ಈ [illegible] ...ನೋಡಿ.

...ತಿ ಊರಲ್ಲೂ ಕೆಎಫ್‌ಡಿಯವರು ...ರ್ ರಿಚಾರ್ಜ್ ಅಂಗಡಿಗಳಿಂದ ... ಸಹೋದರಿಯರ ಮೊಬೈಲ್ ...ಗಳನ್ನು ಸಂಗ್ರಹಿಸುತ್ತಿದ್ದಾರೆ ಮತ್ತು ... ಇತರರಿಗೆ ಮಸೀದಿಗಳಲ್ಲಿ ... ಮಾಡಿ, ಹಿಂದೂ ...ಮತವನ್ನು ನಾಶಮಾಡಲು ...ದ್ದಾರೆ. ಆದ್ದರಿಂದ ಇನ್ನು ಮುಂದೆ ... ಹುಡುಗಿಯರು ರಿಚಾರ್ಜ್ ...ಗಳಲ್ಲಿ ಮೊಬೈಲ್ ರಿಚಾರ್ಜ್ ...ಕೊಳ್ಳದೇ, ಟಾಪ್ ಅಪ್ ...ನ್ನು ಖರೀದಿಸಿ ರಿಚಾರ್ಜ್ ...ಕೊಳ್ಳುವಂತೆ ಹೇಳಿ. ಹಿಂದೂ ...ಯವನ್ನು ರಕ್ಷಿಸಿ. ಜೈಶ್ರೀರಾಮ್."

...ರೀತಿಯಾಗಿ ಅಲ್ಪಸಂಖ್ಯಾತರ ದೇಶಪ್ರೇಮಿ ... ಕೆಎಫ್‌ಡಿ ವಿರುದ್ಧ ಪ್ರಚಾರ ಮಾಡುತ್ತಿರುವ ...ಮನ ತುಂಡುಗಳು ಮತ್ತೆ ಮತ್ತೆ ಸೆಕ್ಸ್ ಸಿ.ಡಿ. ...ಲ್ಲಿ ಸಿಕ್ಕಿಬೀಳುತ್ತಿವೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ...ಊರು ಜಿಲ್ಲೆ ಕೊಪ್ಪದ ಭಜರಂಗಿ ಸುರೇಶ್ ... ಭಜರಂಗದಳದ ಮಾಜಿ ಸಂಚಾಲಕ ಮಹೇಂದ್ರ ... ಆಪ್ತ. ಈ ಹಿಂದೆಲ್ಲ ಸುರೇಶ್ ಶೆಟ್ಟಿ ಸಿಕ್ಕಿಬಿದ್ದಾಗ ... ಕುಮಾರ್ ಆತನನ್ನು ಬಿಡಿಸಿಕೊಂಡು ಬರುತ್ತಿದ್ದ. ...ಪ್ಪದಲ್ಲಿ ಅರಳೀಕಟ್ಟೆ ಹತ್ತಿರ ಶೂ ಅಂಗಡಿ, ... ಅಂಗಡಿ ಇಟ್ಟಿರುವ ವಿಕೃತ ಮನಸ್ಸಿನ ಸುರೇಶ್ ... ಸಿ.ಡಿ. ತಯಾರಿಸಲು ಹೋಗಿ, ಕಳೆದ ವಾರ ... ಕೈಗೆ ಸಿಕ್ಕಿಬಿದ್ದಿದ್ದಾನೆ. ಅಷ್ಟೇ ವೇಗದಲ್ಲಿ ... ಪಡೆದು ಎತ್ತಲೋ ಓಡಿಹೋಗಿದ್ದಾನೆ.

...ಎಂ.ಎಂ.ಎಸ್. ಅವಾಂತರ

... ಸುರೇಶ್ ಶೆಟ್ಟಿ ಏಳೆಂಟು ವರ್ಷಗಳಿಂದ ... ಧಂಧೆ ಮಾಡಿಕೊಂಡು ಬಂದಿದ್ದಾನೆ. ಸದ್ಯಕ್ಕೆ ...ುವ ಕೇಸು ಎಂಥದ್ದು ನೋಡಿ. ತನ್ನ ಪರಿಚಿತರ ...ದಿಗೆ ವಿಕೃತ ಚೇಷ್ಟೆ ನಡೆಸಿ ಆ ಎಳೆಬಾಲೆಯ ...ಯೋ ಮಾಡಿ ಮಾರಿಕೊಂಡಿದ್ದ. ಜೊತೆಗೆ ...ಕಾದವರಿಗೆ ನಗ್ನ ಕ್ಲಿಪ್‌ಗಳ ಎಂ.ಎಂ.ಎಸ್. ...ದು ಕಳೆದವಾರ ಕೊಪ್ಪದ ತುಂಬಾ ಸುದ್ದಿಯಾಗಿ, ...ು ತಂದೆಗೂ ತಿಳಿಯಿತು. ಆದರೆ ಗೂಂಡಾ ... ಅವರನ್ನು ಬೆದರಿಸಿ ಬಾಯಿ ಮುಚ್ಚಿಸಲು

ಪಕ್ಕದ ಬಾಳೆಹೊನ್ನೂರಿನ ರಶ್ಮಿ (ಹೆಸರು ಬದಲಿಸಿದೆ)ಯೇ ಈಗ ಈ ಭಜರಂಗಿ ಭಂಡನ ವಿಕೃತಕ್ಕೆ ಬಲಿಯಾದವಳು. ಈಕೆಯ ತಂದೆ ಸೋಮಶೇಖರ್ ಮಗಳನ್ನು ಕೊಪ್ಪದಲ್ಲಿ ಓದಲೆಂದು ಕರೆತಂದು, ಗೆಳೆಯ ಎಂಬ ಕಾರಣಕ್ಕೆ ಸುರೇಶನಿಗೆ ಪರಿಚಯ ಮಾಡಿ, ಮಗಳ ಓದಿನ ಉಸ್ತುವಾರಿಯನ್ನು ಅವನಿಗೆ ವಹಿಸಿದ್ದೇ ಎಡವಟ್ಟಾಯಿತು.


"ಪ್ಲೀಸ್ ಅಂಕಲ್ ಬಿಟ್ಬಿಡಿ, ನಂಗೇನೂ ಮಾಡ್ಬೇಡಿ, ನೀವು ನನ್ನ ತಂದೆ ಸಮಾನ. ನಂಗೊಂಥರಾ ಆಗ್ತಿದೆ. ಭಯವಾಗ್ತಿದೆ. ನನ್ನಪ್ಪ ನನ್ನ ಮುದ್ದು ಮಾಡ್ತಾರೆ, ಮಡಿಲಲ್ಲಿ ಮಲಗಿಸಿಕೊಂಡು ತಲೆ ನೇವರಿಸ್ತಾರೆ. ಆದ್ರೆ ಹೀಗೆಲ್ಲ ಮಾಡೊಲ್ಲ. ನಾನಿನ್ನು ಚಿಕ್ಕವಳು ಅಂಕಲ್, ನಂಗೇನೂ ಮಾಡ್ಬೇಡಿ. ಕಾಲ್ ಹಿಡಕೊತೀನಿ ಅಂಕಲ್" ಅಂತಾ ಹತ್ತನೆಯ ತರಗತಿಯ ರಶ್ಮಿ ಅಂಗಲಾಚಿ ಬೇಡುತ್ತಿದ್ದರೆ 'ಜೈ ಶ್ರೀರಾಮ್' ಬ್ರ್ಯಾಂಡಿನ ಕತ್ತೆ ಕಿರುಬ ಸುರೇಶ್ ಮಾತ್ರ ರಶ್ಮಿಯನ್ನು ಬೆತ್ತಲೆಗೊಳಿಸಿ, "ಸುಮ್ನಿರು ಒಂದೇ ಒಂದು ಫೋಟೋ ತೆಗಿತೀನಿ" ಎನ್ನುತ್ತಾ, ಎಳೆ ಬಾಲೆಯ ಅಂಗಾಂಗಗಳನ್ನು ಸ್ಪರ್ಶಿಸುತ್ತ ವಿಕೃತಾನಂದ ಅನುಭವಿಸಿದ. ಮೊಬೈಲ್ ಕ್ಯಾಮೆರಾ ಬಳಸಿ ವಿಡಿಯೋ ಚಿತ್ರೀಕರಣ ಮಾಡಿ, ಮಂಗಳೂರಲ್ಲಿ ಸಿ.ಡಿ. ಮಾರಿ ಕಾಸು ಮಾಡಿಕೊಂಡಿದ್ದ. ಜನರೇನಾದರೂ ಈ ವಿಷಯ ಕೈಗೆತ್ತಿಕೊಳ್ಳದೇ ಇದ್ದಿದ್ದರೆ, ಈ ಕಾಮಪಿಶಾಚಿ ಇನ್ನೆಷ್ಟು ಹೆಣ್ಣುಗಳ ಜೀವ ತಿನ್ನುತ್ತಿತ್ತೋ? ಈ ಹಿಂದೆ ಈತ ಮಾಡಿದ ಭಾನಗಡಿಗಳ ಕುರಿತು ಒಂದು ಪುಸ್ತಕವನ್ನೇ ಬರೆಯಬಹುದೇನೋ? ಈತನ ಗುರು ಮನೆಹಾಳ ಮಹೇಂದ್ರ ಕುಮಾರ್‌ನನ್ನು ವಿಚಾರಣೆಗೊಳಪಡಿಸಿದರೆ ಈ ದುಷ್ಟ ಗ್ಯಾಂಗ್ ಮಾಡಿದ ಹೀನಕೃತ್ಯಗಳೆಲ್ಲ ಬಯಲಿಗೆ ಬರಬಹುದು.



ಆದರೆ ಜನ ಸುಮ್ಮನಾಗಲಿಲ್ಲ, ಸಾವಿರಾರು ... ಬೀದಿಗಿಳಿದ ಜನ ಸುರೇಶನ ಅಂಗಡಿಗೆ ...ನ್ನು ಹಿಡಿದು ಒದ್ದರು. ಆಗ ಎಚ್ಚರಗೊಂಡ ... ಸುರೇಶನ [illegible] ಮಾಡಿದರು. ಆದರೆ [illegible] ...ಹಿತು, ರಾತ್ರಿ, [illegible] ಮುಂದೆ [illegible] ಸಾವಿರಾರು ಜನ [illegible]

ಮೊಬೈಲ್ ರಿಚಾರ್ಜೇ ಅಸ್ತ್ರ!

ಇವತ್ತು ಭಜರಂಗಿಗಳು ಎಸ್.ಎಂ.ಎಸ್. ಮೂಲಕ ಹಿಂದೂ ಸಹೋದರಿಯರ ರಕ್ಷಣೆಯ ಮಾತಾಡುತ್ತ ರೀಚಾರ್ಜ್ ಕೇಂದ್ರಗಳಲ್ಲಿ ಮೊಬೈಲ್ ರೀಚಾರ್ಜ್ ಮಾಡಿಸಿಕೊಳ್ಳಬೇಡಿ ಎಂದು ಅರಚಾಡುತ್ತಿವೆ. ಆದರೆ ಅವರದೇ ಸಂಘಟನೆಯ ಈ 'ಶ್ರೀರಾಮ' ಸುರೇಶ್ ಶೆಟ್ಟಿ ಮೊಬೈಲ್ ರಿಚಾರ್ಜ್‌ಗೆಂದು [illegible]



ಮಾಡಿದರೇ ಹೊರತು ಬೀದಿಗೆ ಬಂದು ಪ್ರತಿಭಟಿಸಲಿಲ್ಲ, ಅಷ್ಟೇ ಅಲ್ಲ ಬಿಜೆಪಿಯ ಅಧಿಕಾರ ಬಳಸಿ ಸುರೇಶ್ ಶೆಟ್ಟಿಯನ್ನು ರಕ್ಷಿಸಲು ನಿಂತಿದ್ದಾರೆ. ಇಂತಹ ದುಷ್ಟರು ಸಹೋದರಿ, ತಾಯಿ ಎಂದು ನಾಟಕವಾಡುತ್ತ ಅಮಾಯಕ ಅಲ್ಪಸಂಖ್ಯಾತರನ್ನು ವಿನಾಕಾರಣ ದ್ವೇಷಿಸುತ್ತಾರೆ.

ಕುಂದಾಪುರ ತಾಲ್ಲೂಕಿನ ಹಾಲಾಡಿಯಿಂದ ಕೊಪ್ಪಕ್ಕೆ ಬಂದು ಒಂದು ಚಪ್ಪಲಿ ಅಂಗಡಿ, ಮೊಬೈಲ್ ಅಂಗಡಿ ತೆರೆದ ಸುರೇಶ್ ಶೆಟ್ಟಿ ಮೊದಲಿಂದಲೂ ಭಜರಂಗಿ ಬದ್ಮಾಷನೇ. ಇಪ್ಪತ್ತು, ಮೂವತ್ತು ರೂಪಾಯಿ ಈಸಿ ರೀಚಾರ್ಜ್‌ಗೆಂದು ಬರುವ ಎಸ್.ಎಲ್.ಎಲ್.ಸಿ, ಪಿ.ಯು.ಸಿ. ಹುಡುಗಿಯರ ಮೊಬೈಲ್ ನಂಬರ್ ಇಟ್ಟುಕೊಳ್ಳುವುದು, ಅವರೊಂದಿಗೆ ಸಲುಗೆ ಬೆಳೆಸುವುದು, ಸಂದರ್ಭ ನೋಡಿ ಕೂಲ್ ಡ್ರಿಂಕ್‌ನಲ್ಲಿ ಡ್ರಗ್ ಬೆರೆಸಿ ಬೆತ್ತಲೆ ಚಿತ್ರ ತೆಗೆಯುವುದು ಇದು ಸುರೇಶ್ ಟೀಮಿನ ಕಾರ್ಯವಿಧಾನ. ಮುಂದೆ ಮಂಗಳೂರಲ್ಲಿ ಸಿ.ಡಿ. ಮಾಡಿಸಿ ಮಾರಿ ಕಾಸು ಮಾಡುವುದು. ಇದು ಏಳೆಂಟು ವರ್ಷಗಳಿಂದ ಬೇರೆ ಬೇರೆ ರೂಪದಲ್ಲಿ ನಡೆದೇ ಇತ್ತು. ಆಗಾಗ ಸಿಕ್ಕಿಬಿದ್ದಾಗ ಜನರಿಂದ ಒದೆಗಳೂ ಬದ್ದಿದ್ದವು. ಹಲ್ಲೂ ಮುರಿದಿದ್ದವು. ಆದರೂ ದಂಧೆಯನ್ನು ಮಾತ್ರ ಬಿಟ್ಟಿರಲಿಲ್ಲ ಈ ಬದ್ದಿಮಕ್ಕಳು. ಹಿಂದೆ ಮಂಗಳೂರಿನಲ್ಲಿ 'ಹಾಯ್ ಮಾರುತ' ಎಂಬ ಪಿಂಪ್ ಪೇಪರ್ ಮಾಡಿ, ನಡುಬೀದಿಯಲ್ಲಿ ಕೊಲೆಯಾಗಿ ಹೋದ ಹಿತೇಂದ್ರ ಪ್ರಸಾದ್ ಎಂಬ ಇನ್ನೊಬ್ಬ ಬ್ಲೂಫಿಲಂ ನಟನೊಂದಿಗೆ ಈ ಸುರೇಶ್ ಕೆಲಸ ಮಾಡಿದ್ದ. ಹಿತೇಂದ್ರನ ಸಕಲ ಸ್ಕ್ಯಾಂಡಲ್ ಗುಣಗಳೆಲ್ಲವನ್ನೂ ಕಲಿತೇ ಕೊಪ್ಪಕ್ಕೆ ಕಾಲಿಟ್ಟಿದ್ದ.

ಮೂರ್ನಾಲ್ಕು ತಿಂಗಳ ಹಿಂದೆ [illegible]



ಕೊಪ್ಪ ಎರಡಕ್ಕೂ ಒಬ್ಬನೇ ಡಿವೈಎಸ್‌ಪಿ ಇದ್ದಾನೆ. ಶೃಂಗೇರಿ ಠಾಣೆಗೆ ಸುರೇಶನನ್ನು ಎಳೆತಂದರು. ಆದರೆ ಕುಂದಾಪುರದ ಚಿಡ್ಡಿ ಮಧ್ಯಸ್ಥಿಕೆ ವಹಿಸಿ ಸುರೇಶನನ್ನು ಪಾರು ಮಾಡಿದ್ದ. ಹೇಗಿದೆ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಹೆಸರಲ್ಲಿ ಲಾಭ ಮಾಡಿಕೊಳ್ಳುವವರ ಪರಸ್ಪರ 'ಸಹಕಾರಿ ಚಳುವಳಿ?

ಐದು ವರ್ಷದ ಹಿಂದೆ ಸುರೇಶನ ಮದುವೆ ನಡೆದಾಗ, ಇವನಿಂದ ಅನ್ಯಾಯಕ್ಕೊಳಗಾದ ಮೂವರು ಹುಡುಗಿಯರು ಬಂದು ಎದೆಪಟ್ಟಿ ಹಿಡಿದಿದ್ದರು. ಅವರೆಲ್ಲರಿಗೂ ಮದುವೆಯಾಗುವುದಾಗಿ ನಂಬಿಸಿ ತೀಟೆ ತೀರಿಸಿಕೊಂಡಿದ್ದ. ತನ್ನ ಸಹಪಾಠಿ ಭಜರಂಗಿಗಳ ನೆರವಿನಿಂದ ಆ ಹುಡುಗಿಯರನ್ನು ಬೇರೆಡೆ ಸಾಗಿಸಿ ಮದುವೆ ಮಾಡಿಕೊಂಡಿದ್ದ ಈ ಮನೆಮುರುಕ.

ಮೂರು ತಿಂಗಳ ಹಿಂದೆ ಉಡುಪಿಯ ಹೆಬ್ರಿಯಲ್ಲಿ ಹುಡುಗಿಯೋರ್ವಳಿಗೆ ಮೋಸ ಮಾಡಲು ಹೋಗಿ ಮುಕುಳಿ ಮೇಲೆ ಭರ್ತಿ ಒದೆ ತಿಂದಿದ್ದ. ತೀರಾ ಇತ್ತೀಚೆಗೆ ಮತ್ತೊಂದು ಕೇಸಿನಲ್ಲಿ ಹಲ್ಲು ಮುರಿಸಿಕೊಂಡು ಬಂದಿದ್ದ. ಈ ವಿಕೃತ ದುರಾಚಾರಗಳ ಜೊತೆಗೆ ಕದಿಯುವುದೂ ಇವನ ಸೈಡ್ ಉದ್ಯೋಗವಾಗಿತ್ತು. ತನ್ನ ಅಂಗಡಿ ಪಕ್ಕದ ಗ್ಯಾರೇಜಿಗೆ ಬರುತ್ತಿದ್ದ ಕಾರುಗಳಿಂದ ಕ್ಯಾಸೆಟ್ ಪ್ಲೇಯರ್ ಕದಿಯುತ್ತಿದ್ದ. ಆಗಲೂ ಒಮ್ಮೆ ಒದೆ ತಿಂದಿದ್ದ. "ನಮ್ಮದೇ ಸರ್ಕಾರವಿದೆ. ಟ್ರಾನ್ಸ್‌ಫರ್ ಮಾಡಿಸಿಕೊಡ್ತೀನಿ" ಎಂದು ಶಿಕ್ಷಕಿಯೊಬ್ಬರಿಂದ 50 ಸಾವಿರ ಕಿತ್ತಿದ್ದ. ಟ್ರಾನ್ಸ್‌ಫರ್ ಆಗದೇ ಹೋದಾಗ ದುಡ್ಡು ವಾಪಸ್ ಕೇಳಿದ ಶಿಕ್ಷಕಿಗೇ ಆವಾಜ್ ಹಾಕಿದ್ದ. ಹೇಗೂ ಅವನದೇ, ಅವನಂತವರೇ ಆಳುವ ಸರ್ಕಾರವಿದೆಯಲ್ಲ? ಶಿಕ್ಷಕಿ ದೂರು ನೀಡಿದಾಗ ಮೂರು ದಿನ ಜೈಲುಪಾಲಾದ. ಪೊಲೀಸರೊಂದಿಗೆ ಸೆಟಲ್‌ಮೆಂಟ್ ಮಾಡಿಕೊಂಡು ಹೊರಬಂದ. ಹೇಗೂ ಅವನಂತವನೇ ಗೃಹಮಂತ್ರಿ ಇರುವಾಗ ಸುರೇಶನಿಗೆ ಇನ್ನಾವ ಭಯ ಹೇಳಿ....

ಈಗ ಹೇಳಿ, ಇದು ಕೇವಲ ಒಬ್ಬ ವಿಕೃತಕಾಮಿ ಸುರೇಶನ ಅಪರಾಧವೆಂದು ಪರಿಗಣಿಸಲು ಆಗುತ್ತದಾ? ಖಂಡಿತ ಇಲ್ಲ; ಭಜರಂಗದಳದ ಹೆಸರಲ್ಲಿ ಬಿಜೆಪಿ ಸಾಕುತ್ತಿರುವ ದುಷ್ಟಜಂತುಗಳ ವ್ಯೂಹವೊಂದು ಎಲ್ಲ ಊರುಗಳಲ್ಲಿ ಇಂತಹ ಕೆಲಸಗಳಲ್ಲಿ ನಿರತವಾಗುತ್ತಿದೆ. ಏಕೆಂದರೆ ಅವರಿಗೆ ಪೊಲೀಸರ ಭಯವಿಲ್ಲ.

ಕಳೆದ 15 [illegible] ಭಜರಂಗಿ ಲೀಡರ್ ಸುಧಾಕರಗೌಡ [illegible] ಇದೇ ರೀತಿ ಸೆಕ್ಸ್ ಸಿಡಿ [illegible]

● [illegible]

▸▸▸10 ಬುಲೆಟ್ ರವಿ ಹಂತಕರ ಬಿಜೆಪಿ ಲಿಂಕ್

ಬುಲೆಟ್ ರವಿ ಏನಾದರೂ ಮುಂಬರುವ ಪಾಲಿಕೆ ಚುನಾವಣೆಗೆ ನಿಂತು ಗೆದ್ದನೆಂದರೆ ಅಪಾಯ ಕಟ್ಟಿಟ್ಟ ಬುತ್ತಿ. ಯಲಹಂಕದ ನಾಲ್ಕು ಪಾಲಿಕೆ ವಾರ್ಡಗಳ ಪೈಕಿ ಕಾಮಾಕ್ಷಮ್ಮ ಲೇಔಟ್, ಬೆಟ್ಟಳ್ಳಿ, ಯಲಹಂಕ ಹೌಸಿಂಗ್ ಬೋರ್ಡ್ ಮತ್ತು ಯಲಹಂಕದಲ್ಲಿ ಎಲ್ಲೇ ನಿಂತಿದ್ದರೂ ಗೆಲ್ಲುವ ತಾಕತ್ತು ರವಿಗಿತ್ತು. ರಿಯಲ್ ಎಸ್ಟೇಟ್ ರೊಕ್ಕ ಮತ್ತು ರೌಡಿಗಳ ಜಮಾವಣೆಯಲ್ಲಿ ತನಗೆ ಸರಿಸಮನಾಗಿ ಬೆಳೆಯುತ್ತಿರುವ ರವಿಯನ್ನು ಹಣಿಯಲೆಂದೇ ಎಮ್ಮೆಲ್ಲೆ ವಿಶ್ವನಾಥ್ ಪೋಷಿಸುತ್ತಾ ಬಂದದ್ದು ಶೇಖ್ರಿ ಎಂಬ ಲೋಕಲ್ ರೌಡಿಯನ್ನು.

ಸೋಮಶೇಖರ್ ಅಲಿಯಾಸ್ ಶೇಖರ್ ಉರ್ಫ್ ಶೇಖ್ರಿ ಮೂಲತಃ ಭೂಗತ ಪಾತಕಿ ಗೆಡ್ಡಾ ನಾಗನ ಶಿಷ್ಯ. ಪ್ರಾರಂಭದಲ್ಲಿ ಯಲಹಂಕದ ಲಾಲ್ ಬಹಾದೂರ್ ಶಾಸ್ತ್ರಿ ನಗರದಲ್ಲಿದ್ದ ಶೇಖ್ರಿ, ಕ್ರಮೇಣ ಅಳ್ಳಾಳಸಂದ್ರದಲ್ಲಿ ಅಡ್ಡೆಹಾಕುತ್ತಿದ್ದ. ಈತ ಕೂಡ ಒಂದಾನೊಂದು ಕಾಲಕ್ಕೆ ಬುಲೆಟ್ ರವಿಗೆ ಶಿಷ್ಯನೇ. 2006ರ ಹೊತ್ತಿಗೆ ಬುಲೆಟ್ ರವಿಯಿಂದ ಕೊಲೆಯಾದ ಮುನಿ ಆಂಜನಪ್ಪ ಎಂಬ ದಲಿತ ನಾಯಕನ ಬಲಗೈ ಬಂಟನಂತಿದ್ದ ಶೇಖ್ರಿ ತನ್ನ ಗುರುವಿನ ಹೆಣದ ಮುಂದೆ ನಿಂತು ಪ್ರತೀಕಾರದ ಶಪಥ ಗೈದಿದ್ದ. ಆವತ್ತಿನಿಂದಲೇ ಬುಲೆಟ್ ರವಿಯಿಂದ ಬೇರ್ಪಟ್ಟು ಗೆಡ್ಡಾ ನಾಗನ ಭಟ್ಟಂಗಿಯಾದ. ಒಂದೆಡೆ ರವಿಯ ಲ್ಯಾಂಡ್ ರಾಬರಿ ಶುರುವಾದರೆ ಮತ್ತೊಂದೆಡೆ ಶೇಖ್ರಿ ಮತ್ತು ಗೆಡ್ಡಾ ನಾಗ ಹಾವಳಿಯಿಟ್ಟರು.


ಶೇಖರ್


ಹೀಗೆ ಶುರುವಾದ ಜಿದ್ದಾಜಿದ್ದಿ ಮತ್ತು ರಿಯಲ್ ಎಸ್ಟೇಟ್ ಹಣಾಹಣಿಗೆ ತಕ್ಕಂತೆ ರವಿ ಕಾಂಗ್ರೆಸ್ ರಾಜಕಾರಣಿಯಾದರೆ, ಶೇಖ್ರಿ ಯಲಹಂಕದ ಶಾಸಕ ವಿಶ್ವನಾಥ್‌ರ ಪಾಳಯ ಸೇರಿಕೊಂಡ. ಈಗಾಗಲೇ ಬುಲೆಟ್ ರವಿಯ ಪ್ರಭಾವವನ್ನು ಕಂಡು ದಂಗಾಗಿದ್ದ ಎಮ್ಮೆಲ್ಲೆ ವಿಶ್ವನಾಥ್ ಮಾಡಿದ ಮತ್ತೊಂದು ಅನಾಹುತವೆಂದರೆ ಶೇಖ್ರಿಯನ್ನು ಯಲಹಂಕ ಮಂಡಲ ಬಿಜೆಪಿಯ ದಲಿತ ಮೋರ್ಛಾ ಘಟಕದ ಅಧ್ಯಕ್ಷನನ್ನಾಗಿ ನೇಮಿಸಿದ್ದು!

ಒಂದೆಡೆ ಶೇಖ್ರಿ ಎಮ್ಮೆಲ್ಲೆ ವಿಶ್ವನಾಥ್ ಫೋಟೋ ಜೊತೆ ತನ್ನ ಮತ್ತು ಗೆಡ್ಡಾ ನಾಗನ ಫೋಟೋ ಹಾಕಿಸಿ ಕಂಡಕಂಡಲ್ಲಿ ಬ್ಯಾನರ್, ಕಟೌಟ್ ನಿಲ್ಲಿಸುತ್ತಿದ್ದರೆ, ರವಿ ಖರ್ಗೆ, ಧರ್ಮಸಿಂಗ್, ಉಗ್ರಪ್ಪನವರ ಫೋಟೋ ಜೊತೆ ತನ್ನ ಫೋಟೋ ಹಾಕಿ ಬ್ಯಾನರ್ ಕಟ್ಟಲಾರಂಭಿಸಿದ್ದ. ಸಾಲದ್ದಕ್ಕೆ ಮಂಜ ಮತ್ತು ಸೈಕಲ್ ರವಿಯಂಥವರನ್ನು ಯಲಹಂಕಕ್ಕೆ ಕರೆತಂದು ರವಿ ಉಪಚರಿಸುತ್ತಿದ್ದಾನೆಂಬ ಗುಲ್ಲು ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಹೊಗೆಯಾಡುತ್ತಿತ್ತು. ಬಹುಶಃ ಅಪಾಯದ ವಾಸನೆ ಮೊದಲೇ ಇತ್ತೇನೋ. ರವಿ ತನ್ನ ಸುತ್ತ ಬಂದೂಕುಧಾರಿ???.

ಅಂಗರಕ್ಷಕರನ್ನಿಟ್ಟುಕೊಂಡು ಸುತ್ತುತ್ತಿದ್ದ. ಎಮ್ಮೆಲ್ಲೆ ವಿಶ್ವನಾಥ್ ಕುಮ್ಮಕ್ಕಿನೊಂದಿಗೆ ಶೇಖ್ರಿ ತನ್ನ ವಿರುದ್ಧ ಕತ್ತಿ ಮಸೆಯುತ್ತಿರುವ ಬಗ್ಗೆ ಆತನಿಗೆ ಸ್ಪಷ್ಟ ಮಾಹಿತಿಯಿತ್ತು. ಅದಕ್ಕೆ ತಕ್ಕಂತೆ ಯಲಹಂಕದಲ್ಲಿ ಕೆಲ ಘಟನೆಗಳು ನಡೆದುಬಿಟ್ಟವು. ಸಂಜೀವಿನಿ ನಗರದ ಕೇಬಲ್ ವಾರ್‌ಗೆ ಸಂಬಂಧಪಟ್ಟಂತೆ ಅಲ್ಲಾಳಸಂದ್ರದ ಅಪ್ಪು ಗ್ಯಾಂಗ್ ರವಿಯ ಬಲಗೈ ಬಂಟನಂತಿದ್ದ ಜಗ್ಗನನ್ನು ಕೊಂದುಹಾಕಿತು.


ಕೊಲೆಯಾದ ಬುಲೆಟ್ ರವಿ...

ಇದಕ್ಕೆ ಶೇಖ್ರಿ ಮತ್ತು ಗೆಡ್ಡಾ ನಾಗರರೇ ಕುಮ್ಮಕ್ಕೆಂದು ಲೆಕ್ಕ ಹಾಕಿದ ರವಿ ಇಲ್ಲಿಗೆ ಮೂರು ತಿಂಗಳ ಹಿಂದೆ ತನ್ನ ಹುಡುಗರನ್ನು ಬಿಟ್ಟು ಯಲಹಂಕದ ನಡುರಸ್ತೆಯಲ್ಲೇ ಶೇಖ್ರಿ ಮೇಲೆ ಅಟ್ಯಾಕ್ ಮಾಡಿಸಿದ. ಆವತ್ತು ಅಚಾನಕ್ಕಾಗಿ ಬಚಾವಾದ ಶೇಖ್ರಿ ಎಮ್ಮೆಲ್ಲೆ ವಿಶ್ವನಾಥ್ ತಲೆಗೆ ಹುಳಬಿಟ್ಟು ರವಿ ವಿರುದ್ಧ ಪೊಲೀಸ್ ರೇಡ್ ಆಗುವಂತೆ ನೋಡಿಕೊಂಡ. ಸಂಪಿಗೆ ಹಳ್ಳಿಯ ಇನ್ಸ್‌ಪೆಕ್ಟರ್ ರತ್ನಾಕರ್ ಶೆಟ್ಟಿ ತಂಡ ಇಡೀ ಬುಲೆಟ್ ರವಿ ಗ್ಯಾಂಗನ್ನೂ, ಅವರು ಬಳಸುತ್ತಿದ್ದ ಬ್ಯಾಂಕ್ ಸಾಲ ಪಡೆದಿದ್ದ ಕಾರುಗಳನ್ನೂ ಒಟ್ಟೊಟ್ಟಿಗೆ ಹಿಡಿದು ಹಾಕಿತು. ರವಿ ತನ್ನ ಗ್ಯಾಂಗ್ ಸಮೇತ ಜೈಲುಪಾಲಾದ. ಪೊಲೀಸರು ಹಿಡಿಯುವುದಕ್ಕೂ ಮೊದಲು ಬಿಹಾರಿ ಬಂದೂಕುಧಾರಿಗಳ ಬೆಂಗಾವಲಿಟ್ಟುಕೊಂಡು ಸುತ್ತುತ್ತಿದ್ದ ರವಿ ಜೈಲಿಂದ ಬಂದವನೇ ಅನಧಿಕೃತ ರಿವಾಲ್ವರ್ ಜೊತೆಗಿಟ್ಟುಕೊಂಡು ಓಡಾಡಲಾರಂಭಿಸಿದ.


ವಾಸು

ಇದು ರವಿ ಹತ್ಯೆಯಲ್ಲಿ ಎಮ್ಮೆಲ್ಲೆ ವಿಶ್ವನಾಥರಿಂದ ಶೇಖ್ರಿಗೆ ಒದಗಿದ ಮೊದಲನೇ ನೆರವು. ಹಿಂದಾದರೆ ಗನ್‌ಮನ್‌ಗಳಿರುತ್ತಿದ್ದರು. ಈಗ ಒಂದಷ್ಟು ಹುಡುಗರು ಮತ್ತು ಕಳ್ಳ ರಿವಾಲ್ವರ್ ಇದಿಷ್ಟೇ ರವಿಯ ಪ್ರಾಣರಕ್ಷಣೆಗುಳಿದವು. ಇದೇ ಹೊತ್ತಿಗೆ ರವಿ ದೊಡ್ಡ ಲ್ಯಾಂಡ್ ಡೀಲ್ ಒಂದಕ್ಕೆ ಕೈಯಿಟ್ಟ. ಒಂದು ಮೂಲದ ಪ್ರಕಾರ ಅದು ಹತ್ತು ಕೋಟಿಯ ಆಸ್ತಿ. ಜಾಲಹಳ್ಳಿಯಲ್ಲಿದ್ದ ಅದನ್ನು ಇತ್ತೀಚೆಗಷ್ಟೇ ಮಾರಿದ್ದಾನೆಂಬ ಮಾಹಿತಿ ಎಮ್ಮೆಲ್ಲೆ ವಿಶ್ವನಾಥ್ ಕಿವಿಗೆ ಬಿದ್ದಿದೆ. ಸದರಿ ಡೀಲಿಗೂ ಶಾಸಕ ವಿಶ್ವನಾಥ್‌ಗೂ ಯಾವ ಸಂಬಂಧವಿತ್ತೊ? ಯಾವತ್ತು ರವಿಗೆ ದುಡ್ಡು ಬಂತೆಂಬುದು ಗೆಡ್ಡಾ ನಾಗನಿಗೆ ಗೊತ್ತಾಯಿತೋ ಅತ್ತಲಿಂದ ರವಿಯ ಮೊಬೈಲಿಗೆ ಫೋನ್ ಮಾಡಿದ ಗೆಡ್ಡಾ ಧಮಕಿ ಹಾಕಿದ್ದಾನೆ. "ಯಾರ್‍ಯಾರಿಗೋ ರೋಲ್‌ಕಾಲ್ ಕೊಡ್ತೀಯಾ? ನಾನಿಲ್ಲದೇ ಹೋಗಿದ್ರೆ ಈ ಹೊತ್ತಿಗಾಗಲೇ ಶೇಖ್ರಿ ನಿನ್ನನ್ನು ಮರ್ಡರ್ ಮಾಡಿರುತ್ತಿದ್ದ. ಶೇಖ್ರಿಗೆ ಹೇಳಿ ನಿನ್ನ ಪ್ರಾಣ ಉಳಿಸಿರೋದೇ ನಾನು. ಅದೇನ್ ಮಾಡ್ತೀಯೋ ಗೊತ್ತಿಲ್ಲ. ಇಪ್ಪತ್ತೈದು ಲಕ್ಷ ಬೇಕೇ ಬೇಕು'' ಎಂದಿದ್ದಾನೆ ಗೆಡ್ಡಾ.




ಅದಕ್ಕೆ ಕಿಂಚಿತ್ತೂ ಕಿಮ್ಮತ್ತು ಕೊಡದ ರವಿ "ನಿನ್ನ ಕೈಲಿ ಏನಾಗುತ್ತೋ ಮಾಡ್ಕೋ. ನನ್ನ ಕೈಲಾಗೋದನ್ನ ನಾನು ಮಾಡ್ತೀನಿ..!'' ಎಂದು ಬಿಟ್ಟ. ಅಲ್ಲಿಗೆ ಗೆಡ್ಡಾ ನಾಗ ನಿರ್ಧರಿಸಿಬಿಟ್ಟ. ಅಳ್ಳಾಲಸಂದ್ರದ ಶೇಖ್ರಿ, ಮೇಕೆ ಹರೀಶ, ಮೋಹನ, ವಾಕರ್; ಹೀಗೆ ಗೆಡ್ಡನ ಗರಡಿಯಲ್ಲಿ ಪಳಗಿದ ಹಂತಕ ತಂಡ ಅಣಿಯಾಗಿದೆ. ಹಾಗಂತ ರವಿ ಸಿಗಬೇಕಲ್ಲ. ಆತ ಸಲೀಸಾಗಿ ಸಿಗುವುದು ಒಂದೋ ದೇವಸ್ಥಾನ ಅದುಬಿಟ್ಟರೆ 'ಫಿಟ್‌ನೆಸ್ ವರ್ಲ್ಡ್' ಎಂಬ ಜಿಮ್ಮು ಎಂಬುದನ್ನು ಶೇಖ್ರಿ ಮೊದಲೇ ಪತ್ತೆಹಚ್ಚಿದ್ದ. ಜಿಮ್ಮಿನ ಮಾಲಿಕ ಮತ್ತೊಬ್ಬ ಹರೀಶ ಹೇಳಿಕೇಳಿ... ಶೇಖ್ರಿಗೆ ಪರಮಾಪ್ತ. ಬೆಳಿಗ್ಗೆ ಆರು ಗಂಟೆಯಾಗುತ್ತಿದ್ದಂತೆ ಜಿಮ್ಮಿಗೆ ಬಂದು ವ್ಯಾಯಾಮ ಮಾಡುತ್ತಿದ್ದ ಬುಲೆಟ್ ರವಿ ತನ್ನ ಜೊತೆ ಅಮೃತಹಳ್ಳಿಯ ಸೀನ ಮತ್ತು ಕೋಗಿಲು ಗ್ರಾಮದ ವಾಸುವನ್ನು ಕರೆತರುತ್ತಿದ್ದ. ಇದೆಲ್ಲವನ್ನೂ ಗಮನಿಸಿಯೇ ಸ್ಕೆಚ್ ಹಾಕಿದ್ದಾನೆ. ಹದಿನೈದು ದಿನಗಳ ಮೊದಲೇ ಮೇಕೆ ಹರೀಶ, ಮೋಹನ, ವಾ... ಇತ್ಯಾದಿ ಐದು ಮಂದಿ ಹುಡುಗರನ್ನು ವ್ಯಾಯಾಮಕ್ಕೆ ಬರುವವರಂತೆ ಜಿಮ್ಮಿಗೆ ಸೇರಿಸಿದ್ದಾನೆ.

ಬುಲೆಟ್ ರವಿ ಯಾಮಾರಿದ್ದೇ ಇಲ್ಲಿ. ಹೊ... ಹುಡುಗರು ಜಿಮ್ಮಿಗೆ ಸೇರಿದ್ದು ಮೊದಮೊದ... ಗುಮಾನಿ ಹುಟ್ಟಿಸಿದೆ. ಈ ಬಗ್ಗೆ ಜಿಮ್ ಮಾಲಿಕನನ್ನು ಗದರಿದ್ದಾನೆ. 'ಇಲ್ಲಾ ಗುರೂ ಯಾರೋ ಪಾಪದ ಹುಡುಗರು ಬರಲಿಬಿಡು...' ಎಂದಿದ್ದಾನೆ ಹರೀಶ. ಹೀಗೆ ದಿನಕ್ಕೊಬ್ಬರಂತೆ ಜಿಮ್ಮಿಗೆ ಸೇರಲಾರಂಭಿಸಿದ ಹುಡುಗರ ಸಂಖ್ಯೆ ಐದಾಗಿದೆ. ಬಹುಶಃ ಒಂದೇ ಸಲಕ್ಕೆ ಎಲ್ಲರೂ ಸೇರಿದ್ದರೆ ರವಿ ಹುಷಾರಾಗುತ್ತಿದ್ದ. ಒಬ್ಬೊಬ್ಬರಾ... ಮೂರ್‍ನಾಲ್ಕು ದಿನಗಳ ಅಂತರ ಕೊಟ್ಟು ಜಿಮ್... ಎಂಟ್ರಿಯಾದ ಹುಡುಗರ ಬಗ್ಗೆ ರವಿಗೆ ಡೌಟು ಬರಲೇ ಇಲ್ಲ.

ಅದು ಜುಲೈ 27 ರ ಸೋಮವಾರದ ಬೆಳಿಗ್ಗೆ ಆರು ಗಂಟೆಯ ಸಮಯ. ಮಾಮೂಲಿನಂತೆ ಜಿಮ್ಮಿಗೆ ಬಂದ ರವಿ ಬೆಂಚ್ ಪ್ರೆಸ್ಸಿನ ಮೇಲೆ ಮಲಗಿ ತೂಕ ಎತ್ತುವ ಕಸರತ್ತಿಗಿಳಿದ್ದಾನೆ. ಪಕ್ಕದಲ್ಲೇ ಅಮೃತಹಳ್ಳಿಯ ಸೀನನೂ ಮಲಗಿ ಭಾರ ಎತ್ತುತ್ತಿದ್ದ. ಜಿಮ್ಮಿನ ಹೊರಗೆ ನಿಂತು ಕಾಯುತ್ತಿದ್ದ ವಾಸು ಕಿವಿಗೆ ಕಿರುಚಾಟ ಕೇಳಿಸಿದೆ. ಧಾವಿಸಿ ಬಂದು ನೋಡಿದರೆ ಐದು ಮಂದಿ ಹಂತಕರು ಲಾಂಗ್ ಹಿಡಿದು ರವಿ ಮತ್ತು ಸೀನನನ್ನು ಕತ್ತರಿಸುತ್ತಿದ್ದರು. ಅ... ಹೊತ್ತಿಗಾಗಲೇ ಅವರಿಬ್ಬರ ಕಣ್ಣಿಗೆ ಕಾರದ ಪುಡಿ ಬಿದ್ದಿತ್ತು, ಮಲಗಿ ಎತ್ತಿದ ಭಾರವನ್ನು ಇಳಿಸುವ ಮೊದಲೇ ಹಂತಕ ತಂಡ ದಾಳಿಯಿಟ್ಟಿತ್ತು. ಸಲೀಸಾಗಿ ಏಳುವಂತಿಲ್ಲ, ಕಣ್ಣಿಗೆ ಖಾರದ ಪುಡಿ, ಎದೆಯ ಮೇಲೆ ಭಾರದ ಬೊಟ್ಟುಗಳು. ಇಂಥ ಪೈಶಾಚಿಕ ಸನ್ನಿವೇಶದಲ್ಲಿ ರಕ್ಷಣೆಗೆ ನುಗ್ಗಿದ ವಾಸುವನ್ನೂ ಹಂತಕ ತಂಡ ಹಿಡಿದು ಕತ್ತರಿಸಿದೆ. ಸೀನ ಮತ್ತು ರವಿ ಜಿಮ್ಮಿನ ಪ್ರೆಸ್‌ಬೆಂಚ್ ಮೇಲೆಯೇ ಹೆಣವಾದರೆ, ವಾಸು ಕೊಲಂಬಿಯಾ ಆಸ್ಪತ್ರೆಯಲ್ಲಿ ಬದುಕುಳಿದ.

ಯಲಹಂಕದ ಗ್ಯಾಂಗ್‌ವಾರ್‌ನ ಸುದೀರ್ಘ ಅಧ್ಯಾಯವೊಂದು ಈ ರೀತಿಯಾಗಿ ಪರಿಸಮಾಪ್ತಿಗೊಂಡಿದೆ. ಕೊಲೆಯಿಂದಲೇ ತನ್ನ ಸಾಮ್ರಾಜ್ಯ ಕಟ್ಟಿದ ಬುಲೆಟ್ ರವಿ ಕೊನೆಗೆ ಅದರಲ್ಲೇ ಮುಗಿದುಹೋದ. ಬಹುಶಃ ರಾಜಕೀಯದ ಹುಚ್ಚಿಗೆ ಬೀಳದೇ ಎಮ್ಮೆಲ್ಲೆ ವಿಶ್ವನಾಥ್‌ಗೆ ತಗ್ಗಿಬಗ್ಗಿನಡೆದಿದ್ದರೆ ಬದುಕಿರುತ್ತಿದ್ದನೋ ಏನೋ?



...ತ್ತಲ ರಾತ್ರಿ

...ಮರದ ರಸ್ತೆಯಲ್ಲಿ ತಂಪಿನೆಳಲ ಮಡಿಲಲ್ಲಿ ಮಲಗಿರುವ ನನ್ನೂರು
...ಕೆ ಗೊತ್ತಿರುವ ಸತ್ಯಗಳ ಗುಟ್ಟಾಗಿ ಮುಚ್ಚಿಟ್ಟುಕೊಂಡಿದೆ

...ಗೆ ನೀವು ಹೆಜ್ಜೆ ಇಡುವ ಮುನ್ನ ಸ್ವಲ್ಪ ನೋಡಿಕೊಂಡು ಹೆಜ್ಜೆ ಇಡಿ
...ಲ್ಲೋ ತುಂಬು ಯೌವನವೇ ಮುಳುವಾದ ತರುಣಿಯ
... ಬಟ್ಟೆ ಚಿಲ್ಲಾಪಿಲ್ಲಿಯಾಗಿರಬಹುದು
...ಮಾಡಿ ತುಳಿಯಬೇಡಿ
... ರಾತ್ರಿಯ ಕ್ರೌರ್ಯಕ್ಕೆ ಲೋಕ ಇತಿಹಾಸ ಸಾಕ್ಷಿ ಕೇಳುತ್ತದೆ

... ಬಿದ್ದಿರುವ ಬೀದಿಯನ್ನೊಮ್ಮೆ ಸುಮ್ಮನೆ ಮಾತನಾಡಿಸಿ
..., ನಾನು ಹೀಗೆಯೇ ಅನಾಥ ಬಿದ್ದಿದ್ದೆ, ಅನಾಹತ ಆರ್ತನಾದ ಕೇಳುತ್ತ
...ದು ಕತ್ತಲ ರಾತ್ರಿ
...ಮಕಳ ಅಂಗ ಅಂಗದಿಂದ ತೊಟ್ಟಿಕ್ಕಿದ ರಕ್ತ ಇಗೋ ಇಲ್ಲಿದೆ
... ಹಸಿಯಾಗಿದೆ'
...ಮುಂದೆ ಮಾಡಿ ಹಲಬುತ್ತದೆ
...ಮರದ ಪ್ರತಿ ಎಲೆಯ ಮೇಲೊಮ್ಮೆ ನೇವರಿಸಿ
...ದೋ ಆಕ್ರಂದನವೊಂದು ಗಹಗಹಿಸುತ್ತದೆ

...ಯ ಪ್ರತಿ ಸಂದಿಯಲೂ ಕಣ್ಣು ಹಾಯಿಸಿ
... ಗೋರಿಯಿಂದೆದ್ದ ಹೆಣ ಚೀತ್ಕಾರ ಧಾಟಿಯಲ್ಲಿ ಹಾಡುತ್ತವೆ
...ರುಷದ ದಾಂಡಿಗರ ಸಂಕಥನವ
... ಋತುವಿನಲರಳಿ ನಗುತ್ತಿದ್ದ ಹೂವಿನ
...ಚಿಂಡಿದವರ ಬೆಟ್ಟು ಮಾಡಿ ತೋರಿಸುತ್ತವೆ

...ಯ ಕಟ್ಟೆಯ ಮೇಲೊಮ್ಮೆ ಕುಳಿತು ನೋಡಿ
... ಕಲ್ಲು ಪಿಸುಗುಡುತ್ತಲೇ ತರಹೇವಾರಿ ಮಾತಿಗಿಳಿಯುತ್ತವೆ
... ಗೋಡೆ ಸಿಡಿಯುವ ಭಾಸ
...ಮಾರು ನೂರಾರು ಹರಕು ಚಿತ್ರ
...ಸಲಾಗದ ಕಳಂಕದ ಕುರುಹಾಗಿ ನರಳುತ್ತವೆ
... ವೇಗದಲ್ಲಿ ಏದುಸಿರಿಡುತ್ತಾ
...ಮೋ ಭಯಾನಕ ಸತ್ಯವ ಅನುರಣಿಸುತ್ತವೆ

...ಯ ಪಕ್ಕದ ದೀಪದ ಕಂಬವ
...ಮುಟ್ಟಿನೋಡಿ
... ಮೈಗಣ್ಣಿನಿಂದ ರಕ್ತಗಂಬನಿ ಹರಿಯುತ್ತದೆ

... ರಾತ್ರಿ
...ವರಿಗೂ ಗಂಡಸುತನ ಕೆರಳಿದ ರಾತ್ರಿ
... ಹೊದಿಕೆಯ ಅಳಿಗೊಬ್ಬರು ಹರಿದರು
... ಹೂವ ಕಚ್ಚಲು ಪ್ರತಿ ಹಲ್ಲೂ ಕೋರೆ ಹಲ್ಲೇ
... ಸಂದು ಸಂದಿನಲಿ ಒಣಖಾರ ತುಂಬಿದ ಕ್ರೌರ್ಯಕ್ಕೆ
...ಜ್ಜುಗಳೆಲ್ಲ ಒಂದು ಕ್ಷಣ ಗದ್ಗದಿಸಿ
...ಪ ಚಿಪ್ಪುಗಳಿಗೆ ಕ್ಯಾಕರಿಸಿ ಉಗುಳಿದರು
...ಗಳು ಚಿತ್ರಲೆಯ ಸಾರಿ ಹೇಳುತ್ತಿರುವಾಗ
... ಚಿತ್ರವಾಗಿ ನಿಂತಿತ್ತು

... ರಾತ್ರಿ ನೆನಪಾದರೆ
... ಊರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕೆನಿಸುತ್ತದೆ

... ಘಮುದ ನೆನಪು ತೆಗೆದು ಬಿಕ್ಕುತ್ತಿರುವ ನಾನು
...ರದಲ್ಲಿ ಆಯಾಸಗೊಂಡು ಮಲಗಿದ್ದೇನೆ
...! ಜಗತ್ತು ನನ್ನನ್ನೂ ಶವದಂತೆಯೇ ಕಾಣುತ್ತದೆ

... [illegible]
... ಬೆರೆತ ಬೂದಿ ಗೋರಿಯೊಳಡಗಿದ ಹೆಣದ ಜೊತೆ
... [illegible]
...ಡದ ಎದೆಯೊಳಗೆ ಬೆಳಕಿನ ಬೀಜವ ಹುಡುಕಬೇಕಿದೆ.

● ವೀರಣ್ಣ ಮಡಿವಾಳರ

(...ನಡೆದ ಈ ಕ್ರೌರ್ಯಕ್ಕೆ ಸಿಲುಕಿ ಈಗ ಪೊಲೀಸ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ದಮನಿತ ಸಹೋದರಿಗೆ ಈ ಕವಿತೆ ಅರ್ಪಿತ)

▶▶▶2 ಈ 'ಯುದ್ಧ'ಕ್ಕೆ ಸಾಕ್ಷಿಗಳಿಲ್ಲ!

ಒತ್ತಡದ ನಂತರ ಆ ಸಂಖ್ಯೆಯನ್ನು ಮೂರು ಲಕ್ಷಕ್ಕೇರಿಸಿದೆ. ಆದರೆ ನಿಜವಾಗಿ ನಿರಾಶ್ರಿತರಾಗಿರುವವರೆಷ್ಟು? ಈ ಪ್ರಶ್ನೆಗೆ ಸರ್ಕಾರವೂ ಉತ್ತರ ಕೊಡುವುದಿಲ್ಲ, ಸ್ವತಂತ್ರ ತಪಾಸಣೆಗೂ ಅವಕಾಶ ಮಾಡಿಕೊಡುವುದಿಲ್ಲ. ಹೀಗಾಗಿ ಶ್ರೀಲಂಕಾ ಸರ್ಕಾರದ ಪಾತಕದ ಪ್ರಮಾಣದ ಸಂಪೂರ್ಣ ಅಂದಾಜು ಸಿಗುವುದೇ ಇಲ್ಲ.

ತಮಿಳರ ಜನಸಂಖ್ಯೆಯನ್ನು ಕಡಿಮೆ ಮಾಡಲು ಮತ್ತೊಂದು 'ಸೃಜನಶೀಲ' ಯೋಜನೆ ತಮಿಳು ಯುವಕರ ಅಪಹರಣ. ವಿದೇಶಿ ಪತ್ರಕರ್ತರ ಪ್ರಕಾರ ದಿನಕ್ಕೆ ಏನಿಲ್ಲವೆಂದರೂ 200-300 ತಮಿಳು ಯುವಕರ ಅಪಹರಣವಾಗುತ್ತಿದೆ. ವಿಶ್ವಸಂಸ್ಥೆಯ ಪ್ರಕಾರವೂ ದಿನಕ್ಕೆ ಏನಿಲ್ಲವೆಂದರೂ 40 ತಮಿಳು ಯುವಕರು ಶಿಬಿರಗಳಿಂದ ರಾತ್ರೋರಾತ್ರಿ ಕಣ್ಮರೆಯಾಗುತ್ತಿದ್ದಾರೆ. ಒಂದು ತಮಿಳು ಯುವಕರ ಸಂಖ್ಯೆಯೇ ಕಡಿಮೆಯಾಗುತ್ತಿದೆ. ಹೀಗೆ ತಮಿಳು ಜನಾಂಗದಲ್ಲಿ ಯುವಕರ ಸಂಖ್ಯೆಯೇ ಕಡಿಮೆಯಾಗಿ ವೃದ್ಧರು ಮತ್ತು ಮಹಿಳೆಯರು ಮಾತ್ರ ಸಿಂಹಳೀಯ ಸೇನೆಯ 'ರಕ್ಷಣೆ'ಯಲ್ಲಿ ಉಳಿದುಕೊಳ್ಳುತ್ತಾರೆ. ಈ ಯೋಜನೆಯ ಹಿಂದಿರುವ ಉದ್ದೇಶ ಮತ್ತು ಪರಿಣಾಮ ಯಾರ ಊಹೆಗಾದರೂ ನಿಲುಕಬಹುದಾದ ವಿಷಯ.



ಕಾನ್ಸೆಂಟ್ರೇಷನ್ ಕ್ಯಾಂಪ್‌ಗಳಂತಿರುವ 'ವೆಲ್‌ಫೇರ್ ವಿಲೇಜ್'ಗಳು: ತಮಿಳು ನಿರಾಶ್ರಿತರನ್ನು ದೂಡಲಾಗಿರುವ ಕ್ಯಾಂಪ್‌ಗಳನ್ನು ಶ್ರೀಲಂಕಾ ಸರ್ಕಾರ 'ವೆಲ್‌ಫೇರ್ ವಿಲೇಜ್- ಜನಕಲ್ಯಾಣ ಗ್ರಾಮ' ಎಂದು ಕರೆಯುತ್ತದೆ. ಈ ಹೆಸರಿಗೆ ಮೋಹಗೊಂಡ ಎನ್. ರಾಮ್‌ನಂಥ ಪತ್ರಕರ್ತರು ಈ ಶಿಬಿರಗಳನ್ನು ಹೊಗಳಾಡುತ್ತಿದ್ದಾರೆ. ಆದರೆ ಕ್ರಮೇಣವಾಗಿ ಹೊರಬರುತ್ತಿರುವ ವರದಿಗಳು ಈ ಶಿಬಿರಗಳು ಹಿಟ್ಲರ್‌ನ ಕಾನ್ಸೆಂಟ್ರೇಷನ್ ಕ್ಯಾಂಪುಗಳೆಂದು ಸಾರಿ ಹೇಳುತ್ತಿವೆ. ಈ ನಿಜಾಂಶವನ್ನು ಬಯಲಿಗೆಳೆದ 'ರೆಡ್‌ಕ್ರಾಸ್'ನಂತ ಸಂಸ್ಥೆಗಳು ಶ್ರೀಲಂಕಾದಲ್ಲಿ ತಮ್ಮ ಕಾರ್ಯಾಚರಣೆ ನಿಲ್ಲಿಸಿ ದೇಶ ಬಿಟ್ಟು ಹೋಗಬೇಕೆಂದು ಸರ್ಕಾರ ಆದೇಶಿಸಿದೆ.

ಕಳೆದ ಜುಲೈ 19ರಂದು ಎಪಿ ವಾರ್ತಾ ಸಂಸ್ಥೆ ನೀಡಿರುವ ವರದಿಯ ಪ್ರಕಾರ ಇಡೀ ಕ್ಯಾಂಪುಗಳಲ್ಲಿ "ವಿಶ್ವಸಂಸ್ಥೆಯ ಅಧೀನ ಸಂಸ್ಥೆಗಳ ವರದಿಯ ಪ್ರಕಾರ ಈ ಶಿಬಿರಗಳಲ್ಲಿ ಟೈಫಾಯಿಡ್, ಟಿಬಿ, ಸಿಡುಬು, ಶ್ವಾಸಕೋಶದ ಸಮಸ್ಯೆಗಳು, ಹೆಪಟೈಟಿಸ್-ಎ, ಸ್ಕ್ಯಾಬಿಸ್, ಬೇಧಿ ಇನ್ನಿತರ ಹಲವಾರು ಕಾಯಿಲೆಗಳು ತೀವ್ರವಾಗಿ ವ್ಯಾಪಿಸುತ್ತಿವೆ. ಜುಲೈ 3ರ ಸರ್ಕಾರಿ ಹೇಳಿಕೆಯ ಪ್ರಕಾರವೇ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.35ರಷ್ಟು ಮಕ್ಕಳು ಅಪೌಷ್ಟಿಕತೆ ಮತ್ತು ದೇಹಕ್ಷೀಣತೆಯಂತ ಕಾಯಿಲೆಗಳಿಂದ ನರಳುತ್ತಿವೆ."

ಈ ಶಿಬಿರಗಳಲ್ಲಿ ಐದು ಜನಕ್ಕೆ ಮಾಡಿರುವ ಟೆಂಟುಗಳಲ್ಲಿ 15ಕ್ಕೂ ಹೆಚ್ಚು ಜನರು ವಾಸ ಮಾಡುತ್ತಿದ್ದಾರೆ. ಕೇವಲ ನಾಲ್ಕು ಅಡಿ ಎತ್ತರದ ಎಂಟು ಅಡಿ ಅಗಲದ ಈ ಟೆಂಟುಗಳಿರುವ ಜಾಗವನ್ನು ಬಿಟ್ಟು ಯಾರೂ ಹೊರಗೆ ಹೋಗುವ ಹಾಗಿಲ್ಲ, ಯಾರೂ ಹೊರಗಿನಿಂದ ಬರುವಂತಿಲ್ಲ, ಇತರ ಶಿಬಿರಗಳಲ್ಲಿ ಬದುಕುಳಿದ ತಮ್ಮ ಸಂಬಂಧಿಕರನ್ನು ಭೇಟಿ ಮಾಡುವಂತಿಲ್ಲ. ವನ್ನಿಯ ತಗ್ಗು ಪ್ರದೇಶಗಳಲ್ಲಿರುವ ಈ ಶಿಬಿರಗಳು ಜವಗು ಹಾಗೂ ಕೆಂಪು ಮಣ್ಣಿನ ಮೇಲಿದೆ. ಇನ್ನೇನು ಮುಂದಿನ ತಿಂಗಳಿಂದ ಅಲ್ಲಿ ಮಾನ್ಸೂನ್ ಮಳೆ ಪ್ರಾರಂಭವಾಗಲಿದೆ. ಹೀಗಾಗಿ ಮಳೆಗಾಲವು ಕ್ಯಾಂಪಿನಲ್ಲಿ ಸೃಷ್ಟಿಸಬಹುದಾದ ಅನಾಹುತ ಅತ್ಯಂತ ಭೀಕರವಾಗಲಿದೆ. ಇದನ್ನು ತಡೆಗಟ್ಟಲು ಶ್ರೀಲಂಕಾ ಸರ್ಕಾರ ಉದ್ದೇಶಪೂರ್ವಕವಾಗಿ ಯಾವುದೇ ಕ್ರಮತೆಗೆದುಕೊಳ್ಳುತ್ತಿಲ್ಲ. ಇದು ತಮಿಳು ಜನಸಂಖ್ಯೆಯನ್ನು ಯೋಜಿತವಾಗಿ ಕಡಿಮೆ ಮಾಡಲು ರಾಜಪಕ್ಸೆ ಸರ್ಕಾರ ತೆಗೆದುಕೊಳ್ಳುತ್ತಿರುವ ಮತ್ತೊಂದು 'ಸೃಜನಶೀಲ' ಕಾರ್ಯಕ್ರಮವಾಗಿದೆ!

ಭಾರತ ಸರ್ಕಾರ ಈ ಎಲ್ಲಾ ಜನಾಂಗೀಯ ನರಮೇಧದ ಯೋಜನೆಗಳಿಗೆ ಸಕ್ರಿಯ ಬೆಂಬಲ ಕೊಡುತ್ತಿದೆ. ಎಲ್‌ಟಿಟಿಇಯ ವಿರುದ್ಧದ ಯುದ್ಧಕ್ಕೆ ಆಗ ಹಣಕಾಸು ಮತ್ತು ಬೇಹುಗಾರಿಕಾ ನಕ್ಷೆಗಳನ್ನು ಒದಗಿಸಿದಂತೆ ಈಗ ಅಮಾಯಕ ತಮಿಳರ ಮೇಲಿನ ಯುದ್ಧಕ್ಕೆ ಈ ಬಜೆಟ್ಟಿನಲ್ಲೂ 500 ಕೋಟಿ ರೂ. ಹಣಕಾಸು ನೆರವು ಒದಗಿಸಿದೆ. ಕನಿಷ್ಠ ಪಕ್ಷ ಕ್ಯಾಂಪುಗಳ ಪರಿಸ್ಥಿತಿ ಸುಧಾರಿಸಬೇಕೆಂಬ ಶರತ್ತನ್ನೂ ಹಾಕದೆ ಕೊಟ್ಟಿರುವ ಈ ಹಣ ತಮಿಳರ ಯೋಜಿತ ನರಮೇಧಕ್ಕೆ ಬಳಕೆಯಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಭಾರತ ಸರ್ಕಾರ ಮಾತ್ರವಲ್ಲ, ಎನ್. ರಾಮ್ ಮತ್ತು ಎಮ್. ಎಸ್. ಸ್ವಾಮಿನಾಥನ್‌ರಂಥ ನಾಗರಿಕ ಸಮಾಜದ ಗಣ್ಯರೂ ರಾಜಪಕ್ಸೆಯ ಸರ್ಕಾರಕ್ಕೆ ಕ್ಲೀನ್ ಚಿಟ್ ಕೊಡುತ್ತಾ ರಾಜಪಕ್ಸೆಯ ಕರಾಳತೆಗೆ ನೈತಿಕ ಬೆಂಬಲವನ್ನೂ ಒದಗಿಸುತ್ತಿದ್ದಾರೆ. ಒಂದರ್ಥದಲ್ಲಿ ನಾಗರಿಕ ಸಮಾಜದ ಈ ಮೌಲಿಕ ಅಧಃಪತನ ಈ ಯುದ್ಧದ ಬಹುದೊಡ್ಡ ಕೊಲ್ಯಾಟರಲ್ ಡ್ಯಾಮೇಜು!

ಯಾವುದೇ ಯುದ್ಧಕ್ಕೆ ಇರುವ ಪ್ರತ್ಯಕ್ಷ ಸಾಕ್ಷಿಗಳನ್ನೆಲ್ಲಾ ಒಂದು ಫ್ಯಾಸಿಸ್ಟ್ ಸರ್ಕಾರ ಕೊಂದು ಹಾಕಬಹುದು ಅಥವಾ ಖರೀದಿಸಬಹುದು. ಆದರೆ ಅವೆಲ್ಲವೂ ತಾತ್ಕಾಲಿಕ. ಏಕೆಂದರೆ ಒಂದು ಸಮಾಜದ ಅಂತಸಾಕ್ಷಿ ಮತ್ತು ನ್ಯಾಯಪ್ರಜ್ಞೆ ಎಲ್ಲಿಯವರೆಗೆ ಜಾಗೃತವಾಗಿರುತ್ತದೋ ಅಲ್ಲಿಯವರೆಗೆ ಫ್ಯಾಸಿಸಂನ ವಿಜಯ ತಾತ್ಕಾಲಿಕ. ಆದರೆ ಈ ಯುದ್ಧ ಸಿಂಹಳಿಯ ಮತ್ತು ಭಾರತೀಯ ಸಮಾಜದ ಅಂತಸಾಕ್ಷಿಯನ್ನೇ ಕೊಂದುಹಾಕು ತ್ತಿರುವಂತೆ ಕಾಣುತ್ತಿದೆ. ಒಂದು ವೇಳೆ ಯುದ್ಧದಲ್ಲಿ ರಾಜಪಕ್ಸೆ ಸರ್ಕಾರ ಗೆದ್ದಲ್ಲಿ ಆಗ ಸೋಲುವುದು ಶ್ರೀಲಂಕಾ ತಮಿಳರು ಮಾತ್ರವಲ್ಲ, ಅದು ಮಾನವತೆಯ, ಪ್ರಜಾತಂತ್ರದ ಸೋಲಾಗಿರುತ್ತದೆ. ಹಾಗಾಗದಂತೆ ನಾವೇನು ಮಾಡಬಹುದು?

ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವೆಬ್‌ಸೈಟುಗಳನ್ನು ಮತ್ತು ಪತ್ರಿಕೆಗಳನ್ನು ನೋಡಬಹುದು:

www.southasiaspeaks.wordpress.com
www.onevoiceindia.com ●

ರಹಮತ್ ಪತ್ರಕ್ಕೆ ಒಂದು ಪೂರಕ ಪ್ರತಿಕ್ರಿಯೆ

ಒಂದು ಪತ್ರ

ರಹಮತ್ ತರೀಕೆರೆ ಅವರ ಪತ್ರ ನಮ್ಮೆಲ್ಲರ ದುಗುಡಕ್ಕೆ ಅಭಿವ್ಯಕ್ತಿ ನೀಡಿದೆ. ಅವರ ವಿಶ್ಲೇಷಣೆ ಕ್ರಿಯಾಶೀಲವಾಗಲು ಒಂದೆರಡು ಪೂರಕ ಟಿಪ್ಪಣಿಗಳು.

1. ಅಧ್ಯಾಪಕ ಸಮುದಾಯ ಅವರು ಭಾವಿಸಿದಂತೆ ಚಹರೆಯಿಲ್ಲದ ಅಮೂರ್ತ ಕಲ್ಪನೆ ಎಂದು ನನಗನ್ನಿಸುತ್ತಿಲ್ಲ. ಆಯಾ ವಿ.ವಿ.ಗಳ ಅಧ್ಯಾಪಕರ ಸಂಘಗಳಿವೆಯಲ್ಲಾ, ಅವೆಲ್ಲಾ ಏನು? ಅರ್ಥಶಾಸ್ತ್ರ ಅಧ್ಯಾಪಕರ ಸಂಘ ಇತ್ಯಾದಿ ಸಬ್ಜೆಕ್ಟ್ ಆಧಾರಿತ ಸಂಘಗಳೆಲ್ಲಾ ಏನು? ಮೌಲ್ಯಮಾಪನಕ್ಕೆ ಕಾಸು ಸಾಲದು ಎಂದು ಪ್ರತೀ ವರ್ಷ ವರಾತ ತೆಗೆಯುವವರಾರು?

   ನಿಜ ಹೇಳಬೇಕೆಂದರೆ, ಅಧ್ಯಾಪಕರ ಸಮುದಾಯ ಮುಖೇಡಿಗಳ ಸಂಘವಾಗಿದೆ, ಅಷ್ಟೇ.
2. ಪಟ್ಟಾಭಿರಾಮ ಸೋಮಯಾಜಿ ತರಹದ ಪ್ರಕರಣಗಳಲ್ಲಿ, ಸಹೋದ್ಯೋಗಿಗಳೇ ಸಾಲಿಡಾರಿಟಿ ತೋರದಿದ್ದರೆ, ಸಮಾಜ ಹೇಗೆ ತಾನೇ ಗಮನಿಸೀತು, ಅದನ್ನು ನಾವಾದರೂ ಯಾಕೆ ನಿರೀಕ್ಷಿಸಬೇಕು?
3. ಈಗ ಇಂಥಾ ಸಾಲಿಡಾರಿಟಿ ತೋರಬಲ್ಲ ಅಧ್ಯಾಪಕರ ಸಂಘದ ಅವಶ್ಯಕತೆ ಇದೆ. ರಹಮತ್ ಅವರೇ ಈ ನಿಟ್ಟಿನಲ್ಲಿ ಕ್ರಿಯಾಶೀಲರಾಗಬೇಕೆಂದು ವಿನಂತಿಸುವೆ.
4. ನಾನು ಓದುತ್ತಿರುವಾಗ, ಪಟ್ಟಾಭಿ ತರಹವೇ ಲೇಖಕ ಯು.ಆರ್. ಅನಂತಮೂರ್ತಿಯವರ ಮೇಲೂ ಮೈಸೂರು ವಿ.ವಿ. ಇದೇ ತರ ಏನೋ ತನಿಖೆ ಶುರುಮಾಡಿತ್ತು, ಆಗ ಮೈಸೂರು ವಿ.ವಿ. ಅಧ್ಯಾಪಕರ ಸಂಘದ ಅಧ್ಯಕ್ಷರಾಗಿದ್ದ ರಾಮದಾಸ್ ಅವರು ಅನಂತಮೂರ್ತಿಯವರ ಪರವಾಗಿ ವಿ.ವಿ ವಿರುದ್ಧ ಹೋರಾಟಕ್ಕಿಳಿದಿದ್ದರು. ಆ ಕಾರಣವೂ ಸೇರಿ ವಿ.ವಿ. ತೆಪ್ಪಗಾಗಿತ್ತು, ಆ ಟೈಮಿನಲ್ಲಿ, ಅನಂತಮೂರ್ತಿ ಬಗ್ಗೆ ರಾಮದಾಸ್‌ಗೆ ಸೈದ್ಧಾಂತಿಕ ಭಿನ್ನಮತವೂ, ಖಾಸಗಿಯಾಗಿ ಜಿಗುಪ್ಸೆಯೂ ಇತ್ತು, ಆದರೂ, "ಅದೆಲ್ಲಾ ಬೇರೆ, ಹಕ್ಕಿನ ದಮನದ ಪ್ರಶ್ನೆ ಬಂದಾಗ ದೂಸ್ರ ಇರೋ ಮಾತೇ ಇಲ್ಲ" ಎಂದಿದ್ದರು ರಾಮದಾಸ್.
5. ವ್ಯಾಖ್ಯಾನ ಸಾಕಷ್ಟು ಆಗಿದೆ, ಈಗ ನಾವು ಜಗತ್ತನ್ನು ಬದಲಾಯಿಸಬೇಕಾಗಿದೆ ಎಂಬ ಕಾರ್ಲ್‌ಮಾರ್ಕ್ಸ್‌ನ ಹೇಳಿಕೆ ಈ ಸಂದರ್ಭದಲ್ಲಿ ಸುಸಂಬದ್ಧ ಅಲ್ಲವೇ? ಪಟ್ಟಾಭಿ ಬಗ್ಗೆ ಸಹಮತ ಇರುವಾಗಲೂ ಓಕೆ ಅಗಿ ವಿ.ವಿಯನ್ನು ಖಂಡಿಸಿ ಹೇಳಿಕೆ ನೀಡಲು ಏನು ಅಡ್ಡಿ?
6. ರಹಮತ್ ಅವರ ಅಪಾರ ಕಾಳಜಿಯ ವಿಶ್ಲೇಷಣೆ, ಅವರ ಮತ್ತು ಇತರ ಅಧ್ಯಾಪಕ ಮಿತ್ರರ ಕ್ರಿಯಾಶೀಲ ಹೆಜ್ಜೆಗೆ ಪೀಠಿಕೆ ಎಂದು ಭಾವಿಸುತ್ತೇನೆ.

- ಕೆ.ಪಿ.ಸುರೇಶ, ಬೆಂಗಳೂರು

ಲಂಕೇಶ್

ಹಾಸ್ಯ ಲೇಖನ

ಗನ್ ಸರೆಂಡರ್



"ಎತ್ತ.. ಶಿಕಾರಿಗೆ ಹೋಗಿದ್ರಾ...?" ಎಂದು ನಾನು ಸೋಮಪ್ಪ ಗೌಡನಲ್ಲಿ ಕೇಳಿದೆ. ಆ ಪ್ರಶ್ನೆಯೂ ಅಸಂಬದ್ಧವೇ. ಬೆಳಗ್ಗೆ ಎಂಟೂವರೆ ಗಂಟೆಗೆ ಶುಚಿರ್ಭೂತನಾಗಿ; ಎಣ್ಣೆ ತೀಡಿದ ಕ್ರಾಪು, ಸ್ವಚ್ಛ ಬಟ್ಟೆಯಲ್ಲಿ ಎದುರಾಗುವ ರೈತ, ಶಿಕಾರಿಯಿಂದ ಮರಳಲು ಸಾಧ್ಯವೇ?

"ಟೇಶನ್ನಿಗೆ.." ಎಂದ. ನಾನು ಹುಬ್ಬೇರಿಸಿದೆ.

"ಏ.. ಕ್ರಿಮಿನಲ್ ಎಂತ ಇಲ್ಲಪ್ಪ.... ಬೆಡಿ ಇಡ್ಲಿಕ್ಕೆ..." ಎಂದ. ಈ ಮಾಮೂಲಿ ವಾರ್ಷಿಕ ಆಚರಣೆಯೂ ನನಗೆ ಹೊಳೆಯಲಿಲ್ಲ ಎಂದು ವಿಷಾದ ಸೂಚಿಸಿದೆ.

"ಎಂತ ಕರ್ಮ ಅಯ್ಯ? ಇದು..." ಎಂದು ಗೊಣಗಿದೆ. ಕುಕ್ಕುಜಡ್ಕ ತಲುಪಿದರೆ ಅಲ್ಲಿ ಆಗಲೇ ಡಜನ್ ಬಂದೂಕುಧಾರಿಗಳು ಠಳಾಯಿಸುತ್ತಿದ್ದರು. ಬಿಳಿಪಂಚೆ, ಕೈ ಮಡಿಸಿದ ಅಂಗಿ, ಸೊಂಟಕ್ಕೆ ಕಾಲರಿಗಂಟಿಸಿದ ಕರ್ಚೀಫು ಧರಿಸಿದ ಇವರ್‍ಯಾರ ಮುಖದಲ್ಲೂ ಶಿಕಾರಿಯ ಗತ್ತಾಗಲಿ, ಯೋಧನ ಸೆಡವಾಗಲಿ ಕಾಣಿಸಲಿಲ್ಲ. ತಪ್ಪು ಮಾಡಿದ ಮಕ್ಕಳೊಂದಿಗೆ ಶಾಲೆಗೆ ಹೋಗಬೇಕಾದ ಹೆತ್ತವರ ಹಾಗೆ ಕಾಣಿಸಿದರು.

ಪ್ರತಿವರ್ಷ ಎಲ್ಲಾ ಬಂದೂಕುಗಳನ್ನು ಸ್ಟೇಷನ್ನಿಗೊಯ್ದು ಅಲ್ಲಿ ಅದರ ಜಾತಕ ಬರೆಸಿ, ಬಂದೂಕು ಡೆಪೊಸಿಟ್ ಮಾಡಿ ಎಂಡೋರ್ಸ್‌ಮೆಂಟ್ ತೆಗೆದುಕೊಳ್ಳುವುದು, ಅದರ ವರದಿ ಲೆಕ್ಕ ಪೂರ ಮೇಲಿನವರೆಗೂ ಕಳಿಸಿ, ಚುಕ್ತಾ ಆದ ಮೇಲೆ ವಾಪಸ್ ತೆಗೆದುಕೊಂಡು ಬರುವುದು. ಇದು ಅನೂಚಾನವಾಗಿ ಪಾಲಿಸಿಕೊಂಡು ಬಂದ ಸಂಪ್ರದಾಯ.

ಆದರೆ ಇದು ಹೇಳಿದಷ್ಟು ಸರಳವಲ್ಲ. ಬಂದೂಕು ಸರೆಂಡರ್ ಮಾಡುವುದೇ ಒಂದು ಮಾನಸಿಕ ತುಮುಲದ ವಿಚಾರ.

ಮನೆಯಲ್ಲಿ ಬಂದೂಕು ಎತ್ತಿ ಅದರ ನಳಿಗೆ ಶುದ್ಧ ಮಾಡಿ, ಮುರಿದು, ಉಫ್ ಎಂದು ಊದಿ, ಎಣ್ಣೆ ಉಜ್ಜಿ ಕುದುರೆ ಎಳೆದು.. ದೂರದ ತೆಂಗಿನ ಮರದ ಪುಟ್ಟ ಕಾಯಿಗೆ ಗುರಿಯಿಟ್ಟು, ಗುರಿ ಸರಿಯಾಗಿದೆ ಎಂಬ ಗತ್ತಿನಲ್ಲಿ ಬಂದೂಕು ಎತ್ತಿ.. ಅದರ ಸಡಗರವೇ ಬೇರೆ. ಅದು ಕೊಡುವ ಪುರುಷತ್ವದ ಹೆಮ್ಮೆಯನ್ನು ಯಾವ ಅಶ್ವಗಂಧವೂ ನೀಡದು. ಆಸ್ತಿ ಗಡಿ, ನೀರಿನ ವಿವಾದದಲ್ಲಿ "ನೋಡುವ ಹಾಗಿದ್ರೆ, ನಾನು ಎರಡು ಕೋಟಾ ಖರ್ಚು ಮಾಡಲಿಕ್ಕೂ ಹೆದರುವವನಲ್ಲ" ಎಂಬ ಡಯಲಾಗ್ ಇದ್ದದ್ದೇ.. ಹಾಗೆಂದು ಇದೇ ವರ್ಷದಲ್ಲಿ, ಇದೇ ತಾಲೂಕಲ್ಲಿ ಒಂದೋ ಎರಡೋ ಈ ಪೌರುಷ ಪ್ರದರ್ಶನದ ಕೇಸುಗಳು ಜರುಗಿದರೆ ಹೆಚ್ಚು.

ಆದರೂ ಈ ಗನ್ ಸರೆಂಡರ್ ಮಾಡಲು ಹೊರಟ ಪರಸ್ಪರ ಮಾತನಾಡಿಸಿದರೆ, ಸಂತಾನ ಹರಣ ಶಸ್ತ್ರಚಿಕಿತ್ಸೆಗೆ ಒಳಗಾದವರ ಹಾಗೆ ಮುಜುಗರಕ್ಕೊಳಗಾಗುತ್ತಾರೆ.

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂದು ಕೂಗಿದವರು ಈ ಸರೆಂಡರ್ ಜಾತ್ರೆ ನೋಡಿರಲಾರರು. ಈ ಕೋವಿಧಾರಿಗಳು ಮನಸು ಮಾಡಿದರೆ ಸ್ಟೇಶನ್ನೇನು, ತಾಲೂಕಿನ ಯಾವುದೇ ಸರ್ಕಾರಿ ಕಚೇರಿಯನ್ನಾದರೂ ಅಲ್ಲಾಡಿಸಿಬಿಡಬಹುದು. 'ಬಂದೂಕು ತುದಿಯಿಂದ ಬದಲಾವಣೆ' ಎಂದು ಕನಸು ಕಾಣುವ ಮಂದಿಯ ಭ್ರಮೆ ಹರಿಯಲು ಈ ಜಾತ್ರೆಯ ಒಂದು ಫೋಟೋ ಸಾಕು. ಮನೆಯಲ್ಲಿ ಮೀಸೆ ತಿರುವಿ, "ಇಕಾ.. ನಾನು ಬೇಟೆಗೆ ಹೋಗಿ ಬರ್ತೇನೆ.. " ಎಂದು ಎದೆ ಉಬ್ಬಿಸಿ ಹೇಳಿ ನಡೆವ ಗಂಡಸೂ ಸ್ಟೇಷನ್ನಲ್ಲಿ ಮೂರು ಮೊಳದ ಹುಳುವಾಗಿರುತ್ತಾನೆ.

ಸ್ಟೇಷನ್ನೊಳಗೆ ಪೀಸಿಗಳು ಈ ಶಸ್ತ್ರಗಳನ್ನು ಅಕ್ಷರಶಃ ಗುಜರಿ ಮಾಪಿಳ್ಳೆಯ ನಿರ್ಲಕ್ಷದಲ್ಲಿ ನೋಡುವುದು ಇನ್ನೂ ಅವಮಾನಕಾರಿ - "ಬಂದೂಕು ಹಿಡಿದುಕೊಂಡು ಕ್ಯೂನಲ್ಲಿ ನಿಲ್ಲಬೇಕು..", "ಎಂತ ಹೆಸರು.. ? ವಿಲೇಜೂ..? ಲೈಸನ್ಸ್.. ? ಬಿಲ್..?" ಎಂದೆಲ್ಲ ಪೀಸಿ ಕೇಳಿದ್ದಕ್ಕೆ ಉತ್ತರಿಸಿ, ಬಂದೂಕು ಯಾವ ಸ್ಥಿತಿಯಲ್ಲಿದೆ ಎಂದೂ ಹೇಳಬೇಕು.

ದಿಂಡಾಳುಗಳು, ಪೊದೆ ಮೀಸೆ ಹೊತ್ತ ಪುರುಷ ಸಿಂಹಗಳು, ದೂಸರಾ ಮಾತಿಗೇ ಗುರ್ರೆನ್ನುವ ಜಮೀನುದಾರರು, ಈ ಸಾಲಿನಲ್ಲಿ ಆತಂಕ, ಕಾತರದಿಂದ ಕಾಯುತ್ತಾ ನಿಂತಿರುತ್ತಾರೆ. ಬಿದಿರ ಗಳದಂತಿರುವ ಪೀಸಿಯೂ, ಇವರನ್ನು ಹುಬ್ಬಲ್ಲೇ ಕರೆದು, ಎಡಗೈ ತೋರುಬೆರಳಲ್ಲೇ ಸೈನ್ ಮಾಡಲು ಸೂಚಿಸಿ, ಅದೇ ಹೆಬ್ಬೆರಳಲ್ಲಿ ಬೆನ್ನಹಿಂದಿನ ಗೋಡೌನ್ ಕೋಣೆಗೆ ನಿರ್ದೇಶಿಸುವುದನ್ನು ಕಂಡರೆ, ಪ್ರಭುತ್ವದ ಶಕ್ತಿಯೂ, ಕೋವಿಯ ನಿಶ್ಯಕ್ತಿಯೂ ಮನದಟ್ಟಾಗುವುದು.

ಇಷ್ಟಾದ ಮೇಲೆ, ಅವುಗಳನ್ನು ರಾಶಿ ಹಾಕುವ ಬಗೆ ನೋಡಿದರೆ ಮನ ಕಲಕುತ್ತದೆ. ಅಂಥಾ ಮೂರಡಿ ಪುರುಷಾಕಾರದ ಕೋವಿಗಳು ಸರ್ಕಾರಿ ಶಾಲೆಯ ಸ್ಪೋರ್ಟ್ಸ್ ರೂಮಿನ ಹಾಕಿಸ್ಟಿಕ್, ಬ್ಯಾಟು, ವಿಕೆಟುಗಳ ಹಾಗೆ ಎಲ್ಲೋ ಮೂಲೆಯಲ್ಲಿ ಬೀಳುವ ಸಾಧ್ಯತೆ ಇದೆ. ಸ್ವತಃ ಕೋವಿಗೇ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಅವಮಾನಕಾರಿ ಹಂತ ಇದು.

ನಿಜವಾದ ಸಮಸ್ಯೆ ಶುರುವಾಗುವುದು ಆ ದಿನದಿಂದ. ಈ ಗನ್ ಸರೆಂಡರ್ ಮಾಡುವ ದಿನಾಂಕ ಅಷ್ಟು ನಿಖರವಾಗಿ ಕಾಡುಹಂದಿಗಳಿಗೂ, ಕೋತಿಗಳಿಗೂ ಹೇಗೆ ಗೊತ್ತಾಗುತ್ತದೋ ದೇವರಿಗೇ ಗೊತ್ತು. ಅವುಗಳಿಗೆ ಪೊಲೀಸರು ಇದನ್ನು ತಿಳಿಸುವ ಸಾಧ್ಯತೆ ಕಡಿಮೆ. ಅರಣ್ಯ ಇಲಾಖೆಯಿಂದ ಲೀಕ್ ಆಗಿರುತ್ತದೆ ಎಂಬ ಗುಮಾನಿ ಕೆಲವು ರೈತರಿಗಿದೆ. ಓದಲು ಬರುವ ಕೋತಿಗಳು ನಮ್ಮಲ್ಲಿ ಅಪರೂಪವಾದ ಕಾರಣ ಈ ಗುಮಾನಿಯನ್ನು ನಾನು ಅನುಮೋದಿಸಿಲ್ಲ.

ಕೋವಿ ಮನೆಯಲ್ಲಿರುವಷ್ಟೂ ದಿನ, ಮುಟ್ಟಾದ ಹೆಂಗಸರು ದೇವಸ್ಥಾನದ ಹೊರಗೇ ನಿಂತು ಆಸೆಕಂಗಳಲ್ಲಿ ಪೂಜೆ ನೋಡುವ ಹಾಗೆ, ಈ ಪ್ರಾಣಿಗಳು ತೋಟದ ಬೇಲಿಯಾಚೆ ಸುತ್ತಿ ಸುಳಿದು ಕಾಲಯಾಪನೆ ಮಾಡುತ್ತವೆ. ತೋಟದೊಳಗಿನ ಬಾಳೆ, ಅಡಿಕೆ ಗಿಡಗಳು, ಸುವರ್ಣಗೆಡ್ಡೆ ಇವನ್ನೆಲ್ಲಾ ಕಡುಹಂದಿಗಳು ಆರ್ತವಾಗಿ ನೋಡುತ್ತಾ ದುಃಖಿಸಿದರೆ, ಬಾಳೆಗೊನೆ, ಕೊಕೊ, ಎಳನೀರು ಮುಂತಾದವುಗಳನ್ನು ಕಂಡು ಕೋತಿಗಳು ಮಮ್ಮಲ ಮರುಗುತ್ತಿರುತ್ತವೆ.

ಆದರೆ, ಗನ್ ಸರೆಂಡರ್ ಮಾಡಿದ ದಿನವೇ ಅವು ಈ ನಿಷೇಧಾಜ್ಞೆ ಉಲ್ಲಂಘಿಸಿ ತೋಟಕ್ಕಿಳಿಯುವ ಬಗೆ ನನಗೆ ಸೋಜಿಗ ತರಿಸಿದೆ.

'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ' ಎಂಬ ಗಾದೆ ಅರ್ಥವಾಗಬೇಕೆಂದಿದ್ದರೆ, ಈ ಗನ್ ಸರೆಂಡರ್ ಅವಧಿಯಲ್ಲಿ ಮಲೆನಾಡಿನ ತೋಟಗಳನ್ನು ನೋಡಬೇಕು.

ಕಳಿತ ಗೊಬ್ಬರದಲ್ಲಿ ಮೊಳೆತ ಹೊಸ ಬೇರು, ಅಲ್ಲಿ ಹೊರಳಾಡುವ ಎರೆಹುಳಗಳನ್ನು ತಿನ್ನಲು ಕಾಡುಹಂದಿಗಳು ಗೊಬ್ಬರವನ್ನು ಪೂರಾ ಅಡಿಮೇಲು ಮಾಡಿ, ದಾಂಧಲೆ ಎಬ್ಬಿಸುತ್ತವೆ. ಬಾಳೆಕಂದುಗಳಂತೂ ಛಿದ್ರಛಿದ್ರ. ತೋಟವಿಡೀ ಉತ್ತು, ಬಿಸಾಕಿ, ಗುಂಡಾರವೆಬ್ಬಿಸುವ ಈ ಹಂದಿಗಳು ತೀರಾ ಭ್ರಷ್ಟ ಸರ್ಕಾರಿ ನೌಕರರ ಹಾಗೆ ದೋಚುವಲ್ಲಿ ವರ್ಗತಾರತಮ್ಯವನ್ನು ಮಾಡದ ಪಾಪಂದಿಗಳು. ಶ್ರೀಮಂತರ ತೋಟ ಪುಡಿ ಮಾಡಿದಷ್ಟೆ ಸಲೀಸಾಗಿ ಅರ್ಧ ಎಕರೆ ದರ್ಖಾಸ್ತಿನ ಬಡಕೂಲಿಕಾರರ ತೊಂಡೆ ಚಪ್ಪರ, ಕೆಸುವೆ, ಗೆಣಸು ಎಲ್ಲವನ್ನೂ ಧ್ವಂಸಗೊಳಿಸುತ್ತವೆ.

ಇವುಗಳನ್ನು ಓಡಿಸಿ ಬೆಳೆ ಸಂರಕ್ಷಿಸುವ ಮಾರ್ಗೋಪಾಯಗಳ ಅನ್ವೇಷಣಾ ಪ್ರವೃತ್ತಿಯೂ ಈ ಅವಧಿಯಲ್ಲೆ ಜಾಸ್ತಿ. ಊದುಕಡ್ಡಿಯ ಹಾಗೆ ರಾತ್ರಿ ಪೂರಾ ಉರಿಯುವ ನಾರಿನ ಹಗ್ಗಕ್ಕೆ ಬೆಂಕಿ ಹಚ್ಚಿ ಇಡುವುದು, ಡಬ್ಬಿಗೆ ಕೋಲು ಕಟ್ಟಿ ನೇತು ಹಾಕುವುದು ಇವೆಲ್ಲಾ ರೈತಾನ್ವೇಷಣೆಗಳೇ.

ಈ ಸಂಬಂಧ ಮೈಖೆಲ್ ಜಾಕ್ಸನ್ನನಿಗೂ ಋಣಿಯಾದ ರೈತರನ್ನು ನಾನು ಕಂಡಿದ್ದೇನೆ. ಅಪರಾತ್ರಿಯಲ್ಲಿ ಮೈಖೆಲ್ ಜಾಕ್ಸನ್ನನ "ಬ್ಯಾಡ್" ಆಲ್ಬಂನ್ನು ಫುಲ್ ಸೌಂಡ್ನಲ್ಲಿ ಚಾಲೂ ಮಾಡಿ, ಅದರ ಭೀಕರ ಸಂಗೀತಕ್ಕೆ ಹಂದಿಗಳು ಬೇಧಿ ಕಿತ್ತುಕೊಂಡು ವಾರಗಟ್ಟಲೆ ತೋಟಕ್ಕಿಳಿಯದೆ ಇದ್ದುದಿದೆ. ನಮ್ಮಲ್ಲೂ ಮೈಖೆಲ್ ಜಾಕ್ಸನ್ನನ ಕ್ಯಾಸೆಟ್ಟುಗಳು ತುಂಬ ಮಾರಾಟವಾಗಲು ಇದೇ ಕಾರಣ ಇರಬಹುದು.

ರಾತ್ರಿಯ ಪಾಳಿ ಹಂದಿಗಳದ್ದಾದರೆ, ಹಗಲಿನ ಜವಾಬ್ದಾರಿ ಕೋತಿಗಳದ್ದು. ಆದರೆ ಕೋತಿಗಳಿಗೆ ಇವ್ಯಾವುದೂ ಲೆಕ್ಕಕ್ಕಿಲ್ಲ. ಕೋತಿ ಹೊಡೆಯುವ ವಿಚಾರದಲ್ಲಿ ಬಯಲು ಸೀಮೆಯ ತರ ನಮ್ಮಲ್ಲಿ ಧಾರ್ಮಿಕ ಪೂಜ್ಯ ನಿರ್ಬಂಧ ಏನೂ ಇಲ್ಲ. ಆದರೆ ಬಂದೂಕು ಇರುವ ಯಾವ ಮಾನವಂತನೂ ಈ ಹಡಬೆಟ್ಟ ಕೋತಿಗಳನ್ನು ಬೆನ್ನಟ್ಟಲು ಇಷ್ಟಪಡುವುದಿಲ್ಲ. ಅವು ಮರದಲ್ಲೆ ಅವಿತು, ಕಣ್ಣಾಮುಚ್ಚಾಲೆಯಾಡುತ್ತಾ ಮಾನ ಕಳೆಯುತ್ತವೆ. ದಾರಿಹೋಕರು ಬಂದರಂತೂ ಅವರ ಮುಸಿಮುಸಿ ನಗು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ.

ಇಂಥಾ ಕೋತಿಗಳು ಈ ಗನ್ ಸರೆಂಡರ್
ಅವಧಿಯಲ್ಲಿ ಆದ್ಯಾವ ಪರಿ ದರೋಡೆಗಿಳಿಯುತ್ತ
ನೆಟಗೆ ಮುರಿದು ಶಾಪ ಹಾಕುವುದೊಂದೇ ರೈತ
ದಾರಿ. ಅಕಾಲದಲ್ಲಿ ಪಟಾಕಿ ಕೇಳಿಕೊಂಡು
ಅಂಗಡಿಗೆ ರೈತರು ಹ್ಯಾಪ್ ಮೋರೆ ಹಾಕಿ
ಬಂದರೆಂದರೆ ಅವರು ಕೋತಿ ಹಾವಳಿಗೆ ತುತ್ತಾದ
ಅರ್ಥ.

ಊರಿನ ಕಳ್ಳ ಕೋವಿಗಳೆಲ್ಲಾ ಮಿಸುಕಿ ಹೊ
ವುದು ಈ ಕಾಲದಲ್ಲಿ. ಚರೆ ತುಂಬ ಗುದ್ದಿ ರೆಡಿ
ಒಮ್ಮೆ "ಢಾಂ....!" ಅನ್ನಿಸಿದರೆ, ಆ ರಾತ್ರಿಯ
ಕಾಮಗಾರಿ ಮುಗಿದಂತೆಯೇ. ಆದರೆ ಈ
ಕೋವಿಗಳು "ಢಾಂ.." ಅನ್ನುವ ಬದಲು "ಠಾಪ್..
ಎಂದು ನಿರಾಶೆ ಹುಟ್ಟಿಸುವುದೇ ಜಾಸ್ತಿ.

ಎಷ್ಟೋ ಮನೆ ಹೆಂಗಸರು ಈ ಗನ್ ಸ
ಆಚರಣೆಯನ್ನು ಕಾತರದಿಂದ ಕಾಯುತ್ತಾರೆ. 'ರಾತ್ರಿ
ಹೋಗುವ ಗಂಡಸರ ಸಮಸ್ಯೆ ಇನ್ನೂ
ಮನೆಗಳಲ್ಲಿದೆ. ಆದರೆ ಹಿಂದಿನ ತಲೆಮಾರಿನಷ್ಟು
ಚಟ ತೀರಾ ಅತಿಗೆ ಹೋದಾಗ ಮಾತ್ರ ಹೆ
ರಂಪ ಮಾಡಿ ಪಂಚಾಯಿತಿ ಮಾಡಿಸಿದ್ದೂ ಇದೆ.

ಈ ಟೈಮಿನಲ್ಲಿ ಇಂಥಾ ಗಂಡಸರ
ನೋಡಬೇಕು. "ದನ ಅರಚುವುದು ಯಾಕೋ,
ನೋಡಿ", "ಮಂಗ ಎಳೆದ ಅಡಿಕೆ ಅಲ್ಲೇ ರಾಶಿ ಹಾ
"ಗೇಟಿನ ನಟ್ಟು ಬಿದ್ದಿದೆ ಅಂತ ಐತ್ತ ಹೇಳ್ತಿದ
ಎಂಬಿತ್ಯಾದಿ ಮನೆ ಯಜಮಾನಿಯ ಕೆಲಸದ ಪಟ್ಟಿ
ಇನ್ಕಾರ್ ಮಾಡದೇ ನಿರ್ವಹಿಸಬೇಕು. ಸಂಜೆಯಾಗು
ಈ ಮಂದಿ ಇನ್ನಿಲ್ಲದ ಚಡಪಡಿಕೆ ತೋರ
ಕತ್ತಲಾವರಿಸುತ್ತಿದ್ದಂತೆ "ತೋಟ ಪೂರಾ ಪುಡಿ..
ಹಂದಿ ಉಪದ್ರಕ್ಕೆ.." ಎಂದು ದಯನೀಯವಾಗಿ
ಹಾಕುತ್ತಾರೆ. ರಾತ್ರಿಯಾಗುತ್ತಿದ್ದಂತೆ ಹೊರದಾರಿ
ಎಂಬ ದಾರುಣ ಸತ್ಯವನ್ನು ಒಪ್ಪಿಕೊಂಡು, ಉ
ಎಲೆ ಅಡಿಕೆ ಹಾಕಿ, ಹಲ್ಲು ಸಂದಿಗೆ ಬೆಳ್ಳಿ
ತೂರಿಸುತ್ತಾ, ಕತ್ತಲನ್ನು ವಾಂಛೆಯಲ್ಲಿ ನೋ
ಕೂರುತ್ತಾರೆ.

ಸುಮಾರಾಗಿ ಈ ಅವಧಿಯಲ್ಲಿ ಗುಂಡು ತು
ದೋಸ್ತಿಗಳು ಮನೆ ಕಡೆ ತಲೆ ಹಾಕುವುದು ಕ
ಮನೆ ಯಜಮಾನಿಯ ಕೆಕ್ಕರಗಣ್ಣು ಎದುರಿಸಲು
ತಯಾರಿರುತ್ತಾರೆ?

ಒಂದು ದಿನ, "ನಿಮ್ಮ ಗನ್ ತೆಕ್ಕೊಂಡು ಹೋ
ಎಂಬ ಸೂಚನೆ ಸ್ಟೇಷನ್ನಿಂದ ಬರುತ್ತದೆ. ಆ ಸೂಚನೆ
ಜೀವ್ರೋನ್ನುಖಾ.. ಆಹಾ.. ಕೋವಿ ಚಿಕಿತಾ..!
ಅದೇ ಜಾತ್ರೆ.. ನಮ್ಮಲ್ಲಿ ದೈವದ ನೇಮ
ವಾಗುವಾಗ ಪಾತ್ರಿಯ ಸಹಾಯಕರಿಗೆ ಭಂಡಾರ
ಕತ್ತಿ, ಕಠಾರಿ ಎತ್ತಿ ಕೊಡುವ ಸಂಪ್ರದಾಯವಿದೆ.
ಗುಡಿಯಿಂದ ಎತ್ತಿಕೊಟ್ಟ ಕತ್ತಿಗಳನ್ನು ಒಬ್ಬೊಬ್ಬನೂ
ವಾಗಿ ಸ್ವೀಕರಿಸಿ, ಹಿಂದೆ ಸರಿದು, ಅದನ್ನು ಮೇ
ಝುಳಪಿಸಿ,ಎದೆಗೆ ಗುದ್ದಿ, ಹೂಂಕಾರ ಮಾಡುತ್ತಾನೆ.
ನೇಮ ಶುರುವಾದ ಹಾಗೆ, ದೈವ ಜಾಗೃತವಾದ

ಮತ್ತೆ ಸ್ಟೇಷನ್ನಿನಲ್ಲಿ ಪೀಸಿ ಪುನರಪಿ ಸಹಿ ತೆಗೆದುಕೊ
ಗನ್ ಮರಳಿಸುವ ಪ್ರಕ್ರಿಯೆ ಆರಂಭವಾಗುತ್ತದೆ. ಕೋ
ನಳಿಗೆ ತುದಿಯಲ್ಲಿ ಗುಬ್ಬಚ್ಚಿ ಗೂಡು ಕಟ್ಟಿರುವ
ಬರೆದು ಕವನ ಬರೆವ ಶಾಂತಿಪ್ರಿಯರಿಗೆ ಈ
ಆಪ್ಯಾಯಮಾನವಾಗಿ ಕಂಡೀತು. ಆದರೆ, ಸ್ವತಃ ಬಂದ
ಯಜಮಾನನಿಗಲ್ಲ.

ಆ ಕೋವಿಯ ತುಂಬಾ ಧೂಳು, ಜೇಡರ
ಕುಂಬಾರ ಹುಳುವಿನ ಗೂಡು, ಹಲ್ಲಿ ಹಿಕ್ಕೆ
ಬಿದ್ದಿರುತ್ತದೆ. ಆದರೂ ಒಬ್ಬೊಬ್ಬನೂ ವಿನೀತವಾ
ಕೋವಿಯನ್ನು ಸ್ವೀಕರಿಸಿ ಹೆಗಲ ಮೇ
ಟವೆಲಿನಲ್ಲಿ ಅದನ್ನು ಸಾಧ್ಯವಾದಷ್ಟೂ
ಹೊರ ಬರುತ್ತಾನೆ.

ಸ್ಟೇಷನ್ನಿನ ಗೇಟು ದಾಟಿದ ತಕ್ಷಣ
ಕೋವಿ ನಳಿಗೆ, ಆಕಾಶ ನೋಡುತ್ತಾ ಕೆನೆ
ಬಗೆ ನೋಡಿಯೇ ಅನುಭವಿಸಬೇಕು. ಶಾಪ
ಪುರುಷತ್ವ ಕಳಕೊಂಡವನು ಮತ್ತೆ ಪ್ರ
ಪಡಕೊಂಡ ಧನ್ಯ ಹೆಮ್ಮೆ ಎಲ್ಲರ ಮು
ತುಂಬಿರುತ್ತದೆ.

ಈ ಅವಧಿಯಲ್ಲಿ ತೋಟಕ್ಕೆ ಲಗ್ಗೆ ಇಟ್ಟ
ಮತ್ತು ಕೋತಿಗಳನ್ನು ನೆನೆಯುತ್ತಾ, ರಾತ್ರಿ ಆಯ
ಗಂಡಿಗಳಲ್ಲಿ ಬರಬಹುದಾದ ಬರ್ಕ, ಕಡವೆಗಳನ್ನು
ಯುತ್ತಾ, ಬೇಟೆಯ ನೆಪದ ರೋಮಾಂಚನಗಳನ್ನು
ಯುತ್ತಾ.. ಒಬ್ಬೊಬ್ಬನೂ ಉಲ್ಲಾಸದಲ್ಲಿ ಮನೆಗೆ ಮರಳ

ಆದರೆ ಈ ಬಂದೂಕದ ಬಲ ಬೇಕ
ಅಭಿನಯಕ್ಕಷ್ಟೆ ಸೀಮಿತ. ಮೂರಡಿ ಪುರುಷಾಕಾ
ಹೊಂದಿದ ಈ ಜೋಕುಮಾರ ಸ್ವಾಮಿಗಳು
ವಿನೀತ ನಾಗರಿಕರಾಗಿ, ತಾಲೂಕಾಫೀಸು, ರಿಜಿ
ಆಫೀಸುಗಳಲ್ಲಿ ಗಿಂಜುತ್ತಾ ಕೈ ಹೊಸೆಯುತ್ತಾ ಆ ಕಟ
ಹಳಸಲು ಗೋಂದು ಅಂಟಿಸಿಕೊಂಡು ತೆವಳುವ ನೊ
ಹಾಗೆ ಜೀವ ಸವೆಸುತ್ತಾರೆ.

● ಕೆ. ಪಿ. ಸು

...ವಣ್ಣ ಸಾಕಿದ ಇಲಾತಿ ಹಸವ ರೆಡ್ಡಿ ವಡಕಂಡೋದನಂತೆ!

...ಲು ಮುಂದಲಿ ವಿಷಯ ಚರ್ಚೆಯಾಗುತ್ತಿತ್ತು, ...ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದ. ಆದರೂ ...ೋ ಬರುವ ಹಾಲು ಕೊಂಡು ಜೀವಿಸುವುದಕ್ಕೆ ...ರೋಧವಿತ್ತು, ಸಿಟಿ ಜನಕ್ಕಾಗಿ ಹಾಲು ಮಂಡಳಿ ...ೀ ಹೊರತು ತಮಗಲ್ಲ ಎಂದು ಸುಮ್ಮನಾಗಿದ್ದ. ...ಕೂಟದ ಅಧ್ಯಕ್ಷಗಿರಿಯಿಂದ ರೇವಣ್ಣನನ್ನು ಎತ್ತಿ ...ಂಬ ಸುದ್ದಿಗೆ ಚಾಲನೆ ನೀಡಿದ ಉಗ್ರಿ.

...ತೂ ರೇವಣ್ಣ ಸಾಕಿದ್ದ ಇಲಾತಿ ಹಸವ ರೆಡ್ಡಿ ...ೋದ."

...ಮಾತಿನ ವ್ಯಂಗ್ಯ ಗ್ರಹಿಸದ ಜುಮ್ಮಿ ಅಚ್ಚರಿಯಿಂದ, ...ಹಸ ವಡಕಂಡೋದ?" ಎಂದಳು.

...ಣ್ಣಂತ ಇರದೆ ಒಂದಸಲವೇನೆ. ಅದು ವಳ್ಳೆ ...ಹೋಗ್ತಾಯಿದ್ರೆ ಬೀದಿ ಜನವೆ ನಿಂತಗಂಡು ...ಆ ಕರೇ ಕಣ್ಣಗೂ ಬಿಳೀ ಮೈಗೂ ರೇಷ್ಮೆ ...ಂಡು ಹೋಯ್ತಾಯಿದ್ರೆ ನೋಡಕ್ಕೆ ಯರಡು ...ಂದಲ್ಲ. ಅಂಥಾ ಹಸ ಅದು" ಎಂದ ಉಗ್ರಿ.

...ಕಟ್ಟಾಕಿದ್ರಾ?"

...ಲೆ ಕಟ್ಟಿದ್ದನಂತೆ ಕಣೆ. ರೆಡ್ಡಿ ಬಂದು ಭಾಗಲ ...ವಡಕಂಡೋದ ಅತ್ತಗೆ. ಹದನೈದೊರ್ಸದಿಂದ ...ಕಂಡೋರ ಪಾಲಾಯ್ತು. ಪಾಪ ರೇವಣ್ಣನಿಗಿಂತ ...ದನ ಮಕ ನೋಡಕ್ಕಾಗದಿಲ್ಲ."

...ವಾದ್ರೆ ಹೋಗಿ ಹಿಡಕಂಡು ಬರಕ್ಕೇನಾಗ್ಯದೆ?"

...ಷ್ಟು ಸುಲಬಲ್ಲ. ವಡಕಂಡೋಗಿರೋರು

ಒಂದು ಹಸ ತಗಳಕ್ಕಾಗದೆ ಕದ್ದು ವಡಕಂಡೋಗ್ಯವುರಲ್ಲ ಅಂತ ನನ್ನ ತಲಿ ಕೆಟ್ಹೊಯ್ತಾಯಿತ್ತು" ಎಂದು ಜುಮ್ಮಿ ನಕ್ಕಳು.

"ಅಲ್ಲಾ ಕಣೆ, ರೇವಣ್ಣನ ಹಸ ಯಂಗದೆ ಅಂತ ಹೇಳಿದಾಗ್ಲೆ ತಿಳಕಬೇಕಾಗಿತ್ತು ನೀನು. ಸುಳ್ಳೇಳದಲ್ಲ, ಭವಾನಿ ಅಂಗವುಳೆ. ಅದಕಿಂತ್ಲೂ ರೇವಣ್ಣ ಹಾಲಡೈರಿಯ ಚನ್ನಾಗಿ ಮಡಗಿದ್ದ" ಎಂದ.

"ರೈತನ ಮಗಲವೆ?" ಎಂದ ಕಾಳಮಾವ.

"ದ್ಯಾವೇಗೌಡ್ಯಾವ ರೈತ ಮಾವ? ರೈತನ ಕೈಲಸದಿಂದ ಏನೂ ಆಗದಿಲ್ಲ ಅಂತ ಯಾವತ್ತೋ ತಿಳಕಂಡು ರಾಜಕೀಯಕ್ಕೆ ಬಂದೋನು. ಆದ್ರೇ ರೇವಣ್ಣ ನಾಕಸ ಕಟ್ಟಿ ಹಾಲುಮಾರೋ ಅಂಥೋನು. ಅದ್ಕೆ ಡೈರಿಯ ಚನ್ನಾಗಿಟ್ಟಿದ್ದ."

"ಅಂತೂ ಪುಗಸಟ್ಟೆ ಹಾಲಿಗೂ ಕಲ್ಲುಬಿತ್ತು ಅನ್ನು" ಎಂದ ಸೀರ.

"ಪುಗಸಟ್ಟೆ ಹಾಲ್ಯಾವುದೋ?"

"ರೇವಣ್ಣನಿಂದ ಹಿಡುದು ಅವುರಣ್ಣ ತಮ್ಮದೀರು ಮನಿಗ್ಯಲ್ಲ ಹಾಲುಪುಗಸಟ್ಟೆ ಬರೋದಂತೆ ಕಂಡ್ಯ. ಚನ್ನಮ್ಮನಂತೂ ಹೆಣ್ಣುಮಕ್ಕಳ ಮನಿಗ್ಯಲ್ಲ ಪುಗಸಟ್ಟೆ ಹಾಲಿನ ಪಾಕೀಟು ಕೊಡಂಗೆ ಮಾಡಿದ್ಲಂತೆ."

"ಯಾರೋ ದ್ಯಾವೇಗೌಡ್ರ ಕಂಡ್ರಾಗದೋರು ಹೇಳಿರೊ ಮಾತು ಕಣೊ ಅದು"

"ಆದ್ರು ನಂಬಂಗೆ ಅದಲವೇನ್ಲ. ರೇವಣ್ಣ ಚೇರಮಿನಿ ಆಗಿದ್ದಾಗ ಅವುನ ಮನಿಗೆ ಹಾಲುಕೊಟ್ಟು ಕಾಸೀಸಗಳಕ್ಕಾದತೇ? ಅಂಗೆ ಉಳದೋರ ಮನಿಗು ಒಂದು ಪಾಕೀಟ ಯಸ್ತು ಹೋಯಿತ್ತಿದ್ದರೇನೊ, ಅದಕ್ಕಲ್ಲ ಕಲ್ಲುಬಿತ್ತು."

...ಮು ಲು ಸೀ ಮೆ

...ಪುರಾಣ

ಬಿ. ಚಂದ್ರೇಗೌಡ

...ಭೂಮಿನೆ ಭಗದು ಮಾರ್ತ ಕುಂತವುರೆ. ಅಷ್ಟೇ ...ನೆ ತಿದ್ದಿ ವತ್ತುವರಿ ಮಾಡಿ ಜಯಿಸಿಗಂಡವುರೆ. ...ರೇವಣ್ಣನತ್ರ ವಡಕಂಡೋಗಿರೊ ಹಸ ತಿರಗ ...?"

...ದ್ರೊಯ್ತದಾಕು. ಹದುನೈದೊರ್ಸ ಅಂತೀ, ...ಗಿರದಿಲವೆ? ಒಂದು ಕಡಸ ತಗಂಡು ...ತು."

...ನನ್ನ, ನಿಜವಾದ ಹಸ ಅಂತ ತಿಳಕಂಡಿದ್ದಿಯಲ್ಲಾ ...ನ?"

...ರೆ ಸುಳ್ಳು ಅನ್ನು?"

...ಹಸವೆ ರೆಡ್ಡಿ ವಡಕಂಡೋದ ಅಂದ್ರೇ ...ಟ್ಟವ ರೆಡ್ಡಿ ಕಿತ್ತಗಂಡ ಅಂತ ಕಣೇ!"

...ನ್ನು ಮತ್ತೆ! ಆಣಕ ವಡಿಯಕ್ಕು ಒಂದಿದುಬೇಕು ...ರೆಡ್ಡಿಗಳು ಲಕ್ಷಾದಿಪತಿಗಳಂತೆ. ಅಂಥೋರು

"ನಿಮಿಗೇಳಕ್ಕಾಗದಿಲ್ಲ ಹೋಗು" ಎಂದ ಉಗ್ರಿ.

"ಏನೇಳಕ್ಕಾಗದಿಲವ್ರೊ ಉಗ್ರಿ? ನಾನೇಳ್ತಿನಿ ಅದೇನ್ಹೇಳು" ಎಂದು ವಾಟಿಸ್ಸೆ ಬಂದ.

"ಈ ಸೀರ ಮಾವ ಹೇಳ್ತ ಕುಂತವುನೇ, ರೇವಣ್ಣ ಕೆಎಂಎಫ್ ಛೇರಮನಿ ಆಗಿದ್ದಾಗ ಇಡೀ ದೇವೇಗೌಡನ ವಠಾರಕ್ಕೆ ಪುಗಸಟ್ಟೆ ಹಾಲು ಕೊಡೋರಂತೆ."


"ಇರಬವ್ರುದು, ಇಲ್ದೆನೂ ಇರಬವ್ರುದು. ಸಂಪೂರ್ಣ ಅಲ್ಲಗಳಿಯೋ ತರ್ಧದಲ್ಲ. ದ್ಯಾವೇಗೌಡ್ರ ಕುಟುಂಬ ಜೇನುಬಿಚ್ಚ ಕೈತೊಳ್ಕಕೊಳೋ ತರಹದ ಅಂತ ಆಸಾಮಿಗಳಲ್ಲ. ಮುಂಗೈಗಂಟ ನೆಕ್ಕೋ ಅಂತ ಗಿರಾಕಿಗಳು. ಪರೆಗ್‌ಜಾಂಪಲ್ ಹೇಳಲಾ?" ಎಂದ ವಾಟಿಸ್ಸೆ.

"ಹೇಳಪ್ಪ."

"ನಿಮ್ಮ ಸಿದ್ದೇಗೌಡ್ರು ಮಗುವುನಲ್ಲ, ಬೆಂಗಳೂರಲ್ಲಿ ಯಾವ ಏರಿಯಾ ಅದು?"

"ಅದು ಬನಶಂಕರಿ ಕಣೊ."

"ಅಲ್ಲಿ ಒಂದಿಷ್ಟು ಸೈಟಿನ ಜಗಳ ಇತ್ತಂತೆ. ಅದ ಬಗೆ ಹರುಸ್ತಿನಿ ಅಂತ ಹೋದ ಕುಮಾರಸ್ವಾಮಿ, ಹೆಂಡತಿ



ಹೆಸರಿಗೆ ಸರಿಯಾಗಿರೊ ಸೈಟ್‌ನೆ ವಡಕಂಡು ಸೈಟಿನ ಪ್ರಾಬ್ಲಮ್ ಸಾಲು ಮಾಡಿದನಂತೆ. ಈಗ ಅನಿತಕ್ಕ ಸಿಗಾಯ್ಕೊಂಡು ಅದ ಮಾರಿಬುಟ್ಟು ಏನು ಗೊತ್ತಿಲ್ಲದಂಗ ವುಳಂತೆ. ಇದಕೇನೇಳ್ತೀ?"

"ನೋಡು ಮತ್ತೆ, ಇದೊಂತರ ಕೋತಿ ಕಜ್ಜಾಯದ ಕತಿಯಾಯ್ತು."

"ಅದ್ಕೆ ನಾನೇಳದು, ಇವತ್ತಿನ ದಿವಸದಲ್ಲಿ ಸೀರ ಚಿಗಪ್ಪನಂಥೋರ ಅನುಮಾನಗಳ ಅಲ್ಲಗಲಿಯಕ್ಕಾಗದಿಲ್ಲ. ಅದೇನಾರ ಆಗ್ಲಿ ದೇವೇಗೌಡ್ರ ಕುಟುಂಬಕ್ಕೆ ಶೆಡ್ಡು ವಡಿಯಕ್ಕೆ ಯಾರ ಕೈಲೂ ಆಗಲಿಲ್ಲ, ರೆಡ್ಡಿಗಳು ಸಕ್ಸಸ್ ಆದರಲ್ಲ ಹೇಳು" ಎಂದ ವಾಟಿಸ್ಸೆ.

"ರೆಡ್ಡಿಗಳೇನು ಸಕ್ಸಸ್ ಆದ್ರೊ, ಎಡೂರಪ್ಪಿಲ್ಲ ಅಂದ್ರೆ ಅವುರೂ ಇಲ್ಲ."

"ಇರಬವ್ರುದು, ಆದ್ರು ಜನಾರ್ದನ ರೆಡ್ಡಿ ಕುಮಾರಣ್ಣನ ಮ್ಯಾಲೆ ಚಾಲೆಂಜ್ ಮಾಡಿ ಸಕ್ಸಸ್ ಆದ. ಇವತ್ತು ಅವುನ ಮನೆಲಿ ಮೂರು ಜನ ಮಂತ್ರಿಗಳು. ದ್ಯಾವೇಗೌಡ್ರ ಮನೆಲಿ ಒಂದು ಲೇಡಿ ಸೀಟು ಎಕ್ಸ್‌ಟ್ರಾ ಇತ್ತು, ಅದ್ನೂ ಫಿಲಪ್ ಮಾಡಿಕೊಂಡ್ರು. ಇದೊಂತರ ಭಂಡರನ್ನ ಕಳ್ಳರು ಸೋಲಿಸಿದಂಗಾಯ್ತು. ರಿಯಲಿ ಇಟೀಸ್ ಬ್ಯಾಡ್ ಸಿಚುಯೇಶನ್."

"ಅದೇನಾರ ಹಾಳುಬಿದ್ದೊಗಲಿ, ಯಲಕ್ಷನ್ ಬಂದವಲ್ಲ ಯಾವೂರಿಗೋಯ್ತಿಯೋ?"

"ನೋಡನ, ಯಾವ ಪಾರ್ಟಿಯೋರು ಕರಕಂಡೋಯ್ತರೆ ಅವುರ ಜೊತೆ ಹೋಗನ ಅಂತ ಇದ್ದಿನಿ."

"ಅಂಗರೆ ಯಾವ ಪಾರ್ಟಿಯೋರ ಜ್ವತೆಲಾದ್ರು ಹೋಯ್ತಿಯೇನ್ಲ?"

"ಊ ಕಣಕ್ಕ, ಇವತ್ತು ಯಲ್ಲಾ ಪಾರ್ಟಿಯೋರು ಒಂದೇ ತರ ಮಾತಾಡ್ತರೆ, ಒಂದೇ ತರ ಖರ್ಚು ಮಾಡ್ತರೆ, ಕಡಿಗೆ ಒಂದೇ ಜಾಗದಲ್ಲಿ ಸೇರಿಕತ್ತರೆ. ಆದ್ರಿಂದ ಯಾವುದೇ ಪಾರ್ಟಿ ವೆಯಿಕಲ್ ಜ್ವತೆ ಹೋಗಬವ್ರುದು. ಆನಂತರ ಯಾತ್ತಾದರೂ ಹೋಗಬವ್ರುದು."

"ಇವತ್ತು ಅಂಗೆ ಆಗ್ಯದಲ್ಲೊ? ಕಾಂಗ್ರೆಸ್ಸಿಂದ ಗೆದ್ದೋರು, ದಳದಿಂದ ಗೆದ್ದೋರು, ಗೆದ್ದ ಪಾರ್ಟಿಗೆ ರಾಜೀನಾಮೆ ಕೊಟ್ಟು ಬಿಜೆಪಿಗೋದರಪ್ಪ, ಜನಗಳಿಗೇನಾರ ಸ್ವಾಭಿಮಾನ ಅನ್ನದಿದ್ರೆ ಈ ಸೂಳೆಮಕ್ಕಳ ಸೋಲಿಸಿ ಕಳುಸಬೇಕು" ಎಂದ ಉಗ್ರಿ.

"ಅದಷ್ಟು ಸುಲಬಲ್ಲ ಕಣೊ ಉಗ್ರಿ. ಸಾಮಾನ್ಯವಾಗಿ ಜನ ಆಡಳಿತ ಮಾಡೋ ಪಾರ್ಟಿ ಕಡೆ ಇರತರೆ. ಅದಕಿಂತ ಅವುರೆದ್ರಿಗೆ ಕಾಂಗ್ರೆಸ್, ಜೆಡಿಎಸ್ ಅಂತ ಯರಡು ಕೋಡುಮುರುಕ ಪಾರ್ಟಿ ನಿಂತವೆ. ಇಂತ ಟೈಮಲ್ಲಿ ಜನ ಸರಿಯಾದ ಡಿಶಿಷನ್ ತಗಳದು ಕಷ್ಟ. ನೀನೇನೇಳ್ತಿದ್ದಪ್ಪ?"

"ನಾನೇನೇಳನ್ಲ ತಲಿಕಟ್ಟ ಸೂಳೆಮಕ್ಕಳ ರಾಜಕೀಯವ ಮಾತಾಡದೇ ಅಲ್ಲ."

"ಎಜ್ಜಾಕ್ಟ್ಲಿ ಕರಟ್ ದೊಡಪ್ಪ, ರಿಯಲಿ ಇವುರ್ಯಲ್ಲ ಲೂಸ್ ಮಾದಗಳೆಯಾ. ಆ ಚನ್ನಪಟ್ಣದಲ್ಲಿ ಒಬ್ಬ ಎಮ್ಮೆಲ್ಲೆ ಅವುನೆ. ಎತ್ತರವಾದ ಎತ್ತಿನಂಗೆ ಕಾಣ್ತನೆ. ನಮ್ಮ ನಿಂಗಣ್ಣ ನ್ನಡಿತನಲ್ಲ ಅಂಗೆ ನ್ನಡಿತನೆ. ಅವುನು ಸೈಟ ತಗಂಡು ಮಾರಿ ಮುಂದಕೆ ಬಂದೋನು. ಅಂಗೇ ಮಾಡಿ ರೈತರ ಜಮೀನು ಕೊಳ್ಳದು, ಸೈಟು ಮಾಡಿ ಮಾರದು, ಈಗ ಜನಗಳತ್ರ ಹನ್ನೊಂದು ಸಾವುರ ಸೈಟಿನ ದುಡ್ಡ ಕಲಕ್ಟ ಮಾಡ್ಯವುನೆ. ಅವುನತ್ರ ಇರವು ಐದು ಸಾವುರ ಸೈಟು. ಜನಗಳಿಗೆ ಚೆಕ್ ಬರೆದು ಕೊಟ್ಟು ಅವ್ಯಲ್ಲ ಬೌನ್ಸಾಗಿ ಅರೆಸ್ಟಾಗಿ ಜೈಲಲ್ಲಿ ಇರಬೇಕಾದೋನು, ಬಿಜೆಪಿಗೋಗಿ ಯಲಕ್ಷನ್ನಿಗೆ ನಿಂತವುನೆ. ಇಂಥೋನ್ನ ಏನು ಮಾಡಿ ಸೋಲಸಬೇಕು?"

"ಸೋಲಿಸಿದ್ರೆ ಜನಗಳಿಗೆ ಪರಮನೆಂಟ್ ನಾಮ ಬೀಳ್ತದೆ ಕಣೊ. ಯಂಗಿದ್ರೂ ಈ ಸರಕಾರ ಯಾವ ಹಗರಣನೆ ಮಾಡ್ಲಿ ಕೋಟಿ ಲೆಕ್ಕದಲ್ಲಿ ಮಾಡ್ತಾ ಕುಂತವ. ಇಂತ ಸರಕಾರದಲಿದ್ರೆ ಈ ಕಳ್ಳ ಜನಗಳ ಸಾಲ ತೀರಸಬವ್ರುದು."

"ಅದೇ ಕಣೊ ಉಗ್ರಿ ನೀನು ತಪ್ಪು ತಿಳಕಂಡಿರೋದು. ಮಾತ ಉಳಿಸಿಗಳೋನು ಯಂಗಾರ ಉಳಿಸಿಗತ್ತನೆ. ಸಾಲ ತೀರಸೋನು ಯಂಗಾರ ತೀರುಸ್ತನೆ. ಆದ್ರೆ ಈ ಚನ್ನಪಟ್ಣದ ಚಿನ್ನಿಗರಾಯನಿಗೆ ಬಿಜೆಪಿ ಆಶ್ರಯ ಸಿಕ್ಕಿದ್ರೆ ಅಮ್ಯಾಲೆ ಯಾರಿಗೂ ಸಿಕ್ಕದಿಲ್ಲ, ಆದ್ರಿಂದ ಇಂಥೋರು ಗೆಲ್ಲಬಾರ್ದು."

"ಅಂಗೆ ನೋಡಿದ್ರೆ ಬಿಜೆಪಿಲಿರೊ ಮಂತ್ರಿಗಳಲ್ಲಿ ಮುಕ್ಕಾಲುಭಾಗ ಜನ ಗೆಲ್ಲ ಬಾರದಿತ್ತಪ್ಪ, ಗೆದ್ದು ರಾಜ್ಯನೆ ಕೊಳ್ಳೆ ಹೊಡಿತ ಕುಂತವುರೆ. ಏನು ಮಾಡ್ತಿ ಹೇಳು?"

"ಐ ಯಾಮ್ ಹೆಲಪಲೆಸ್."

"!?" ●

...ಾನವನ ಪುನಃಶ್ಚೇತನದ ಶಕ್ತಿ

...ತ್ತೊಂದನೆಯ ಶತಮಾನ ಹತ್ತಿರವಾಗುತ್ತಿದ್ದಂತೆ ನಮಗೆ ದಿಗ್ಭ್ರಮೆ ಹಿಡಿಸುವಂತಹ ಹಿಂಸೆ, ದಬ್ಬಾಳಿಕೆ, ...ಕಂಡುಬರುತ್ತಿದೆ. ಮೊನ್ನೆ ಅಮೆರಿಕದ ಅತ್ಯಂತ ಎತ್ತರದ ಕಟ್ಟಡದ ಒಡತಿ ಹನೆಸ್ಲೆ ತನ್ನ ಸಣ್ಣತನಕ್ಕೆ, ಧಿಮಾಕಿಗೆ ...ಾದದ್ದರ ಬಗ್ಗೆ ಬರೆದಿದ್ದೆವು. ಅಂಥ ಅರ್ಧ ಡಜನ್ ಕತೆಗಳು ಈಚೆಗೆ ಬಂದಿವೆ. ಅವುಗಳಲ್ಲಿ ಒಂದು ತಾನೇ ...ಆಗಿ, ತಾನೇ ಬಟ್ಟೆಯ ಕಾರ್ಖಾನೆ ನಡೆಸಿ ಮೆರೆಯುತ್ತಿದ್ದವಳ ಕತೆ. ಇದ್ದಕ್ಕಿದ್ದಂತೆ ಅವಳಿಗೆ ಶಾಕ್ ಆಯಿತು; ...ವ್ಯಾಪಾರ ಕುಸಿದು ಬಿತ್ತು, ಈಕೆಯ ಮಾಡೆಲ್ ವಿಫಲಗೊಳ್ಳತೊಡಗಿತು. ಡೊನಾಲ್ಡ್ ಟ್ರಂಪ್ ಮತ್ತು ಅವನ ...ಪ್ರೇಯಸಿಯರ ಕತೆ ನೀವು ಕೇಳಿರಬಹುದು. ಕೋಟ್ಯಂತರ ಡಾಲರ್ ಸಾಲದ ಮೇಲೆ ಅವರ ಹೋಟೆಲು, ...ವ್ಯಾಪಾರ ನಿಂತಿತ್ತು, ಸಾಲದ ಬಗ್ಗೆ ಅರಿಯದ ಜನ ಅವನ ಸುಖ, ವೈಭವ ...ಗಾಗುತ್ತಿದ್ದರು. ಇದ್ದಕ್ಕಿದ್ದಂತೆ ಹೋಟೆಲ್‌ಗಳು ಮುಗ್ಗರಿಸತೊಡಗಿದವು; ನಿವೇಶನಗಳ ...ಮುಖವಾಯಿತು.

...ಸದು ಅವಕುಂಠನ ಮಾತ್ರ. ಬಂಡವಾಳಶಾಹಿಯ ವೈಭವ, ಅಹಂಕಾರಕ್ಕೆ ...ಬ್ರಿಡ್ ಆಹಾರ, ಕೃತಕ ವಸ್ತುಗಳೆಲ್ಲ ಬಂದವು. ಆಹಾರ ತೆಗೆದುಕೊಳ್ಳಲೂ ...ದ ಆಹಾರದ ಮಾತ್ರೆ ಕಂಡುಹಿಡಿದರು. ಇವೆಲ್ಲವುಗಳಿಂದ ಅಸ್ವಸ್ಥತೆ ಬಂದಾಗ ...ಳಿಸುವ ಮಾತ್ರೆಗಳು ಬಂದವು. ಎಲ್ಲ ರೋಗಗಳನ್ನು ಹತೋಟಿಗೆ ತಂದವರಂತೆ, ...ಅಸಾಧ್ಯವಾದದ್ದೇ ಇಲ್ಲವೆಂಬಂತೆ ಡಾಕ್ಟರುಗಳು ಮೆರೆಯತೊಡಗಿದರು. ಇವರನ್ನೆಲ್ಲ ...ಂತೆ ಪ್ಲೇಗು, ಕಾಲರಾ, ಕ್ಯಾನ್ಸರ್‌ಗಳನ್ನೆಲ್ಲ ಮೀರಿಸುವಂತಹ ಏಡ್ಸ್ ರೋಗ ...ತು. ಕ್ರಿಮಿನಾಶಕಗಳನ್ನು ವಿಮಾನಗಳಿಂದ ಸಿಂಪಡಿಸಿ, ರಾಸಾಯನಿಕ ಗೊಬ್ಬರಗಳನ್ನು ...ಸುರಿದು ಬೆಳೆ ತೆಗೆಯುವ ಪ್ರಯತ್ನ ಸಫಲವಾಯಿತು. ಹಾಗೆಯೇ ಇದೇ ...ಮತ್ತು ರಾಸಾಯನಿಕಗಳಿಂದ ಹೊಲಗಳು ಮಣ್ಣಿನ ಸಾರ ಕಳೆದುಕೊಂಡು ...ವಿಷದ ನೀರಾಗಿ ಹರಿಯತೊಡಗಿದವು. ಬೃಹತ್ ನಗರಗಳ ಕಾರು, ಸಂಪತ್ತು ...ಪ್ಪಿನ ಅಳದಲ್ಲಿ ಮನುಷ್ಯ ದಿಕ್ಕುತೋಚದ ಕ್ರಿಮಿಯಾಗಿ ತತ್ತರಿಸತೊಡಗಿದ.



ಸರಳ ಪ್ರೀತಿ ಮತ್ತು ಸುಂದರ ಕನಸುಗಳಿಂದ ಕೂಡಿದ್ದ ಬದುಕು ಭೀಕರ ಕ್ರೌರ್ಯ ಮತ್ತು ಅಸಹಾಯಕತೆಯನ್ನು ತೋರತೊಡಗಿತು. ಎಲ್ಲೋ ಕೊಂಡಿ ಕಳಚಿಕೊಂಡಿರುವಂತೆ ತೋರಿತು. ಗಾಳಿ ಮಲಿನಗೊಂಡಿದೆ, ನೀರು ವಿಷವಾಗಿದೆ, ಹಣ್ಣು ಕೃತಕವಾಗಿದೆ. ಧಾನ್ಯ ಕಸುವು ಕಳೆದುಕೊಂಡಿದೆ. ಬದುಕು ಕ್ಲಿಷ್ಟವಾಗಿ ಅಸಹ್ಯವಾಗಿದೆ; ಮನುಷ್ಯ ಬಳಸಿ ಎಸೆದ ಶೀಸೆ, ಪ್ಲಾಸ್ಟಿಕ್ ಡಬ್ಬ, ಟೂತ್‌ಪೇಸ್ಟ್ ಟ್ಯೂಬ್‌ಗಳ ಹಿಮಾಲಯವೇ ಎದ್ದು ಅವನ್ನು ಸಮುದ್ರಕ್ಕೆಸೆದರೆ ಸಮುದ್ರ ತಳ ಕಳೆದುಕೊಳ್ಳುತ್ತದೆ. ಭೂಮಿಯಲ್ಲಿಟ್ಟರೆ ಭೂಮಿಯೆಲ್ಲ ಅವುಗಳಿಂದಲೇ ಮುಚ್ಚಿಹೋಗುತ್ತದೆ. ಮನುಷ್ಯ ತನ್ನ ಟಾಯ್ಲೆಟ್‌ಗೆ, ಪೊಟ್ಟಣಗಳಿಗೆ, ಪುಸ್ತಕಗಳಿಗೆ ಎಷ್ಟು ಕಾಗದ ಬಳಸುತ್ತಿದ್ದಾನೆಂದರೆ, ಕಾಗದದ ಉತ್ಪಾದನೆಗಾಗಿ ಅರಣ್ಯಗಳ ಮರಗಳೆಲ್ಲ ಮಾಯವಾಗುತ್ತಿವೆ. ಕಾಗದವೆಲ್ಲ ಕಸವಾಗಿ ರಾಶಿರಾಶಿಯಾಗಿ ಬೀಳುತ್ತಿದೆ.

ಮನುಷ್ಯನ ಸ್ವಾರ್ಥ ಮತ್ತು ಪ್ರತಿಷ್ಠೆಗಳು ಅರಣ್ಯ ನಾಶಮಾಡುತ್ತಿರುವಾಗಲೇ, ಪ್ಲಾಸ್ಟಿಕ್‌ಗಳ ದುಃಸ್ವಪ್ನ ಸೃಷ್ಟಿಸುತ್ತಿರುವಾಗಲೇ, ವೈದ್ಯರ ಮರ್ಜಿಯಲ್ಲಿ ಕೊರಗುತ್ತಿರುವಾಗಲೇ..... ನಿಜವಾದ ಹಣ್ಣುಗಳ ಸ್ವಾದ ಕಂಡುಕೊಳ್ಳುತ್ತಿದ್ದಾನೆ. ನಿಜವಾದ ಧಾನ್ಯದ ರುಚಿ ಅರಿಯತೊಡಗಿದ್ದಾನೆ. ನಿಜವಾದ ಬದುಕಿನ ಗುಟ್ಟು ಹುಡುಕತೊಡಗಿದ್ದಾನೆ. ಜಪಾನ್ ಮತ್ತು ಅಮೆರಿಕದಲ್ಲಿ ಈಗ ಹೈಬ್ರಿಡ್ ಅಲ್ಲದ ತರಕಾರಿ, ಹಣ್ಣುಹಂಪಲುಗಳಿಗೆ ಬೇಡಿಕೆ ಏರುತ್ತಿದೆ; ಸೈಕಲ್‌ಗಳ ಕಡೆಗೆ ಮನುಷ್ಯ ವಾಲತೊಡಗಿದ್ದಾನೆ.

ಇನ್ನೊಮ್ಮೆ ಈ ಬಗ್ಗೆ ವಿಸ್ತರವಾಗಿ ಬರೆಯುತ್ತೇನೆ. ಈಗ ಇಷ್ಟೇ ಸಾಕು. ಬೋರ್ನಿಯೋ ದ್ವೀಪದಲ್ಲಿ ಒಬ್ಬ ನಾಟಿ ವೈದ್ಯ, ಈತ ಸರಳ ಮತ್ತು ಅನುಭವಿ. ಪರಂಪರಾಗತವಾಗಿ ಬಂದ ತನ್ನ ವೈದ್ಯಕೀಯ ಜ್ಞಾನ ಬಳಸಿ ಸಸ್ಯಗಳ ಜ್ಞಾನದಿಂದ ಔಷಧಿ ತಯಾರಿಸಿ ಕಾಯಿಲೆ ಗುಣಪಡಿಸುತ್ತಿದ್ದ. ಅವನಿಗೆ ಹಣಕ್ಕಿಂತ ಸ್ವಾಭಿಮಾನ ಮುಖ್ಯ. ಆತನನ್ನು ಹೇಗೆ ಮಾತಾಡಿಸುವುದೆಂದು ತಿಳಿಯದ ಅಮೆರಿಕ ವೈದ್ಯನೊಬ್ಬ ಅವನೆದುರು ಸಾಷ್ಟಾಂಗ ಬಿದ್ದು ಹೇಳಿದ "ತಮ್ಮ ವೈದ್ಯಕೀಯದ ಬಗ್ಗೆ ನನಗೆ ಹೇಳಿ"

ಆ ವೈದ್ಯ ಯಾವುದೇ ಎಗ್ಗಿಲ್ಲದೆ ಮಾತಾಡತೊಡಗಿದ. ಈ ಬದುಕಿಗೆ ಎಂಥ ಪುನಶ್ಚೇತನ ಶಕ್ತಿ ಇದೆ-ಎಂಬುದೇ ಒಂದು ಅಚ್ಚರಿಯ, ಆಶಾದಾಯಕ ವಿಷಯ.



ಸಾವಿಗೆ ಬೆದರಿದ ಸನ್ಯಾಸಿ

ಒಂದು ಸಮಾರಂಭ.

ಅತಿಥಿಗಳು?

ಸಾಮಾನ್ಯ ಜನರು ಬಿಡಿ. ಎಲ್ಲೆಲ್ಲೂ ಪಿತಗರಿಯುತ್ತಾರೆ... ಕರೆದರೂ, ಕರೆಯದೇ ಇದ್ದರೂ ಬರುತ್ತಾರೆ. ಇವರು 'ಅತಿಥಿ'ಗಳಲ್ಲ.

ಕೆಲವರು ಇರುತ್ತಾರೆ. ಗಣ್ಯರು, ಅತಿಗಣ್ಯರು. ಅರ್ಥಾತ್ ವಿಐಪಿ, ವಿವಿಐಪಿಗಳು. ಇವರೇ ನಿಜವಾದ ಅತಿಥಿಗಳು.

ಊಟದ ಸಮಯ. ಬಫೆ ಪದ್ಧತಿ ಇತ್ತು.

ಹೌಹಾರಿದರು ಅತಿಥೇಯರು.

ಜನರ ಸಾಲಿನಲ್ಲಿ ಗಣ್ಯಾತಿಗಣ್ಯರಿದ್ದಾರೆ!

ಮೇಲ್ವಿಚಾರಕನ ಮೇಲೆ ಹಾರಾಡಿದರು.

'ಬಯಸಿಯೇ ಕ್ಯೂನಲ್ಲಿ ನಿಂತರು' ಅವನ ವಾದ.

ದೊಡ್ಡವರು ಸಾವಿರ ಹೇಳಬಹುದು. ಇವನ ತಲೆ ಏನು ಕತ್ತೆ ಕಾಯಿತ್ತಿತ್ತೆ?

ಅತಿಥೇಯರು ತರಾತುರಿಯಲ್ಲಿ ಓಡಿದರು. ಆರಡಿ ದೇಹಾನ ಮೂರಡಿ ಮಾಡಿಕೊಂಡು ಹಲ್ಲು ಗಿಂಜಿದರು. ಕಾಡಿ ಬೇಡಿದರು. ಗಣ್ಯಾತಿಗಣ್ಯರಿಗೆ ಪ್ರತ್ಯೇಕ ಕೋಣೆಯಲ್ಲಿ ವ್ಯವಸ್ಥೆ ಮಾಡಿದರು.

ಸಂತೃಪ್ತಿಗೊಂಡಿತು ಅವರ ಆತ್ಮ!

ವಿಚಿತ್ರ ಅಲ್ಲ, ಸಹಜ ನಡವಳಿಕೆ.

ಸಾಮಾನ್ಯರಿಗೆ ಅವಮಾನ ಆಯಿತೆ?

ಎಲ್ಲಿಯ ಅವಮಾನ? ದೊಡ್ಡವರಿಗೊಂದು ನ್ಯಾಯ, ಇತರರಿಗೊಂದು ನ್ಯಾಯ. ಇದೇ ಇಲ್ಲಿ ಸಾಮಾನ್ಯ.

ಅಂಕಣ

▸ ಎಚ್.ಎಲ್. ಕೇಶವಮೂರ್ತಿ

ಅಂದು....

ಟಿ.ಟಿ. ಕೃಷ್ಣಮಾಚಾರಿ ಕೇಂದ್ರ ಅರ್ಥ ಸಚಿವರು.

ಸದನ ನಡೆಯುತ್ತಿತ್ತು. ಹಾಜರಿರಬೇಕೆಂಬ ತವಕ ಇವರಿಗೆ. ದಕ್ಷಿಣದ ಪ್ರವೇಶದ್ವಾರಕ್ಕೆ ಬಂದರು. ದ್ವಾರಪಾಲಕ ಗುರುತಿನ ಚೀಟಿ ಕೇಳಿದ. ತಡಕಾಡಿದರು. ಹೊರಡುವ ಆತುರದಲ್ಲಿ ಗುರುತಿನ ಚೀಟಿ ಮರೆತು ಬಂದಿದ್ದರು. ಅದು ಇಲ್ಲದಿದ್ದರೇನು? ಸಚಿವರಲ್ಲವೆ ಅವರು? ಗುರುತಿನ ಚೀಟಿ ಇಲ್ಲದೆ ಪ್ರವೇಶ ನಿರಾಕರಿಸಿದ ಅವ! ಕೇಂದ್ರದ ಅರ್ಥ ಸಚಿವ ಕಾನೂನಿನ ಎದುರು ಸಾಮಾನ್ಯನಾಗಿದ್ದ!

ಏನು ಮಾಡಿದರು ಟಿಟಿಕೆ?

ದ್ವಾರಪಾಲಕನ ಕರ್ತವ್ಯನಿಷ್ಠೆಗೆ ಮೆಚ್ಚಿ ತಲೆದೂಗಿದರು! ಹಿಂತಿರುಗಿ ಹೋಗಿ ಗುರುತಿನ ಚೀಟಿ ತಂದರು!

ಇಂದು.....

'ಅಬ್ದುಲ್ ಕಲಾಂ ಅವರಿಗೆ ಅಪಮಾನ'

ಸಂಸತ್ತಿನಲ್ಲಿ ಕೋಲಾಹಲ.

ಏನು ಅಪಮಾನ? ಯಾರು ಮಾಡಿದವರು?

ಕಾಂಟಿನೆಂಟಲ್ ಏರ್‌ಲೈನ್ಸ್‌ನವರು ಕಾಲುಚೀಲ ಬಿಚ್ಚಿಸಿ ಭದ್ರತಾ ತಪಾಸಣೆ ನಡೆಸಿದ್ದರು!

ಯಾವಾಗ? ಏಪ್ರಿಲ್ ತಿಂಗಳಿನಲ್ಲಿ. ಜುಲೈ ತಿಂಗಳಿನಲ್ಲಿ ಅರಿವಾಯಿತು- ರಾಷ್ಟ್ರಕ್ಕೆ ಅಪಮಾನ ಆಗಿದೆ!

ಸುರಕ್ಷತೆಯ ದೃಷ್ಟಿಯಿಂದ ಮಾಡಿದ ತಪಾಸಣೆ ಅದು. ವಿಮಾನ ಪ್ರಯಾಣಿಕರಿಗೆಲ್ಲ ಅದು ಕಡ್ಡಾಯ. ಅವಮಾನ ಎಲ್ಲಿಂದ ಬಂತು?

ಅವರು ಸಾರ್ವಜನಿಕರಲ್ಲ! ವಿವಿಐಪಿ! ಅಂತಹವರ ತಪಾಸಣೆ ದೇಶಕ್ಕೆ ಮಾಡಿದ ಅವಮಾನ!

ಸಂಸದರಲ್ಲವೆ ಅವರು? ಇಲ್ಲದ ಕಾರಣ ಕಂಡರು!

'ಅವರು ಹೆಸರು ನೋಡಿ ಮಾಡಿದ ತಪಾಸಣೆಯೆ ಇದು?' ಒಬ್ಬರ ಅರ್ಭಟ.

ಪಕ್ಷಾತೀತವಾಗಿ ಒತ್ತಾಯಿಸಿದರು- 'ಶಿಕ್ಷೆ ಆಗಬೇಕು'

ಯಾರಿಗೆ ಶಿಕ್ಷೆ? ಯಾತಕ್ಕೆ ಶಿಕ್ಷೆ?

ನಿಷ್ಠೆಯಿಂದ ಕೆಲಸ ಮಾಡಿದವರಿಗೆ! ಮಾಡಿದ್ದಕ್ಕೆ!

ಭದ್ರತಾ ತಪಾಸಣೆ ನಡೆಸುವುದು ಏತಕ್ಕೆ?

ತಪಾಸಣೆಗೆ ಒಳಗಾದವರೂ ಸೇರಿದಂತೆ ಯಾವ ಪ್ರಯಾಣಿಕರಿಗೂ ಅಪಾಯ ಆಗದಿರಲಿ ಎಂದು.

ಯಾವುದೇ ದುಷ್ಕೃತ್ಯಗಳಲ್ಲಿ ವಿವಿಐಪಿಗಳು ಭಾಗಿಯಾಗಿರಲು ಸಾಧ್ಯವಿಲ್ಲ. ತಪಾಸಣೆ ಅನಗತ್ಯ ಎಂಬುದು ಅವರ ವಾದ.

ಜಿಯಾ ಹುಲ್‌ಹಕ್ ಪಾಕಿಸ್ತಾನದ ಅಧ್ಯಕ್ಷರಾಗಿದ್ದರು.

ಅವರೂ ವಿವಿಐಪಿ ತಾನೆ?

ಭದ್ರತಾ ತಪಾಸಣೆಯಿಂದ ವಿನಾಯಿತಿ ಇತ್ತು.

ಅವರ ಕೊನೆಯ ವಿಮಾನ ಪ್ರಯಾಣ. ಲಗೇಜ್‌ನಲ್ಲಿ ಎಲ್ಲ ಸಾಮಾನುಗಳ ನಡುವೆ ಇನ್ನೊಂದು ಇತ್ತು. ಹಕ್ ಅವರಿಗೆ ಪ್ರಿಯವಾದ ಮಾವಿನಹಣ್ಣುಗಳ ಬುಟ್ಟಿ. ಅವರ ವಿರೋಧಿಗಳು ಮಾವಿನಹಣ್ಣಿನ ಆಕಾರದ ಬಾಂಬ್ ಅನ್ನು ಅದರಲ್ಲಿ ಸೇರಿಸಿದ್ದರು. ಬಾಂಬ್ ಸಿಡಿಯಿತು. ವಿಮಾನದಲ್ಲಿದ್ದವರೆಲ್ಲ ಸಾವನ್ನಪ್ಪಿದರು. ಕಲಾಂ ಅರಿವಿಗೇ ಬಾರದಂತೆ ಯಾರಾದರೂ ಅವರ ಜೇಬಿನ ಒಳಕ್ಕೆ ಅನಾಹುತಕಾರಿ ಬಾಂಬ್ ಹಾಕಿರುವ ಸಾಧ್ಯತೆ ಇರಬಹುದಲ್ಲಾ?

ಸಂಸದರು ಕೇಳಲು ಸಿದ್ಧರಿಲ್ಲ.

ಕಾಂಟಿನೆಂಟಲ್ ಏರ್‌ಲೈನ್ಸ್ ಕ್ಷಮಾಪಣೆ ಕೋರಿತು.

ಸಂಸದರಿಗೆ ಸಮಾಧಾನ ಇಲ್ಲ. ಅದು ತಪ್ಪೊಪ್ಪಿಗೆಯೇ



ಅಲ್ಲ, ತಪಾಸಣೆ ಮಾಡಿದ್ದಕ್ಕೆ ಕಾರಣ ನೀಡಿದ ವಿವರಣೆ ಮಾತ್ರ ಎಂಬುದು ಅವರ ಆಕ್ಷೇಪಣೆ. ಶಿಕ್ಷೆ ಆದಾಗಲೇ ಇವರಿಗೆ ಸಮಾಧಾನ!

ಕರ್ತವ್ಯನಿಷ್ಠೆಗೆ ನೀಡುವ ಪ್ರತಿಫಲ ಇಂತಹದ್ದು!

ಸೋಮಾರಿ ಬೆಳೆ

ಮಾಯಾವತಿಗೆ ನೀಡಿರುವ ಭದ್ರತಾ ಸಿಬ್ಬಂದಿ ಹಿಂತೆಗೆಯುವ ಸೂಚನೆ ಕೇಂದ್ರ ಸಚಿವರಿಂದ.

ರಣಾರಂಪ ಆಯಿತು ಸಂಸತ್ತು.

ಬಿಎಸ್‌ಪಿ ಸದಸ್ಯರಿಂದ ಕೂಗಾಟ. ಇದಕ್ಕೆ ಮುಲಾಯಂ, ಲಲ್ಲೂ ಬೆಂಬಲ.

ಇವರಿಗೆಲ್ಲ ಬ್ಲ್ಯಾಕ್ ಕ್ಯಾಟ್ ಕಮಾಂಡೋ ಭದ್ರತೆಯೇ ಬೇಕಂತೆ!

ಯಾವುದರ ಸಂಕೇತ ಇದು?

ಹದಗೆಡುತ್ತಿರುವ ಕಾನೂನು ಸುವ್ಯವಸ್ಥೆಯ ಸಂಕೇತ!

ಜನಸಾಮಾನ್ಯರು ಸಾಯಲಿ. ಅವರೇನು ಕಡಿಮೆ ಸಂಖ್ಯೆಯಲ್ಲಿಲ್ಲವಲ್ಲ. ರಾಜಕಾರಣಿಗಳಿಗೆ ಮಾತ್ರ ಭದ್ರತೆ ಬೇಕು!

ಪಡೆಯಲಿ ಪಾಪ. ಸ್ಥಳೀಯ ಪೊಲೀಸರು ನೀಡಿದರೆ ಆದೀತೆ?

ಇಲ್ಲವಂತೆ. ಇದು ಅವರ ಘನತೆಯ ಪ್ರಶ್ನೆ. ಅ[...]
ಅವರಿದ್ದರೆ ಅದರ ಖದರೇ ಬೇರೆ!

ಇವರ 'ಘನತೆ'ಯ ಹೋರಾಟಕ್ಕೆ ಬಗ್ಗಿತು ಸರ[...]
ಮುಂದುವರೆಸಲು ಒಪ್ಪಿತು ಕಮಾಂಡೋ ಭದ್ರತೆ[...]

ಈ ಕಮಾಂಡೋಗಳೇನು ಮಾಡುತ್ತಾರೆ?

ಈ ಘನತೆವೆತ್ತ ನಾಯಕ ಶಿಖಾಮಣಿಗ[...]
ಯಾರಿಂದಲೂ ಪ್ರಾಣಭಯ ಇಲ್ಲ ಎಂಬುದು ಅ[...]
ತಿಳಿದುಹೋಗಿದೆ. ಸೋಮಾರಿಗಳಾಗಿ ಕಾಲ ಕಳೆಯು[...]
ಇಂತಹ ಒಂದು ಸಾವಿರ ಜನರು ರಾಜಕಾರಣಿಗ[...]
'ಭದ್ರತೆ' ನೀಡುತ್ತಾ ಸೋಮಾರಿತನದ ಸುಖ ಅನುಭ[...]
ತ್ತಿದ್ದಾರಂತೆ!

ಸಾರ್ವಜನಿಕ ಹಣದಲ್ಲಿ ಹುಲುಸಾದ ಸೋಮ[...]
ಬೆಳೆ!

ಸಾವಿಗೆ ಬೆದರಿದರು!

ಸನ್ಯಾಸಿಗಳು ಎಂದರೆ ಯಾರು?

ಸರ್ವಸಂಗ ಪರಿತ್ಯಾಗಿಗಳು! ಅಂಜ[...]
ಸಾವಿಗೆ ಎಂದು ಬೋಧಿಸುವವರು! ಆದರ[...]
ಅವರಿಗೇ ಸಾವಿನ ಭಯ!

ಇದರಿಂದ ಕಾಪಾಡಬಾರದೆ ಜಗದ[...]
ಗಳನ್ನ? ಮುಂದಾಯಿತು ಮಠದ ಸರ[...]
ಹನ್ನೊಂದು ಮಠಾಧೀಶರಿಗೆ ಭದ್ರತೆ ನ[...]
ದರು ಯಡ್ಯೂರಪ್ಪ.

ಇವರಿಗೂ ಬ್ಲ್ಯಾಕ್ ಕ್ಯಾಟ್ ಕಮಾಂಡೋ ಮಾದರಿ ಭದ್ರತೆಯೆ?

ಛೇ ಛೇ. ಇವರ ಪ್ರಾಣಭಯ ಇ[...]
ಆ ಮಟ್ಟಕ್ಕೆ ಏರಿಲ್ಲ. ಕೇವಲ ಧೀರ ಪೊಲಿ[...]
ಭದ್ರತೆ.

ಏನು ಮಾಡುತ್ತಾರೆ ಈ ಭದ[...]
ಪೊಲೀಸು?

ಅದೇ ಕತೆ. ಮಠದ ಊಟ. ಛತ್ರದ ನಿದ್ದೆ. ಸೊಗ[...]
ಹೊಟ್ಟೆ ಬೆಳೆಸುತ್ತಾರೆ!

ಆದರೂ ಈ ಭದ್ರತೆ ಇರಬೇಕು. ಇದು ಮ[...]
ಘನತೆ ಪ್ರಶ್ನೆ!

ಕೊಡಲಿ ಬಿಡಿ. ಇವರು ಸಾರ್ವಜನಿಕರಲ್ಲವಲ್ಲ[...]

ಯಾರಿಗೆ ನೈತಿಕ ಶಿಕ್ಷಣ?

ಮಂಡ್ಯದಲ್ಲಿ ಇತ್ತೀಚೆಗೆ ಒಂದು ಸಮಾರಂಭ.

ಮುರುಘಾಮಠದ ಶಿವಮೂರ್ತಿ ಶರಣರು ಅತಿ[...]

ಸಮಾರಂಭದಿಂದ ತುರ್ತಾಗಿ ನಿರ್ಗಮಿಸಿದ[...]
ಅವರು ಬೆಳಗಾಂಗೆ ಹೋಗಬೇಕಾಗಿತ್ತು. ಅಲ್ಲಿನ ಹಿ[...]
ಲಗಾ ಸೆರೆಮನೆಯ ಕೈದಿಗಳಿಗೆ ಆಧ್ಯಾತ್ಮ ಪ್ರವ[...]
ನೀಡಬೇಕಿತ್ತಂತೆ. ಸೆರೆಮನೆಯ ಅಧಿಕಾರಿಗಳೇ ಇವರ[...]
ಕೇಳಿಕೊಂಡಿದ್ದರಂತೆ. ಶರಣರೇ ಇದನ್ನು ಹೇಳಿದರು[...]

ಕುಮಾರ್ ಸಮತಳ ಅವರ 'ಜೈಲೆಂಬ ಲೋಕದ[...]
ಪುಸ್ತಕವನ್ನು ಆಗತಾನೆ ಓದಿದ್ದೆ. ಅದು ಇನ್ನೂ [...]
ಕೊರೆಯುತ್ತಿತ್ತು. ಶರಣರ ಮಾತನ್ನು ಕೇಳಿ ಅನ್ನಿಸಿದ್ದು-ಶರ[...]
ಪ್ರವಚನದ ಅವಶ್ಯಕತೆ ಯಾರಿಗೆ ಹೆಚ್ಚಿದೆ? ಕೈದಿಗಳಿಗೆ[...]
ದುರ್ವರ್ತನೆಯ ಸಾಕಾರ ಮೂರ್ತಿಗಳಂತಿರುವ ಜೈ[...]
ಅಧಿಕಾರಿಗಳಿಗೊ?

ಮತಾಂತರ: ಮತ್ತೆ ಆಲಾಪಿಸಿದ ಭೈರಪ್ಪ!

ಎಸ್.ಎಲ್. ಭೈರಪ್ಪನವರಿಗೆ 76 ವರ್ಷ ತುಂಬಿದ ಸಂದರ್ಭ "ಸಂಯುಕ್ತ ಕರ್ನಾಟಕ" ಪತ್ರಿಕೆಯ ಸಾಪ್ತಾಹಿಕ (ಜುಲೈ, 26) ಕ್ಕೆ ನೀಡಿದ ಸಂದರ್ಶನದಲ್ಲಿ ಮತಾಂತರ ಕುರಿತು ಮತ್ತೆ ಆಕ್ಷೇಪಿಸಿದ್ದಾರೆ. ಇಸ್ಲಾಂ ಧರ್ಮದ ಬಗ್ಗೆ ಪೂರ್ವಾಗ್ರಹ ಪೀಡಿತ ಸಿದ್ಧ ಕಲ್ಪನೆಯನ್ನಿಟ್ಟುಕೊಂಡು ಸಹಿಷ್ಣುತೆ ಎಲ್ಲಾ ಧರ್ಮಗಳಲ್ಲೂ ಇರಬೇಕು, ಇದಾಗದೇ ಭಯೋತ್ಪಾದನೆ ಮೆಟ್ಟಲು ಸಾಧ್ಯವಿಲ್ಲ ಎನ್ನುವ ಭೈರಪ್ಪನವರು ತಾವು ವಕ್ತಾರಿಕೆ ಮಾಡುತ್ತಿರುವ ವರ್ಣಾಶ್ರಮ ಧರ್ಮದ ಸಹಿಷ್ಣುತೆಯ ಪುರಾಣದ ಪುಟಗಳನ್ನು ಒಮ್ಮೆ ತಿರುವಿ ಹಾಕಬೇಕು. ಒಬ್ಬ ಚಾಂಡಾಲ ಮತ್ತು ನಾಯಿಯನ್ನು ಸಮಾನರೆಂದು ಪರಿಗಣಿಸಬೇಕಾದರೆ ಭೈರಪ್ಪ ಪ್ರತಿನಿಧಿಸುವ ಧರ್ಮದಲ್ಲಿ ಆಧ್ಯಾತ್ಮಿಕವಾಗಿ ಔನ್ನತ್ಯಕ್ಕೇರಿದ ಸ್ಥಿತಪ್ರಜ್ಞನಾಗಬೇಕು. ಇಂತಹ ಆಯಾಮಕ್ಕೆ ತಲುಪಿದಂತವರ ದೃಷ್ಟಿಯಲ್ಲಿ ಚಾಂಡಾಲ ನಾಯಿಗಿಂತ ಕೀಳು. ವರ್ಣಾಶ್ರಮ ಧರ್ಮದ ಅತ್ಯುಚ್ಚ ಆಧ್ಯಾತ್ಮಿಕತೆ ಚಾಂಡಾಲ ಮತ್ತು ನಾಯಿಯನ್ನು ಸಮಾನವಾಗಿ ಕಾಣುವಲ್ಲಿಗೆ ತಲುಪಿಸುತ್ತದೆ. ನಾಯಿಗಿಂತ ಮೇಲಾಗಿ ಕಾಣುವ ಸಹಿಷ್ಣುತೆ ಅದರ ಪರಮೋನ್ನತ ಆಯಾಮಕ್ಕೂ ಸಾಧ್ಯವಿರದಿರುವಾಗ ಉಳಿದಂತೆ ತಲೆಯಿಂದ ಸೃಷ್ಟಿಸಲ್ಪಡದ ಜಾತಿಗಳ ಬಗ್ಗೆ ಅದರ ಸಾರ್ವತ್ರಿಕ ನಿಲುವಿನ ಸಹಿಷ್ಣುತೆಯ ಮಾದರಿಗಳನ್ನು ನಾವು ಅಂದಾಜಿಸಬಹುದು.

ಒಂದು ಸಿದ್ಧಾಂತ, ತತ್ವ, ಧರ್ಮವನ್ನು ಒಪ್ಪಿಕೊಂಡು ಅದರ ಪ್ರಚಾರದಲ್ಲಿ ತೊಡಗುವುದರಲ್ಲಿ ಭೈರಪ್ಪನವರಿಗೆ ತಪ್ಪು ಕಾಣುತ್ತಿರುವುದು ಆಶ್ಚರ್ಯ. ಸ್ವತಃ ಅವರು ಕೂಡಾ ಇಷ್ಟೆಲ್ಲ ಬರೆಯುತ್ತಿರುವುದು ತನ್ನ ವಿಚಾರವನ್ನು ಇತರರಿಗೆ ತಲುಪಿಸಬೇಕೆಂಬ ಉದ್ದೇಶದಿಂದಲ್ಲವೇ? ವರ್ಣಾಶ್ರಮ ಧರ್ಮದ ಅಗ್ಗಳಿಕೆಯನ್ನು ಭೈರಪ್ಪ ಭಾಷಣ ಮತ್ತು ಲೇಖನಗಳಲ್ಲಿ ಪ್ರತಿಪಾದಿಸಬಹುದಾದರೆ ಮುಸ್ಲಿಮ್ ಮತ್ತು ಕ್ರೈಸ್ತರಿಗೆ ಆ ಸ್ವಾತಂತ್ರ್ಯದ ನಿರಾಕರಣೆ ಅಸಹಿಷ್ಣುತೆಗೆ ಜ್ವಲಂತ ಉದಾಹರಣೆಯಲ್ಲವೇ? ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದ ಪ್ರಚಾರದಿಂದ ಬೇರೊಂದು ಧರ್ಮಕ್ಕೆ ಹಾನಿಯಾಗುತ್ತದೆ ಎಂದರೆ ಪರೋಕ್ಷವಾಗಿ ಆ ಧರ್ಮದ ಬುನಾದಿ ಅಷ್ಟೊಂದು ದುರ್ಬಲ ಎಂದು ಒಪ್ಪಿಕೊಂಡಂತಾಗುವುದಿಲ್ಲವೇ?

ಹೊಗಳಿಕೆ ತೆಗಳಿಕೆ

ವಾಸ್ತವದಲ್ಲಿ ಬಲಾತ್ಕಾರದ ಮತಾಂತರ ಎಂಬ ಕಲ್ಪನೆಯೇ ತಪ್ಪು. ಕೈಕಾಲುಗಳಿಗೆ ಸಂಕೋಲೆ ತೊಡಿಸಿ ಬಲಾತ್ಕಾರವಾಗಿ ಅಮೇಧ್ಯ ತಿನ್ನಿಸಬಹುದೇ ಹೊರತು, ಒಬ್ಬನ ವಿಚಾರಗಳನ್ನು ಬಲಾತ್ಕಾರವಾಗಿ ಬದಲಿಸುವಂತೆ ಮಾಡುವುದು ಅಸಾಧ್ಯ. ಪರಂಪರಾಗತವಾಗಿ ನಂಬಿಕೊಂಡು ಬಂದ ಒಂದು ಧರ್ಮವನ್ನು ಆಮಿಷ, ಬೆದರಿಕೆಯಿಂದ ಬದಲಿಸಲು ಸಾಧ್ಯವಿದೆ ಎಂದು ಹೇಳುವುದು ಪೂರ್ವ ಧರ್ಮಕ್ಕೆ ಮಾಡುವ ಅವಮಾನವಾಗುತ್ತದೆ. ಮುಸ್ಲಿಮರು ಮತ್ತು ಕ್ರೈಸ್ತರು ವ್ಯಕ್ತಿಗೆ ಮತಾಂತರವಾಗುವ ಅವಕಾಶವಿರಬೇಕು ಎಂದು ವಾದಿಸುತ್ತಿರುವಾಗ ಕೆಲವರು ಅದನ್ನು ವಿರೋಧಿಸುತ್ತಿರುವುದು ಪರೋಕ್ಷವಾಗಿ ಅವೆರಡು ಧರ್ಮಗಳ ತಾತ್ವಿಕ ಪ್ರಾಬಲ್ಯದ ಮುಂದೆ ತಾನು ದುರ್ಬಲ ಎಂದು ಒಪ್ಪಿಕೊಂಡಂತಾಗುವುದಿಲ್ಲವೇ?

ವರ್ಣಾಶ್ರಮ ಹೇರಿದ ಅಮಾನವೀಯ ಜಾತಿಪದ್ಧತಿಯ ಬಿಗಿಹಿಡಿತವು ಆಧುನಿಕ ಶಿಕ್ಷಣ ಮತ್ತು ಇಸ್ಲಾಮ್ ಹಾಗೂ ಕ್ರೈಸ್ತ ಧರ್ಮಗಳ ಪ್ರಭಾವದಿಂದ ತಕ್ಕಮಟ್ಟಿಗೆ ಸಡಿಲಗೊಳ್ಳುತ್ತಿರುವುದು ಶುಭಸೂಚನೆಯಾಗಿದೆ. ಧಾರ್ಮಿಕೇತರ ಕಾರಣಗಳಿಂದ (ಆರ್ಥಿಕತೆ, ಕೈಗಾರೀಕರಣ ಇತ್ಯಾದಿ) ಜಾತಿ ಪದ್ಧತಿ ದುರ್ಬಲಗೊಳ್ಳುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸುವ ಭೈರಪ್ಪನವರು ವರ್ಣಾಶ್ರಮ ಧರ್ಮದ ಮೂಲಭೂತ ಸಿದ್ಧಾಂತಗಳಲ್ಲಿ ತಿದ್ದುಪಡಿ ತಂದು ಜಾತಿಪದ್ಧತಿಯ ಆಮೂಲಾಗ್ರ ನಿರ್ಮೂಲನೆಗೆ ಯಾವತ್ತಾದರೂ ಪ್ರಯತ್ನಿಸಿದ್ದಾರೆಯೇ? ಹೀಗೆ ಮಾಡುವುದರಿಂದ ಅವರನ್ನು ತಡೆಯುತ್ತಿರುವುದೇನು? ಶೂದ್ರ ಅರ್ಚಕನೊಬ್ಬ ಬೆಳಗುವ ಆರತಿಯನ್ನು ಬ್ರಾಹ್ಮಣ ಎತ್ತಿಕೊಂಡು, ಆತ ನೀಡುವ ಪ್ರಸಾದವನ್ನು ಸ್ವೀಕರಿಸುವುದು ಸಾರ್ವತ್ರಿಕವಾದಾಗ (ಕಣ್ಣಿಗೆ ಮಣ್ಣೆರಚಲು ಅಪರೂಪದ ಪ್ರಸಂಗವಲ್ಲ) ಜಾತಿ ನಿರ್ಮೂಲನ ಅದೆಷ್ಟು ಸುಲಭ ಅಲ್ಲವೇ? ಪುರಾಣದ ಕಥೆಗಳಲ್ಲಿ ಬರುವ ನಿಧಿ ಕಾಯುವ ಸರ್ಪದಂತೆ ಜಾತಿಪದ್ಧತಿಯ ರಕ್ಷಣೆಗೆ ಸುತ್ತಲೂ ಬಲಿಷ್ಠ ಭಿತ್ತಿಯ ಆವರಣ ನಿರ್ಮಿಸಿರುವ ವರ್ಣಾಶ್ರಮ ಧರ್ಮ ಇದಕ್ಕೆ ಸಿದ್ಧವಾಗುತ್ತದೆ ಎಂದು ನಂಬುವುದು ಕಷ್ಟ.

-ಎ.ಜೆ. ಕಾಟಿಪಳ್ಳ

ಆಗಸ್ಟ್ 5 ರ ಸಂಚಿಕೆಯಲ್ಲಿ ಕೆಎಂಎಫ್‌ಗೆ ರಾ[...]
ಲಿಂಗೇಗೌಡನ ದೋಖಾವನ್ನು ಚೆನ್ನಾಗಿ ಬಯ[...]
ಗೆಳೆದಿದ್ದೀರಿ. ಈ ರಾಮಲಿಂಗೇಗೌಡನಿಗೆ ತಾನು [...]
ಮುಂದೆಯೂ ಎಂ.ಡಿ.ಯಾಗಿರುವುದು ಸಾಧ್ಯವಿಲ್ಲ ಎ[...]
ವುದು ಗೊತ್ತಾಗಿ ಯಾವ ರೀತಿ ಸಂಸ್ಥೆಯನ್ನು ಅಧೋಗ[...]
ತಳ್ಳುತ್ತಿದ್ದಾನೆಂದರೆ ಮುಂದೆ ಎಂ.ಡಿ.ಯಾದವರು ಸಂಸ್ಥೆ[...]
ಹಣಕಾಸು ಸ್ಥಿತಿಯನ್ನು ಸುಧಾರಿಸುವುದಕ್ಕೇ ಅವರ ಅ[...]
ಪೂರ್ತಿ ಶ್ರಮಿಸಬೇಕು. ಇದರಿಂದಾಗಿ ಇವನಿಗೆ ಎರ[...]
ರೀತಿಯ ಲಾಭ. ಒಂದನೆಯದು ಇವನು ಚೆನ್[...]
ಮೇಯ್ದು ದುಂಡಗಾದರೆ ಎರಡನೆಯದು ಮುಂದೆ ಬರ[...]
ಎಂ.ಡಿ.ಗೆ ಅಭಿವೃದ್ಧಿ ಕೆಲಸಗಳನ್ನು ಮಾಡಲಿಲ್ಲವೆ[...]
ಕೆಟ್ಟ ಹೆಸರು. ಕೇವಲ 5-6 ವರ್ಷಗಳಲ್ಲಿ ಅ[...]
ಸಂಖ್ಯೆಯ ಪ್ರಮೋಷನ್‌ಗಳನ್ನು ತೆಗೆದುಕೊಂಡ [...]
ರಾಮಲಿಂಗೇಗೌಡ (ಇವನಿಗೆ mutual trans[...]
ಆಗಿ ದಕ್ಷಿಣ ಕನ್ನಡ ಹಾಲು ಒಕ್ಕೂಟಕ್ಕೆ ಹೋ[...]
ಶಾಂತಾರಾಮ್ ಎನ್ನುವ ಅಧಿಕಾರಿ ಇನ್ನೂ ಡೆಪ್ಯ[...]
ಮ್ಯಾನೇಜರ್ ಆಗಿಯೇ ಸೇವೆ ಸಲ್ಲಿಸುತ್ತಿದ್ದಾರೆ) ಫೈನಾ[...]
ರೆಡ್ಡಿಯೊಂದಿಗೆ ಸೇರಿ ಯಾವ ಪರಿ ಮೇಯ್ದಿದ್ದಾನೆಂ[...]
ಚಂದ್ರಲೇಔಟ್‌ನಲ್ಲಿ ಸ್ವಂತ ಮನೆ ಇದ್ದರೂ ಕೆಂಗೇರಿ[...]
ಹತ್ತಿರ 2 ಕೋಟಿ ರೂಪಾಯಿಯ ಮನೆ ಕಟ್ಟಿಸುತ್ತಿದ[...]
ಇವನ ಅವಧಿಯಲ್ಲಿ ನಡೆದ ಎಲ್ಲಾ ಕಾಮಗಾರಿಗಳ[...]
ನೇಮಕಾತಿಗಳನ್ನು, ಖಾಸಗಿ ಡೈರಿಯವರ ಜೊ[...]
ಮಾಡಿಕೊಂಡ ಡೀಲುಗಳನ್ನು ತನಿಖೆಗೊಳಪಡಿಸಿ, ರೈ[...]
ಸಂಸ್ಥೆಯ ಹಣವನ್ನು ಕೊಳ್ಳೆ ಹೊಡೆದ ಇವನಿಗೆ [...]
ಕೊಡಿಸುವ ಹೊಣೆ ಸರ್ಕಾರದ ಮೇಲಿದೆ.

-ಹಾಲೇಶ, ಬೆಂಗಳೂ[...]



ರಿಕಿ ಕೇಜ್

ನೀ ಬದಲಾದರೆ....!

ಕಳೆದೊಂದು ವಾರದಿಂದ ಇಂಟರ್‌ನೆಟ್‌ನ
ಟ್ಯೂಬ್‌ನಲ್ಲಿ 'ನೀ ಬದಲಾದರೆ' ಎಂಬ
ಡದ ಗೀತೆಯೊಂದು ಬಹಳಷ್ಟು ಜನರನ್ನು
ಯುತ್ತಿದೆ.

ಕನ್ನಡದ ಮಟ್ಟಿಗೆ ಈಗಷ್ಟೇ ಕಣ್ಣು
ಯುತ್ತಿರುವ ಆಲ್ಬಂ ಲೋಕದಲ್ಲಿ ಈವರೆಗೆ
ದಿರುವುದು ಬರೀ ಲವ್ ಸಾಂಗುಗಳು
ತ್ರ. ಅದನ್ನು ಬಿಟ್ಟರೆ, ಕಾಲೇಜು
ಹುಗರಿಗೆ ಸಂಬಂಧಿಸಿದ ಕೆಲವು ಆಲ್ಬಂಗಳೂ
. ಆದರೆ ಈಗ ಸಂಗೀತ ನಿರ್ದೇಶಕ ರಿಕ್ಕಿ
ಜ್ ಹೊಸದೊಂದು ಪ್ರಯತ್ನ ಮಾಡಿ 'ನೀ
ಲಾದರೆ' ಮೂಲಕ ಎಲ್ಲರನ್ನೂ
ಗುಗೊಳಿಸಿದ್ದಾರೆ.

ಈ ಹಿಂದೆ ರಮೇಶ್ ಅರವಿಂದ್
ದೇಶನದ 'ಆಕ್ಸಿಡೆಂಟ್' ಮತ್ತು 'ವೆಂಕಟ ಇನ್
ಟ' ಎಂಬೆರಡು ಚಿತ್ರಗಳಿಗೆ ಸಂಗೀತ
ದೇಶನ ಮಾಡಿದ್ದರು ರಿಕ್ಕಿ ಕೇಜ್.
ಡೆಂಟ್' ಚಿತ್ರದಲ್ಲಿ ಬಿ.ಆರ್. ಲಕ್ಷ್ಮಣರಾವ್
ರ 'ಬಾ ಮಳೆಯೇ ಬಾ....' ಎಂಬ
ವಗೀತೆಯ ಸಾಲುಗಳನ್ನು ಸಿನಿಮಾಕ್ಕೆ
ಂದಿಸಿ ರಿಕ್ಕಿ ಮಾಡಿದ್ದ ಮ್ಯೂಸಿಕ್ಕು ಸಾಕಷ್ಟು
ಪ್ಯುಲರ್ ಆಗಿತ್ತು. ಆದರೆ ಆ ಒಂದು
ಯೊಂದನ್ನು ಬಿಟ್ಟರೆ ರಿಕ್ಕಿಯ ಯಾವ
ತುಗಳೂ ಹಿಟ್ ಆಗಿರಲಿಲ್ಲ. ಇದರಿಂದ
ರಂಗದಲ್ಲಿ ಈತನಿಗೆ
ಕಾಶವೂ ಅಷ್ಟಕ್ಕಷ್ಟೇ
ಂತಾಗಿದೆ.

ಸಿನಿಮಾಗಳಲ್ಲಿ
ಕಾಶಗಳಿಲ್ಲದೆ ಕುಳಿತಿದ್ದ ರಿಕ್ಕಿಗೆ
ಬದಲಾದರೆ' ಎಂಬ
ೊಂದನ್ನು ಮಾಡುವ
ಯಾ ಹೊಳೆಯಿತಂತೆ. ಆಗ
ದಲ್ಲಿ ಸದ್ಯಕ್ಕೆ
ಯಲ್ಲಿರುವ ಹಲವಾರು
ಕರನ್ನು ಒಂದೆಡೆ ಸೇರಿಸಿ
ದು ಸಮಾಜಮುಖಿಯಾದ,
ಪ್ರೇಮವನ್ನು ಸಾರುವ ಆಲ್ಬಂ ಮಾಡಲು
ಸ್ಸು ಮಾಡಿದರಂತೆ. ಇದಕ್ಕಾಗಿ ರಿಕ್ಕಿ ಒಂದು
ನ್‌ಅನ್ನೂ ಸಿದ್ಧ ಮಾಡಿದರಂತೆ. ಆ ಟ್ಯೂನ್‌ಗೆ
ತ್ಯ ಯಾರಿಂದ ಬರೆಸುವುದು ಎಂದು
ಚಿಸಿದಾಗ ರಿಕ್ಕಿಗೆ ಹೊಳೆದದ್ದು ಕವಿರಾಜ್.

ರಿಕ್ಕಿ ಕೇಜ್ ಕವಿರಾಜ್‌ರನ್ನು ಕರೆದು ದೇಶಪ್ರೇಮವನ್ನು ಅಭಿವ್ಯಕ್ತಗೊಳಿಸುವಂಥಾ ಒಂದು ಹಾಡು ಬರೆದುಕೊಡು ಎಂದಾಗ 'ಕವಿ' ಮನಸ್ಸಿಗೆ "ಮಾಮೂಲಿ ಪ್ಯಾಟ್ರನ್ ಬಿಟ್ಟು ಬೇರೇನಾದರೂ ಬರೆಯಬೇಕು. ದೇಶಕ್ಕಾಗಿ ಪ್ರಾಣ ಕೊಡಿ, ಜೀವಬಿಡಿ... ಎಂಬ ಅತಿಶಯೋಕ್ತಿಯ ಸಾಲುಗಳನ್ನು ಬರೆದರೆ ಅದು ಕೇಳುಗರನ್ನು ರೋಮಾಂಚನಗೊಳಿಸುತ್ತದೆ. ಆದರೆ ಇವತ್ತಿನ ನಮ್ಮ ಜನ ದೇಶಕ್ಕಾಗಿ ಪ್ರಾಣ ಕೊಡುವ ಉದಾರ ಮನೋಭಾವ ಹೊಂದಿಲ್ಲವಾದ್ದರಿಂದ ಮತ್ತದೇ ಪದಗಳನ್ನು ಪೋಣಿಸುವುದು ಬೇಡ. ಬದಲಾಗಿ 'ಬದಲಾವಣೆ'ಯ ಆಶಯಗಳನ್ನು ಹೊರಡಿಸಿದರೆ ಹೇಗೆ?'' ಎಂದೆನಿಸಿ ಈ ಗೀತೆಯನ್ನು ಬರೆದಿದ್ದಾರೆ.

ತುಂಬು ಪ್ರತಿಮನಸಲ್ಲಿ ಹೊಸ ಹೊಸ ಬಣ್ಣವಾ...
ತುಂಬು ಪ್ರತಿ ಎದೆಯಲ್ಲಿ ಛಲ, ಬಲ, ಸ್ಥೈರ್ಯವಾ
ಜನಗಣಮನ ಮೊಳಗಲಿ ಎಲ್ಲೆಡೆಯಿಂದು
ಜನಗಳಾ ಮನ ಸಮ್ಮೇಳಗೊಳಲಿ ಎಂದೆಂದು....

ಬದಲಾಗುವುದು ಈ ಲೋಕ ನೀ ಬದಲಾದರೆ
ಸರಿಯಾಗುವುದು ಸಮಾಜ ನೀ ಮೊದಲಾದರೆ...
ನವ ಭಾರತವ ಕಟ್ಟುವ ಆಣೆಯ ಮಾಡೋಣ
ಹೊಸದೇ ಸಂವತ್ಸರ ಶುರುವಾಗುವುದು ನೀ
ನೋಡು..




ಇದು ಕವಿರಾಜ್ ಬರೆದಿರುವ ಹಾಡಿನ ಸಾಲುಗಳು. ಸಾಮಾನ್ಯವಾಗಿ ಕಮರ್ಷಿಯಲ್ ಚಿತ್ರಗಳಲ್ಲಿ 'ಚಿತ್ರಾನ್ನ ಚಿತ್ರಾನ್ನ' ಎಂಬಂಥ ಹಾಡುಗಳನ್ನು ಬರೆಯುವ ಕವಿರಾಜ್ 'ನೀ ಬದಲಾದರೆ' ಹಾಡನ್ನು ಬರೆಯುವ ಮುನ್ನ ತಾವೂ ಕೊಂಚ ಬದಲಾಗಿರುವುದು ಇದರಿಂದ ಗೊತ್ತಾಗುತ್ತದೆ.

ಹಾಗೆ ನೋಡಿದರೆ ದೂರದರ್ಶನ ಆರಂಭವಾದ ದಿನಗಳಲ್ಲಿ ಕನ್ನಡ ಚಿತ್ರರಂಗದ ಹಾಗೂ ಕಿರುತೆರೆಯ ಬಹುತೇಕ ಎಲ್ಲ ನಟರೂ ಸೇರಿ ಕುವೆಂಪು ರಚಿಸಿದ್ದ 'ಜೈ ಭಾರತ ಜನನಿಯ ತನುಜಾತೆ' ಎಂಬ ನಾಡಗೀತೆಯ ದೃಶ್ಯ ರೂಪಕದಲ್ಲಿ ಕಾಣಿಸಿಕೊಂಡಿದ್ದರು. ಅದಾದ ನಂತರ ದೇಶದೆಲ್ಲೆಡೆ ಜನಪ್ರಿಯವಾಗಿದ್ದು ಅಸ್ಗರ್ ಖಾನ್ ರಚಿಸಿದ್ದ 'ಮಿಲೇ ಸುರ್ ಮೇರಾ ತುಮ್ಹಾರಾ' ಗೀತೆ. ಇದು ಇವತ್ತಿಗೂ ದೂರದರ್ಶನದಲ್ಲಿ ಆಗಾಗ್ಗೆ ಪ್ರಸಾರವಾಗುತ್ತಿರುತ್ತದೆ. ಹಿಂದಿ ಸಿನಿಮಾದ ನಟನಟಿಯರು, ಸಂಗೀತ ದಿಗ್ಗಜರು, ಕ್ರಿಕೆಟ್ ಪಟುಗಳು... ಹೀಗೆ ಇಂಡಿಯಾ ದೇಶದ ಅತಿರಥ ಮಹಾರಥರಿಂದ ಹಿಡಿದು ಆನೆಯ ಮೇಲೆ ಕುಳಿತ ಮಾವುತ, ಕಡಲಿನ ಬೆಸ್ತರಂಥ ಸಾಮಾನ್ಯ ಪ್ರಜೆಗಳ ತನಕ ಎಲ್ಲರೂ ಕಾಣಿಸಿಕೊಂಡಿದ್ದ ಆ ಗೀತೆ ಬಹುಶಃ ಯಾವ ಟೀವಿ ವೀಕ್ಷಕನಿಗೂ ಗೊತ್ತಿರದಿರಲು ಸಾಧ್ಯವಿಲ್ಲ. ಇನ್ನು ಇತ್ತೀಚಿನ ವರ್ಷಗಳಲ್ಲಿ ಎ.ಆರ್. ರೆಹಮಾನ್‌ರ 'ಮಾ ತುಜೇ ಸಲಾಂ....' ಅಂತೂ ಪ್ರತಿಯೊಬ್ಬ ದೇಶಪ್ರೇಮಿಯ ಆರಾಧನಾ ಗೀತೆಯಾಗಿತ್ತು. ಈಗ ಅದೇ ಹಾದಿಯಲ್ಲಿ ರಿಕ್ಕಿ ಕೇಜ್ ಮತ್ತು ಕವಿರಾಜ್‌ರ ಗೀತೆಯೂ ಸಾಗಿದೆ.

ರಿಕ್ಕಿಯ ಒತ್ತಾಸೆಗೆ ಮಣಿದು ಬಿ.ಜಯಶ್ರೀ, ಎಂ.ಡಿ. ಪಲ್ಲವಿ, ಅವಿನಾಶ್ ಶೆಟ್ಟಿ, ಎಲ್.ಎನ್. ಶಾಸ್ತ್ರಿ, ಹೇಮಂತ್ ಹಾಗೂ ರಾಜೇಶ್ ಕೃಷ್ಣನ್‌ರಂಥ ಗಾಯಕರು ಯಾವ ಸಂಭಾವನೆಯನ್ನೂ ಅಪೇಕ್ಷಿಸದೆ ಈ ಹಾಡಿನಲ್ಲಿ ಪಾಲ್ಗೊಂಡಿದ್ದಾರೆ. ಈ ಹಾಡಿನಲ್ಲಿ ನಟ ರಮೇಶ್ ಅರವಿಂದ್ ಸಹ ಪಾಲ್ಗೊಂಡಿರುವುದು ವಿಶೇಷ.

ಈ ಆಲ್ಬಂನ ನಿರ್ದೇಶಕ ಅಲೋಕ್ ಶೆಟ್ಟಿ ಈ ಹಾಡನ್ನು ಹೊರಾಂಗಣದಲ್ಲಿ ಚಿತ್ರೀಕರಿಸದೇ ಒಂದು ಸಣ್ಣ ರೆಕಾರ್ಡಿಂಗ್ ರೂಮಿನಲ್ಲೇ ಚೆಂದವಾಗಿ, ಚೊಕ್ಕವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಶೂಟ್ ಮಾಡಿದ್ದಾರೆ. ಅದೆಲ್ಲ ಏನೇ ಇದ್ದರೂ ಯುವ ಪ್ರತಿಭೆಗಳೆಲ್ಲಾ ಸೇರಿ ಇಂಥ ಸಮಾಜಮುಖಿ ಹಾಡನ್ನು ನಿರ್ಮಿಸಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ.

● ಅರುಣ್.ಜೆ




ಕವಿರಾಜ್



ಮಾಧ್ಯಮದ ಮುಂದೆ ಮಣಿದವರು

ರಾಕ್‌ಲೈನ್ ವೆಂಕಟೇಶ್ ಮತ್ತು ಎಸ್. ನಾರಾಯಣ್ ತಾವೇ ಹಾಕಿದ ನಿರ್ಬಂಧವನ್ನು ಮುರಿದು ಸುದ್ದಿ ಮಾಡಿದ್ದಾರೆ.

ಈ ಹಿಂದೆ ಸಿನಿಮಾ ಪತ್ರಕರ್ತರನ್ನು ಮತ್ತು ಸಿನಿಮಾ ಪತ್ರಿಕಾಗೋಷ್ಠಿಗಳನ್ನು ಸ್ವಯಂ ನಿರ್ಬಂಧಿಸಿದವರಲ್ಲಿ ರಾಕ್‌ಲೈನ್ ವೆಂಕಟೇಶ್ ಮತ್ತು ನಾಣಿ ಪ್ರಮುಖರು.




ಇವರಿಬ್ಬರೂ ತಮ್ಮ ನಿರ್ಮಾಣದ ಚಿತ್ರಗಳ ಸ್ಟಿಲ್ಸ್‌ಗಳನ್ನು ಪತ್ರಿಕೆಗಳಿಗೆ ನೀಡಿದವರಲ್ಲ. ತಮ್ಮ ಚಿತ್ರದ ಪ್ರೀಮಿಯರ್ ಷೋಗಳಿಗೂ ಅವರು ಪತ್ರಕರ್ತರನ್ನು ಆಹ್ವಾನಿಸುತ್ತಿರಲಿಲ್ಲ. ಪತ್ರಿಕೆಗಳು ತಮ್ಮ ಚಿತ್ರಕ್ಕೆ ಪ್ರಚಾರ ನೀಡುವ ಬದಲು ಟಿವಿ ಚಾನೆಲ್‌ಗಳು ಪ್ರಚಾರ ಮಾಡಿದರೆ ಸಾಕು ಎಂಬ ಮನೋಭಾವ ಅವರಿಬ್ಬರದ್ದಾಗಿತ್ತು. ಜೊತೆಗೆ ಪತ್ರಿಕೆಗಳ ಕಟುವಾದ ವಿಮರ್ಶೆ ಮತ್ತು ಬರವಣಿಗೆಗಳಿಂದ ಚಿತ್ರದ ಗಳಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದು ಸಹ ಅವರ ವಾದವಾಗಿತ್ತು.

ಆದರೆ ಇದೀಗ ಆ ವಾದವನ್ನು ಅವರೇ ಬದಿಗಿಟ್ಟಿದ್ದಾರೆ. ಮೊನ್ನೆ ರಾಕ್‌ಲೈನ್ ನಿರ್ಮಾಣದ ಯೋಗರಾಜ್ ಭಟ್ ನಿರ್ದೇಶನದ 'ಮನಸಾರೆ' ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. ಅದರ ಬೆನ್ನಿಗೆ ನಾಣಿ ತಮ್ಮ ಪುತ್ರ ಪಂಕಜ್ ನಟಿಸಿರುವ 'ಚೆಲುವಿನ ಚಿಲಿಪಿಲಿ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭವನ್ನು ಪತ್ರಕರ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಸಿದರು.

ಅಂತೂ-ಇಂತೂ ಪ್ರಿಂಟ್ ಮಾಧ್ಯಮ ಚಿರಾಯು ಎಂಬುದು ಅವರಿಗೆ ಗೊತ್ತಾಗಿದ್ದು ಸಂತೋಷ.

'ಕಬಡ್ಡಿ'ಯಲ್ಲಿ ಕಾಲೆಳೆದುಕೊಂಡವರು!




ಕಿಶೋರ್

'ಕಬಡ್ಡಿ' ಚಿತ್ರದ ನಿರ್ದೇಶಕ ನರೇಂದ್ರಬಾಬು ಮತ್ತು ನಟ-ನಿರ್ಮಾಪಕ ಕಿಶೋರ್ ನಡುವಿನ ಕಾಲೆಳೆಯುವ ಆಟ ಮೊನ್ನೆ ಕ್ಲೈಮ್ಯಾಕ್ಸ್ ತಲುಪಿತು.

ಕಿಶೋರ್ ತನ್ನ ಚಿತ್ರದ ಕತೆಯನ್ನು ತಮಿಳಿಗೆ ಕದ್ದುಕೊಂಡೊಯ್ದು ಆ ಚಿತ್ರದಲ್ಲಿ ನಟಿಸುವ ಮುಖಾಂತರ ತನ್ನ ಚಿತ್ರವನ್ನು 'ಫಿನಿಶ್' ಮಾಡಿದ್ದಾರೆ ಎಂದು ನಿರ್ದೇಶಕ ನರೇಂದ್ರ ಬಾಬು ಚಿತ್ರೀಕರಣದ ಸಂದರ್ಭದಲ್ಲಿ ಆರೋಪ ಮಾಡಿದ್ದರು. ಅಷ್ಟೇ ಅಲ್ಲ, ಚಿತ್ರ ಬಿಡುಗಡೆಯಾಗುವತನಕ ಅನೇಕ ವೇದಿಕೆಗಳಲ್ಲಿ ಅವರು ಈ ಆರೋಪವನ್ನು ಪುನರುಚ್ಚರಿಸಿದ್ದರು.

ಆ ಎಲ್ಲ ಸಂದರ್ಭಗಳಲ್ಲೂ ಕಿಶೋರ್ ಮೌನಕ್ಕೆ ಶರಣಾಗಿದ್ದರಿಂದ ಎಲ್ಲರಲ್ಲೂ ಈ ಪ್ರಸಂಗದಲ್ಲಿ ನಿಜವಾಗಲೂ ಕಿಶೋರ್ 'ವಿಲನ್' ಆಗಿರಬಹುದು ಎಂಬ ಗುಮಾನಿ ಮೂಡಿತ್ತು, ಒಂದು ಸಂದರ್ಭದಲ್ಲಂತೂ "ನಾನು ತಮಿಳು 'ಕಬಡ್ಡಿ'ಯಲ್ಲಿ ನಟಿಸುತ್ತಿರುವುದು ನಿಜ. ಆ ಚಿತ್ರದಲ್ಲೂ ನನ್ನದು ಕೋಚ್ ಪಾತ್ರ ಎಂಬುದೂ ನಿಜ. ಆದರೆ ಆ ಕಥೆಗೂ ಈ ಕಥೆಗೂ ಅಜಗಜಾಂತರ ವ್ಯತ್ಯಾಸವಿದೆ" ಎಂದು ಕಿಶೋರ್ ಹೇಳಿದ್ದರು. ಅಷ್ಟೇ ಅಲ್ಲ, "ನಾನು ಕೂಡಾ ಕನ್ನಡದ 'ಕಬಡ್ಡಿ' ಚಿತ್ರದ ಸಹನಿರ್ಮಾಪಕ. ನನ್ನ ಚಿತ್ರವನ್ನು ನಾನೇ ಕೊಲ್ಲುತ್ತೇನೆಯೇ?" ಎಂದು ಬೇಸರದಿಂದ ಪ್ರಶ್ನಿಸಿದ್ದರು. ಆದರೂ ಬಹಳಷ್ಟು ಜನ ನರೇಂದ್ರಬಾಬುರವರ ಮಾತನ್ನೇ ನಂಬಿದ್ದರು.

ಮೊನ್ನೆ ಕನ್ನಡದ 'ಕಬಡ್ಡಿ' ರಿಲೀಸ್ ಆಗಿ ಡಬ್ಬ ಸೇರಿದ ನಂತರ ಕಿಶೋರ್ ಸಿನಿಮಾ ಪತ್ರಕರ್ತರಿಗಾಗಿ ತಮಿಳು 'ಕಬಡ್ಡಿ'ಯ ವಿಶೇಷ ಪ್ರದರ್ಶನವನ್ನು ಏರ್ಪಡಿಸಿದ್ದರು. ಸಿನಿಮಾ ನೋಡಿದ ನಂತರ ಕಿಶೋರ್ ಹೇಳಿದ್ದು ಇಷ್ಟೇ: "ನಾನು ಈಗ ಏನನ್ನೂ ಹೇಳುವುದಿಲ್ಲ, ನೀವು ಎರಡೂ ಸಿನಿಮಾವನ್ನು ನೋಡಿದ್ದೀರಿ. ನಾನು ಇದರ ಕಥೆಯನ್ನು ಕಳ್ಳತನ ಮಾಡಿದ್ದೇನೆಯೇ ಎಂದು ನೀವೇ ತೀರ್ಮಾನ ಮಾಡಿಕೊಳ್ಳಿ" ಎಂದು ಜಂಟಲ್‌ಮೆನ್ ತರಹ ಮಾತು ಮುಗಿಸಿದರು.



ನರೇಂದ್ರಬಾಬು

ತಮಿಳು 'ಕಬಡ್ಡಿ'ಯನ್ನು ನೋಡಿದ ನಂತರ ಈ ಹಿಂದೆ ಕಿಶೋರ್ ಖಳನಾಯಕನ ತರ ಕಂಡಿದ್ದರೆ ಈಗ ನರೇಂದ್ರಬಾಬು ಖಳನಾಗಿ ಕಾಣಿಸುತ್ತಿದ್ದಾರೆ. ಯಾಕೆಂದರೆ ತಮಿಳು 'ಕಬಡ್ಡಿ'ಗೂ ಕನ್ನಡದ 'ಕಬಡ್ಡಿ'ಗೂ ಅಜಗಜಾಂತರದ ವ್ಯತ್ಯಾಸವಿದೆ. ತಮಿಳಿನಲ್ಲಿ ನಾಯಕ ಕ್ಲೈಮ್ಯಾಕ್ಸ್‌ನಲ್ಲಿ ಸಾವನ್ನಪ್ಪಿ ಚಿತ್ರ ದುರಂತ ಅಂತ್ಯವನ್ನು ಕಾಣುತ್ತದೆ. ಇನ್ನೊಂದು ಅಂಶ" ಅಲ್ಲಿ ನಾಯಕ ನಿಧನ ಹೊಂದಿದ್ದರೂ ಚಿತ್ರ ಗೆದ್ದಿತ್ತು, ಆದರೆ ಕನ್ನಡದ ಚಿತ್ರದಲ್ಲಿ ಕತೆ ಸುಖಾಂತ್ಯ ಕಂಡರೂ ಚಿತ್ರ ಮುಗ್ಗರಿಸಿತು. ಎರಡೂ ಚಿತ್ರಗಳ ಕಥಾವಸ್ತು 'ಕಬಡ್ಡಿ' ಎಂಬುದು ನಿಜವಾದರೂ ಚಿತ್ರದ ಕಥಾಹಂದರ-ನಿರೂಪಣೆ ಎಲ್ಲವೂ ವಿಭಿನ್ನವಾಗಿದೆ.

ಕೊನೆಗೆ ಕಿಶೋರ್ ಅವರು "ನಾನು ಕನ್ನಡದ 'ಕಬಡ್ಡಿ'ಯ ಸಹನಿರ್ಮಾಪಕನಾಗಿ ಅದಕ್ಕಾಗಿ 38 ಲಕ್ಷಗಳ ಬಂಡವಾಳ ಹೂಡಿದ್ದೆ, ಅಷ್ಟು ಹಣವೂ ಹೋಯ್ತು, ನನ್ನ ಮಾನ-ಮರ್ಯಾದೆಯೂ ಬೀದಿಪಾಲಾಗಿದೆ. ನಾನು ಕಳ್ಳತನ ಮಾಡಿಲ್ಲ ಎಂಬ ಏಕೈಕ ಕಾರಣಕ್ಕಾಗಿಯೇ ಈ ಚಿತ್ರದ ಪ್ರದರ್ಶನ ಏರ್ಪಡಿಸಿದೆ" ಎಂದು ಮಾರ್ಮಿಕವಾಗಿ ಹೇಳಿದರು.

ವಾಸ್ತವವಾಗಿ 'ಕಂಠಿ' ಚಿತ್ರದ ಮುಖಾಂತರ ಕಿಶೋರ್‌ರನ್ನು ಖಳನಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸಿದವರೇ ನರೇಂದ್ರಬಾಬು. ಅವರಿಬ್ಬರ ಸ್ನೇಹದ ಫಲವಾಗಿಯೇ 'ಬಂದಾಯ ಮತ್ತು ವಿಜ್ಞಾರ' ಸಂಸ್ಥೆಯ ಮುಖಾಂತರ ಇವರಿಬ್ಬರೂ 'ಕಬಡ್ಡಿ' ಆಡಲು ಹೊರಟಿದ್ದು. ಅಷ್ಟೇ ಅಲ್ಲ, 'ಆ ದಿನಗಳು' ಚಿತ್ರ ನಿರ್ದೇಶನದ ಅವಕಾಶ ನರೇಂದ್ರ ಬಾಬು ಕೈತಪ್ಪಿದಾಗ ಸ್ನೇಹಿತನಿಗಾಗಿ ಕಿಶೋರ್ ಕೂಡಾ ಆ ಚಿತ್ರದಲ್ಲಿ ನಟಿಸದೇ ಹೊರಬಂದಿದ್ದರು. ಅಷ್ಟೊಂದು ಗಾಢವಾದ ಸ್ನೇಹ ಅವರಿಬ್ಬರ ನಡುವೆ ಇತ್ತು. ಆದರೆ ಈಗ ಈ 'ಕಬಡ್ಡಿ' ಆಟ ಅವರಿಬ್ಬರ ಸ್ನೇಹಕ್ಕೆ ಕುತ್ತು ತಂದಿದೆ.

● ಶೆಣೈ

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 12-08-2009, RNI No. KARKAN2005/14



ಕಾಪಿಕ್ಯಾಟ್‌ಗಳಾದ ಗಣೇಶ್-ಪೂಜಾ

ಪೂಜಾ ಗಾಂಧಿಯನ್ನು ಗೋಲ್ಡನ್ ಸ್ಟಾರ್ ಗಣೇಶ್ ಅನುಕರಣೆ ಮಾಡುತ್ತಿದ್ದಾರೋ? ಅಥವಾ ಗಣೇಶ್‌ನನ್ನು ಪೂಜಾ ಅನುಕರಣೆ ಮಾಡುತ್ತಿದ್ದಾರೋ? ಇಂತಹ ಒಂದು ಜಿಜ್ಞಾಸೆ ಈಗ ಗಾಂಧಿನಗರದಲ್ಲಿ ಹುಟ್ಟಿದೆ. ಇದಕ್ಕೆ ಕಾರಣವೂ ಇದೆ...


ಮೊನ್ನೆಮೊನ್ನೆ ಗಣೇಶ್ ಸಹೋದರ ಮಹೇಶ್ ನಾಯಕನಾಗಿ ನಟಿಸುತ್ತಿರುವ 'ಗುಬ್ಬಿ' ಎಂಬ ಚಿತ್ರ ಯಾವುದೇ ಸದ್ದುಗದ್ದಲವಿಲ್ಲದೇ ಸೆಟ್ಟೇರಿದೆ. ಛಾಯಾಗ್ರಾಹಕ ಅಣಜಿ ನಾಗರಾಜ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಪೂಜಾ ಗಾಂಧಿಯ ತಂಗಿ ರಾಧಿಕಾ ಗಾಂಧಿ ನಾಯಕಿಯಾಗಿ ನಟಿಸಿದ ಕೂಡಲೇ ಗಣೇಶ್ ಕೂಡಾ ತನ್ನ ಸಹೋದರ ಮಹೇಶನನ್ನು ನಾಯಕ ಮಾಡಬೇಕೆಂದು ನಿರ್ಧರಿಸಿದ್ದರು ಎಂಬುದು ಗಾಂಧಿನಗರಿಗಳ ಮಾತು.



ಇನ್ನು ಗಣೇಶ್ ತಮ್ಮ ಸ್ವಂತ ಬ್ಯಾನರಿನಲ್ಲಿ ಚಿತ್ರವೊಂದನ್ನು ಆರಂಭಿಸಿದ ಕೂಡಲೇ ಪೂಜಾ ಕೂಡಾ ಸ್ವಂತ ನಿರ್ಮಾಣ ಸಂಸ್ಥೆಯನ್ನು ಆರಂಭಿಸಲು ಹೊರಟಿರುವುದು ಕುತೂಹಲಕಾರಿಯಾಗಿದೆ.

ಈ ತರ್ಲೆ ಹೋಲಿಕೆಗಳ ಹೊರತಾಗಿ ಮಾತನಾಡುವುದಾದರೆ ಗಣೇಶ್ ಸಹೋದರ ಮಹೇಶ್ ಬಗ್ಗೆ ಗಾಂಧಿನಗರದ ಜನತೆಗೆ ಅಪಾರವಾದ ನಿರೀಕ್ಷೆ ಇದೆ. ಈ ಹುಡುಗನನ್ನು ನಾಯಕನನ್ನಾಗಿ ಮಾಡಬೇಕೆಂದು ಅನೇಕ ನಿರ್ಮಾಪಕ ಮತ್ತು ನಿರ್ದೇಶಕರು ಪ್ರಯತ್ನಿಸಿದ್ದೂ ಉಂಟು. ಕೊನೆಗೆ ಅಣಜಿ ನಾಗರಾಜ್‌ಗೆ ಈ ಅವಕಾಶ ದೊರಕಿದೆ. ಗಣೇಶನ ನಾಮಬಲದಿಂದ ಚಿತ್ರರಂಗಕ್ಕೆ ಎಂಟ್ರಿಯಾಗುತ್ತಿರುವ ಮಹೇಶ್ ತನ್ನ ಚೊಚ್ಚಲ ಚಿತ್ರದಲ್ಲಿ ಜಯಭೇರಿ ಬಾರಿಸಿದರೆ ಗಾಂಧಿನಗರದಲ್ಲಿ ಆತನಿಗೆ ಉಜ್ವಲ ಭವಿಷ್ಯ ಕಾದಿದೆ ಎಂಬುದು ಮಾತ್ರ ನಿಜ.

ಪರಪ್ಪನ ಅಗ್ರಹಾರದಿಂದ 'ಹರಿಶ್ಚಂದ್ರ ಘಾಟ್'ಗೆ



'ಮುಸ್ಸಂಜೆಯ ಗೆಳತಿ' ಎಂಬ ಚಿತ್ರದಲ್ಲಿ ತನ್ನ ಮಗಳೊಂದಿಗೇ ನಾಯಕನಾಗಿ ನಟಿಸಿ ಪ್ರತಿಯೊಬ್ಬ ಕನ್ನಡ ಕಲಾಭಿಮಾನಿಗಳಿಂದ ಕ್ಯಾಕರಿಸಿ ಉಗಿಸಿಕೊಂಡ ಶ್ರೀಮಾನ್ ಬಿ.ಪಿ. ಶ್ರೀನಿವಾಸ್‌ರವರು ಹಳೇ ಕೇಸೊಂದರ ಸಂಬಂಧ ಅರೆಸ್ಟಾಗಿ, ಮೊನ್ನೆಯಷ್ಟೇ ಪರಪ್ಪನ ಅಗ್ರಹಾರದಿಂದ ಬಿಡುಗಡೆಯಾಗಿ ಬಂದಿದ್ದಾರೆ. ಹಾಗೆ ಬಂದವರೇ 'ಹರಿಶ್ಚಂದ್ರ ಘಾಟ್'ಗೆ ಹೋಗಿಬಿಟ್ಟಿದ್ದಾರೆ!

ಏನಪ್ಪ ಆಯ್ತು ಈ ಶ್ರೀನಿವಾಸನಿಗೆ... ಎಂದು ಅನ್ಯಥಾ ಭಾವಿಸಬೇಡಿ!

ಶ್ರೀನಿವಾಸ್ ಈಗ ತನ್ನದೇ ನಿರ್ಮಾಣದ 'ಹರಿಶ್ಚಂದ್ರ ಘಾಟ್' ಎಂಬ ಚಿತ್ರದ ನಿರ್ದೇಶಕ ವೆಂಕಟೇಶ್ ಪಂಚಾಂಗನನ್ನು ಹೊರದಬ್ಬಿ ತಾನೇ ಈಗ ನಿರ್ದೇಶಕನಾಗಿದ್ದಾನಂತೆ.

ಒಟ್ಟಾರೆ ಈ ಶ್ರೀನಿವಾಸನ ಕರ್ಮಕಾಂಡಕ್ಕೆ ಇನ್ನೆಷ್ಟು ಜನ 'ಹರಿಶ್ಚಂದ್ರ ಘಾಟ್' ಸೇರುತ್ತಾರೋ? ಸಾಕ್ಷಾತ್ ಸತ್ಯಹರಿಶ್ಚಂದ್ರನೇ ಹೇಳಬೇಕು!



ನವರಸನಾಯಕನ ಹತ್ತನೇ ರಸ

ನವರಸನಾಯಕ ಜಗ್ಗೇಶ್ ಅವರ ವೃತ್ತಿ ಜೀವನದ 25ನೇ ವರ್ಷದ ಕಾಣಿಕೆಯಾಗಿ ಹೊರಬಂದಿರುವ 'ಎದ್ದೇಳು ಮಂಜುನಾಥ' ಚಿತ್ರ ತುಂಬಿದ ಪ್ರದರ್ಶನವನ್ನು ಕಾಣುತ್ತಿರುವ ಸಂದರ್ಭದಲ್ಲೇ ಅವರು ಒಂದು ಬಾಂಬ್ ಸ್ಫೋಟಿಸಿದ್ದಾರೆ. ಸದ್ಯಕ್ಕೆ ಸಿನಿಮಾರಂಗದಿಂದ ದೂರವಿದ್ದು ರಾಜಕೀಯದಲ್ಲಿ ಸಖತ್ ಬಿಜಿಯಾಗಿರುವ ಜಗ್ಗೇಶ್ ಇನ್ನು ಮುಂದೆ ಚಿತ್ರಗಳಲ್ಲಿ ನಟಿಸುವುದಿಲ್ಲ ಎಂದೇ ಗಾಂಧಿನಗರದ ಜನ ಭಾವಿಸಿದ್ದರು. ಆದರೆ ಅವರೆಲ್ಲರ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿರುವ ಜಗ್ಗೇಶ್ ನಟನೆಗಿಂತ ಒಂದು ಹೆಜ್ಜೆ ಮುಂದೆಹೋಗಿ ಚಿತ್ರವೊಂದನ್ನು ನಿರ್ದೇಶಿಸುವ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡ ಚಿತ್ರರಂಗ ಕಂಡ ಅಪರೂಪದ ಪ್ರತಿಭೆಗಳಲ್ಲಿ ಜಗ್ಗೇಶ್ ಒಬ್ಬರು. ಚಿಕ್ಕಪುಟ್ಟ ಪಾತ್ರಗಳ ಮುಖಾಂತರ ಗಮನ ಸೆಳೆದ ಜಗ್ಗೇಶ್ ನಿಧಾನವಾಗಿ ಹಾಸ್ಯನಟನಾಗಿ ಬಡ್ತಿಪಡೆದು ಗಾಂಧಿನಗರದಲ್ಲಿ ಗಟ್ಟಿಯಾಗಿ ತಳವೂರಿದರು. ಅನಂತರ ಧೈರ್ಯವಾಗಿ ನಾಯಕನಟನ ಸ್ಥಾನಕ್ಕೂ ಲಗ್ಗೆ ಹಾಕಿ ಅದರಲ್ಲೂ ಗೆದ್ದರು. ಕೊನೆಗೆ ತನಗೆ ಬೇಕಾದ ಪಾತ್ರಗಳನ್ನು ಆಯ್ಕೆ ಮಾಡಿ ಚಿತ್ರ ನಿರ್ಮಿಸುವ ಮಟ್ಟಕ್ಕೂ ಜಗ್ಗೇಶ್ ಎದ್ದು ನಿಂತರು. ಇದೀಗ ನಿರ್ದೇಶನದ ಬಗ್ಗೆಯೂ ಆಸಕ್ತಿ ತೋರಿದ್ದಾರೆ.

ಬಾಡಿಲ್ಯಾಂಗ್ವೇಜ್ ಮತ್ತು ಡೈಲಾಗ್ ಡೆಲಿವರಿಯೇ ಆತನ ಆಸ್ತಿ. ಆದರೆ ತನ್ನ ಈ ಪ್ರತಿಭೆಯನ್ನು ಕನ್ನಡ ನಿರ್ದೇಶಕರು ಸಮರ್ಥವಾಗಿ ಬಳಸಿಕೊಂಡಿಲ್ಲ ಎಂಬ ಆಪಾದನೆ ಜಗ್ಗೇಶ್‌ರದ್ದು. ಈ ಕಾರಣಕ್ಕಾಗಿಯೇ ಅನೇಕ ಬಾರಿ ಜಗ್ಗೇಶ್ ಮತ್ತು ನಿರ್ದೇಶಕರ ನಡುವೆ ಜಟಾಪಟ ನಡೆದಿದ್ದವು. ಇನ್ನು ನಿರ್ಮಾಪಕರ ಜೊತೆಗಿನ ಜಗ್ಗೇಶ್ ಬಡಿದಾಟಗಳಿಗೆ ದೊಡ್ಡ ಇತಿಹಾಸವೇ ಇದೆ.

ಈಗ ಇದನ್ನೆಲ್ಲಾ ಬದಿಗಿಟ್ಟು ತಾವೇ ಚಿತ್ರ ನಿರ್ದೇಶಿಸಲು ಜಗ್ಗೇಶ್ ಹೊರಟಿದ್ದಾರೆ. ಇತರರು ಹೊಮ್ಮಿಸಲಾಗದ ತಮ್ಮ ಪ್ರತಿಭೆಯನ್ನು ಅವರೇ ಅದೆಷ್ಟು ಪ್ರಮಾಣದಲ್ಲಿ ಹೊಮ್ಮಿಸಬಲ್ಲರು ಎಂದು ಕಾದು ನೋಡಬೇಕಿದೆ.

ನಿರ್ಮಾಪಕಿ ಆಗುವ ಹಾದಿಯಲ್ಲಿ...



ಕನ್ನಡ ಚಿತ್ರರಂಗದಲ್ಲಿ ಈಗ 'ಅದೃಷ್ಟದ ಕುದುರೆ' ಎಂದೇ ಪರಿಗಣಿಸಲಾಗಿರುವ ನಟಿ ಪೂಜಾ ಗಾಂಧಿ ಈಗ ಸ್ವತಃ ತನ್ನ ಅದೃಷ್ಟದ ಪರೀಕ್ಷೆಯನ್ನು ಮಾಡಲು ಹೊರಟಿರುವ ಸುದ್ದಿ ಬಂದಿದೆ.

ಎಲ್ಲವೂ ನಿಗದಿಪಡಿಸಿರುವಂತೆ ನಡೆದರೆ ಡಿಸೆಂಬರ್ ತಿಂಗಳಲ್ಲಿ ಈಕೆಯ ನಿರ್ಮಾಣದ ಚಿತ್ರ ಸೆಟ್ಟೇರಲಿದೆ. ಈ ಬಗ್ಗೆ ಆಕೆ ಇನ್ನೂ ಎಲ್ಲೂ ಯಾವುದೇ ವಿವರಗಳನ್ನು ನೀಡಿಲ್ಲವಾದರೂ ನಮ್ಮ ಪತ್ರಿಕೆಗೆ ಸಿಕ್ಕಿದ ಮಾಹಿತಿ ಈ ರೀತಿ ಇದೆ:

ಪೂಜಾ ಗಾಂಧಿಗೆ ಹತ್ತು ವರ್ಷಗಳ ಹಿಂದೆ ಮಾಲಾಶ್ರೀ ದ್ವಿಪಾತ್ರದಲ್ಲಿ ನಟಿಸಿದ 'ರಾಣಿ-ಮಹಾರಾಣಿ' ತರಹದ ಚಿತ್ರದಲ್ಲಿ ನಟಿಸುವ ಆಸೆ. ಆದರೆ ಅಂತಹ ಪಾತ್ರ ಈತನಕ ಆಕೆಗೆ ಸಿಕ್ಕಿಲ್ಲದ ಕಾರಣ ಈಗ ಆಕೆ ಅದೇ ತರಹದ ಕತೆಯನ್ನು ಬರೆಸುತ್ತಿದ್ದಾರೆ. ಈ ಚಿತ್ರವನ್ನು ತಮಿಳುನಾಡಿನ ಒಬ್ಬ ಯುವ ನಿರ್ದೇಶಕ ನಿರ್ದೇಶಿಸಲಿದ್ದಾನೆ ಎಂದೂ ಖಾತ್ರಿಯಾಗಿದೆ.

ಸ್ವಲ್ಪ ಹಿರೋಯಿಸಂ, ಸ್ವಲ್ಪ ರೋಮ್ಯಾಂಟಿಸಂ ಇರುವ ಪಾತ್ರದಲ್ಲಿ ಪೂಜಾ ತನ್ನ ಅಭಿಮಾನಿಗಳನ್ನು ರಂಜಿಸಲು ಹೊರಟಿದ್ದಾರೆ. ಈ ಚಿತ್ರದಲ್ಲಿ ತನ್ನ ಸಹೋದರಿ ರಾಧಿಕಾ ಗಾಂಧಿಗೂ ಒಂದು ಪ್ರಮುಖವಾದ ಪಾತ್ರವನ್ನು ಪೂಜಾ ಮೀಸಲಿಟ್ಟಿದ್ದಾರಂತೆ. ಒಟ್ಟಾರೆಯಾಗಿ ಒಂದು ಹೊಸ ಸಾಹಸಕ್ಕೆ ಪೂಜಾ ರೆಡಿಯಾಗಿದ್ದಾರೆ.

'ಮುಂಗಾರು ಮಳೆ' ಯಶಸ್ಸಿನ ನಂತರ ಅದೃಷ್ಟದ ಒಂದೊಂದು ಮೆಟ್ಟಲೇರಿ ಬಂದ ಪೂಜಾ ಈಗ ನಿಜವಾದ ಅಗ್ನಿಪರೀಕ್ಷೆಯನ್ನು ಎದುರಿಸುವ ಸ್ಥಿತಿ ತಲುಪಿದ್ದಾರೆನ್ನಬಹುದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44